1927

ಶಿವಾನುಭವ ಗ್ರಂಥ ಮಾಲಾ ನಂ॥ ೧೩

# ಘನಲಿಂಗನ ವಚನಗಳು.

B/106

ಸಂಪಾದಕರು
ರಾ॥ ಸಾ॥ ಫ. ಗು. ಹಳಕಟ್ಟಿ
ಬಿ. ಎ. ಎಲ್ ಎಲ್, ಬಿ. ವಕೀಲ

ವಿಜಾಪುರ.
೧೯೨೭

ಬೆಲೆ ೬ ಆಣೆ.

SHRI SHIDDHESHWAR LIBRARY BIJAPUR
33:16Gha
Hal
6236
The Vijay College LIBRARY. VIJAY COLLEGE BIJAPUR.

030

ಶಿವಾನುಭವ ಗ್ರಂಥಮಾಲಾ ನಂ॥ ೧೩

ACC.NO
030

# ಘನಲಿಂಗನ ವಚನಗಳು.

ಸಂಪಾದಕರು

ರಾ॥ ಸಾ॥ ಫ. ಗು. ಹಳಕಟ್ಟಿ
ಬಿ. ಎ. ಎಲ್ ಎಲ್, ಬಿ. ವಕೀಲ.

SHRI SHIDDHESHWAR
LIBRARY
BIJAPUR

ಗ್ರಂಥಾಲಯ
ವಿಜಾಪುರ.

ಬೆಲೆ ೬ ಆಣೆ.

The Vijay College
LIBRARY,
VIJAY COLLEGE,
BIJAPUR.

6236

# ಪ್ರಸ್ತಾವನೆ.

ಘನಲಿಂಗನು ತೋಂಟದಾರ್ಯನ ಶಿಷ್ಯನೆಂದು ಈ ಗ್ರಂಥದಲ್ಲಿಯ ೧೨ ನೇ ವಚನದಿಂದ ತಿಳಿಯುತ್ತದೆ. ಆದ್ದರಿಂದ ಆತನ ಕಾಲವು ೧೫ ನೇ ಶತಮಾನದ ಅಂತ್ಯಭಾಗವಾಗಿರಬಹುದು. ವಿರುಪಾಕ್ಷ ಪಂಡಿತನು ತನ್ನ ಚನ್ನಬಸವ ಪುರಾಣದಲ್ಲಿ ಈತನು ವಿರಕ್ತ ತೋಂಟದಾರ್ಯನ ಶಿಷ್ಯನೆಂದು ಉಲ್ಲೇಖಿಸಿದ್ದಾನೆ. ಅದೇ ಮೇರೆಗೆ ಸಿದ್ಧೇಶ್ವರ ಪುರಾಣದಲ್ಲಿಯೂ ಇವನ ಉಲ್ಲೇಖವು ಇದೆ. ತೋಂಟದಾರ್ಯನ ಕಾಲಕ್ಕೆ ಈತನು ವೀರಶೈವ ಪಂಡಿತರಲ್ಲಿ ಅತ್ಯಂತ ಪ್ರಸಿದ್ಧಿಯನ್ನು ಹೊಂದಿದ್ದನು. ಘನಲಿಂಗನು ತಾನು ಸುತ್ತೂರು ಸಿಂಹಾಸನಕ್ಕೆ ಹೊಂದಿದವನೆಂದು ಈ ಗ್ರಂಥದಲ್ಲಿ ಹೇಳಿಕೊಂಡಿದ್ದಾನೆ. ಆದ್ದರಿಂದ ಅವನು ಇದೇ ಗ್ರಾಮದವನಾಗಿರಬಹುದು. ಆದರೆ ಈ ಸುತ್ತೂರು ಎಲ್ಲಿ ಇದೆ ಎಂಬದು ನಮಗೆ ಇನ್ನೂ ತಿಳಿದಿಲ್ಲ. ಇವನ ವಚನಗಳು ದೊಡ್ಡವಿದ್ದರೂ ಅವುಗಳ ಭಾಷೆಯು ಉಚ್ಚತರದ್ದಿರುತ್ತದೆ. ಅವನು ತನ್ನ ವಿಚಾರಗಳನ್ನು ಬಹಳ ಪ್ರೌಢರೀತಿಯಿಂದ ವಿಸ್ತರಿಸಿದ್ದಾನೆ. ಇವುಗಳಲ್ಲಿ ಷಟ್ಸ್ಥಲ ಶಾಸ್ತ್ರದ ಮುಖ್ಯ ಮರ್ಮಗಳು ಸಂಕ್ಷೇಪವಾಗಿಯೂ ವಿಶದವಾಗಿಯೂ ವಿವರಿಸಲ್ಪಟ್ಟಿರುತ್ತವೆ. ಇವನು ಮಾಡಿದ ಈ ಗ್ರಂಥಕ್ಕೆ ವಚನ ವಾಙ್ಮಯದಲ್ಲಿ ಒಂದು ಉಚ್ಚಸ್ಥಾನವನ್ನು ಕೊಡಬಹುದು. ಈಗಿನ ಪ್ರತಿಯಲ್ಲಿ ಕಠಿಣ ಶಬ್ದಗಳ ಅರ್ಥವೂ ಪ್ರತಿಯೊಂದು ವಚನದ ಕೆಳಗೆ ಕೊಡಲ್ಪಟ್ಟಿರುತ್ತದೆ.

ಈಗಿನ ಪ್ರತಿಯನ್ನು ಶಿ॥ ಮೂ॥ ಬುದ್ದಯ್ಯ ಪುರಾಣಿಕ, ಮತ್ತು ಶ್ರೀ ಶಿವಯೋಗ ಮಂದಿರ ವ್ಯವಸ್ಥಾಪಕ ಇವರು ಕಳಿಸಿದ ಹಸ್ತಲಿಖಿತ ಪ್ರತಿಗಳು ಮತ್ತು ನನ್ನ ಹತ್ತರವಿದ್ದ ಒಂದು ಪ್ರತಿ ಇವುಗಳ ಮೇಲಿಂದ ಸಿದ್ಧಪಡಿಸಿರುತ್ತೇನೆ. ಮೇಲ್ಕಂಡ ಉಭಯತರು ನನಗೆ ಈ ಗ್ರಂಥದ ಪ್ರತಿಗಳನ್ನು ಕಳಿಸಿ ಕೊಟ್ಟದ್ದಕ್ಕೆ ನಾನು ಅವರ ಆಭಾರಿಯಾಗಿದ್ದೇನೆ.

ತಾ. ೧೩-೯-೨೭
ವಿಜಾಪುರ.

ಫ. ಗು. ಹಳಕಟ್ಟಿ.

The Vijay College
LIBRARY,
VIJAY COLLEGE,
BIJAPUR.

# ಘನಲಿಂಗನ ವಚನಗಳು.

೧ ಎನ್ನಾತ್ಮನದೊಂದು ಅರಸುತನದ ಅನ್ಯಾಯವ ಕೇಳಯ್ಯ ಗುರುವೇ. ಪಂಚಭಕ್ಷ್ಯ ಪರಮಾಮೃತವ ಸದಾ ದಣಿಯಲುಂಡು, ಒಂದು ದಿನ ಸವಿಯೂಟ ತಪ್ಪಿದರೆ, ಹಲವ ಹಂಬಲಿಸಿ ಹಲ್ಲುಗಿರಿದು ಎನ್ನ ಕೊಂದು ಕೂಗುತ್ತಿದೆ ನೋಡಾ. ಶ್ವಪಚನುತ್ತಮನ ಕೂಡೆ ಸಂಕೋಲೆಯ ನಿಕ್ಕುವರೆ ಅಯ್ಯಾ? ಕಲಿಸಿ ಕಲಿಸಿ ಕೈಬೆರಳು ಮೊಂಡಾದವು. ಅಗಿದಗಿದು ಹಲ್ಲು ಚಪ್ಪಟಾದವು. ಉಂಡುಂಡು ಬಾಯಿ ಬೀಡಾಯಿತ್ತು. ತನುಹಳದಾಗಿ ಅಲ್ಲಿಗಲ್ಲಿಗೆ ಕಣ್ಣು ಪುಟ್ಟಿತ್ತು. ಮನ ಹೊಸತಾಗಿ ಹನ್ನೆರಡು ವರುಷದ ರಾಜಕುಮಾರನಾದೆನು. ಇನ್ನೇವೆ ನಿನ್ನೇವೆನಯ್ಯಾ? ಎನ್ನ ಕೇಡಿಂಗೆ ಕಡೆ ಇಲ್ಲ. ಕಾಯವಿಕಾರವೆಂಬ ಕತ್ತಲೆಗವಿಯಿತ್ತು. ಮನೋವಿಕಾರವೆಂಬ ಮಾಯೆ ಸೆರೆವಿಡಿದಳು. ಇಂದ್ರಿಯ ವಿಕಾರವೆಂಬ ಹುಚ್ಚು ನಾಯಿಗಳು ಕಚ್ಚಿ ಕಚ್ಚಿ ಒದರುತ್ತಿವೆ. ಸಾವನ್ನಬರ ಸರಸ ಉಂಟೇ ಲಿಂಗವೆ? ಅನ್ಯಸಮಯದ ಗುಮ್ಮಟನ ಕೈವಿಡಿದೆತ್ತಿಕೊಂಡು, ನಿನ್ನ ಸಮಯದ ಶಿಶುವು ಬಾವಿಯಲ್ಲಿ ಬೀಳ್ವರೆ, ನೋಡುತಿರ್ಪರೆ ಕರುಣಿ? ಮುಕ್ತಿಗಿದು ಪಯಣವಲ್ಲ ತಂದೆ. ನೀನಿಕ್ಕಿದ ಮಾಯಾ ಸೂತ್ರಮಂ ಹರಿದು, ದಶೇಂದ್ರಿಯಂಗಳ ಗುಣವ ನಿವೃತ್ತಿಯಂ ಮಾಡಿ, ಅಂಗ ಭೋಗ ಆತ್ಮ ಭೋಗಂಗಳ ನಡಗಿಸಿ, ಲಿಂಗದೊಳು ಮನವ ನೆಲೆಗೊಳಿಸಿ ಎನ್ನ ಪಟದೊಳಗಣ ಚಿತ್ರದಂತೆ ಮಾಡಯ್ಯ, ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

ಕಿರಿ = ಹೊರತೆಗೆ; ಶ್ವಪಚ = ಹೊಲೆಯ; ಅಗಿ = ತಿನ್ನು; ಬೀಡು = ಮನೆ ಇನ್ನೇವೆ = ಇನ್ನೇನು ಮಾಡಲಿ? ಸಾವನ್ನಬರ = ಸಾಯುವವರೆಗೆ ಸಮಯ = ಸಮಾಜ, ಜಾತಿ; ಗುಮ್ಮಟ = ಕಲ್ಲು ಮೂರ್ತಿ, ಜಿನಪ್ರತುಮೆ; ಪಟ = ಅರಿವೆ.

೨. ಕಪಿ ಕಳ್ಳ ಕುಡಿದು ಕಡಲದಾಂಟುವೆನೆಂದು ಲಂಘಿಸಿ ನಡುನೀರಲ್ಲಿ ಬಿದ್ದು ಮೀನ ಮೊಸಳೆಗಾಹಾರವಾದಂತಾಯಿತ್ತಯ್ಯಾ ಎನ್ನ

ಬಾಳುವೆ. ಆದಿಯಲ್ಲಿ ನಿನ್ನ ಗರ್ಭಾಬ್ಧಿಯಲ್ಲಿ ಜನಿಸಿ, ನಿನ್ನ ನೆನಹಿಲ್ಲದ ಇಷ್ಟಲಿಂಗವನರಿಯದ ಕಷ್ಟ ಜೀವಿಗಳ, ಪ್ರಾಣಲಿಂಗವನರಿಯದ ಪರವ ಪಾತಕರ, ಭಾವಲಿಂಗವನರಿಯದ ಭವಕ್ಕೊಳಗಾದ ಹುಳುಮಾನವರ ತಂದೆ ತಾಯಿ ಬಂಧು ಬಳಗನೆಂದು ಭಾವಿಸಿದ ಬಲುಪಾತಕವೆನ್ನ ನಂಬ ಲೆದು, ಅನುರ್ದಪ್ಪಿ ಅಗಲದ ಕಾರಣ, ನಿಂದ ಠಾವಿಂಗೆ ನೀರ್ವಳಿವರಯ್ಯಾ. ಕುಳಿತ ಠಾವಿಂಗೆ ಹೋಮುವನಿಕ್ಕಿಸುವರಯ್ಯಾ. ನಾನು ಬಂದ ಬಟ್ಟೆಯೊ ಳಗೆ ಓರ್ವರು ಬಾರರಯ್ಯಾ. ಕಾಲ ನಾಳಿಂಗೆ ಕಾಲ್ದುಳಿಯಾದೆನಯ್ಯ. ಶುನಕ ಸೂಕರಾದಿಗಳ ಬಸಿರಲ್ಲಿ ಬರುವಂತೆ ಮಾಡಿತ್ತಯ್ಯ ಎನ್ನ ಮಾಯೆ. ಓರ್ವರಿಗೆ ಹುಟ್ಟಿ ಮತ್ತೋರ್ವರ ಅಪ್ಪ ಎಂಬ ನಾಣ್ನುಡಿಯ ದೃಷ್ಟ ಎನಗಾಯಿತ್ತಯ್ಯ ಗುರುವೆ. ಈ ದೋಷವಂ ಕರುಣದಿಂದ ಕಳೆದು, ಶುದ್ಧನಮಾಡಿ, ನಿನ್ನನೆ ಜನನಿ ಜನಕನೆಂದು, ನಿನ್ನ ಭಕ್ತರನೆ ಬಂಧು ಬಳಗವೆಂಬ ಸುಜ್ಞಾನವುಂ ಕೊಟ್ಟು, ಜಾಗ್ರತ್ ಸ್ವಪ್ನ ಸುಷುಪ್ತಿಯಲ್ಲಿ ನಿನ್ನತ್ತಲೆ ಸಮ್ಮುಖಮಾಡಿ ಅಕ್ಕರಿಂದೆ ರಕ್ಷಿಸುದಯ್ಯಾ ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

ಕಳ್ಳ = ಸಿಂದಿ; ಲಂಘಿಸು = ಜಿಗಿಯು; ಹುಳುಮಾನವ = ಕ್ಷುಲ್ಲಕ ಮನುಷ್ಯ; ಅಂಡಲೆ = ಒತ್ತು, ತೊಂದರೆ ಕೊಡು; ಅನುರ್ = ಹತ್ತಿಯಾಗಿರು, ಗಟ್ಟಿಯಾಗಿ ಹತ್ತು; ಅನುರ್ದಪ್ಪು = ಗಟ್ಟಿಯಾಗಿ ಅಪ್ಪು; ಶುನಕ = ನಾಯಿ; ಅಕ್ಕರು = ಪ್ರೀತಿ.

೩. ಕುನ್ನಿಗೆ ರನ್ನದ ಹಲ್ಲಣವ ಹಾಕಿದಂತೆ, ಹಂದಿಯ ತಂದು ಅಂದಣವನೇರಿಸಿದಂತೆ ಎನಗೊಲಿದು ಶಿವ ಲಾಂಛನವ ಕೊಟ್ಟ ಕಾರಣ ವೇನಯ್ಯ, ಗುರುವೆ? ನಾನು ಗುರು ಕೊಟ್ಟ ಇಷ್ಟಲಿಂಗವ ಮರೆದು ಅನ್ಯದೈವಕ್ಕೆರಗಿ ಲಿಂಗದ್ರೋಹಿಯಾದೆನಯ್ಯ. ಜಂಗಮವ ಕೆಡೆನುಡಿದೆ. ಕೈವಿಡಿದ ಸ್ತ್ರೀಯಳ ಕಡಿ ಖಂಡವ ಮಾಡಿದೆ. ಒಡನಾಡಿದ ಕಡುಗೂ ಪನನಿರಿದು ಕೊಂದೆ. ನಂಬಿದ ಹಳೆಯರ ಪ್ರಾಣಕ್ಕೆ ಮುನಿದೆ. ಪಶು ವಿನ ಶಿಶುವ ತಲೆಯೊಡೆಯನಿಕ್ಕಿದೆ. ಪರಧನವ ಕದ್ದೆ. ಪರಸ್ತ್ರೀಯರಿ ಗಳುಪಿದೆ. ಭವಿ ಹೆಣ್ಣುಗಳ ಕೂಡುಂಡ ಬಾಯ ಹುಳುಕನಯ್ಯ ನಾನು. ಇಂತಪ್ಪ ಮಹಾ ಪಾತಕಂಗಳ ಮಾಡಿದ ಹೊಲೆಯ ನಿವನೆಂದು ನೀನ ರಿದ ಬಳಿಕ ಎನಗೆ ವಿರಕ್ತಿ ಎಂಬ ಲಾಂಛನವ ಕೊಟ್ಟುದು ಕೋಪದ ಕರುಣವಲ್ಲದೆ, ಕೃಪೆಯಲ್ಲವಯ್ಯಾ. ಅದೇನು ಕಾರಣ ವೆಂದೊಡೆ, ಬಟ್ಟೆಯ



ಬಡಿವ ಕಳ್ಳ ಬಂಟನ ಭೂಪಾಲ ಬೇಹನಿಕ್ಕಿ, ಹಿಡಿತರಿಸಿನಾಳೆ ಶೂಲಕ್ಕೆ ತ್ತಿಗಿಸುವರೆ, ಇಂದು ಆ ಕಳ್ಳ ಬಂಟಂಗೆ, ಪುನುಗು ಜವ್ವದಿಯ ಲೇಪಿಸಿ, ಪುಷ್ಪಿನ ದಂಡೆ, ಕೊರಳು ಮಂಡೆ ಉರದೊಳಗೆ ಅಡ್ಡಹಾಕಿ, ಹಾಲು ತುಪ್ಪ ಹಣ್ಣುಗಳ ಉಣಕೊಟ್ಟು, ಅಡಿಗಡಿಗೆ ಅಡಿಕೆಲೆಯ ಮೆಲಕೊಟ್ಟು, ವೀರವಂದದ ಹರೆ ಕಹಳೆಯಂ ಅವನ ಮುಂದೆ ಸಂಭ್ರಮಿಸುವ ಬರಿಯ ಉಪಚಾರದಂತೆ, ನಾನು ಮಾಡಿದ ಸರ್ವದ್ರೋಹಕ್ಕೆ ನಿನ್ನ ಮನ ನೊಂದು ಎನ್ನ ನೆಕ್ಕಲ ನರಕಕ್ಕೆ ನೂಂಕುವದಕ್ಕೆ ಕೊಟ್ಟ ಸಟೆಯ ಉಪ ಚಾರದ ಲಾಂಛನವಲ್ಲದೆ ದಿಟದೊಲವಲ್ಲವಯ್ಯಾ ದೇವನೇ. ನಾನು ಮುಂದ ನರಿಯದ ಅಂಧಕನಯ್ಯ. ನಿನ್ನ ಬಾಗಿಲ ಕಾಯ್ವ ಗೊಲ್ಲನಯ್ಯ. ನಿನ್ನ ಕುದುರೆಯ ಕಾವ ಗೋಪನಯ್ಯ. ನಿನ್ನ ಚವಮ್ಮಾವುಗೆಯ ಹೊತ್ತು ಬದು ಕುವ ಬೋವರ ಲೆಂಕನಯ್ಯ. ನಿನ್ನ ಪಡಿಗವ ಹಿಡಿವ ದಿಂಡೆಯಯ್ಯಾ. ನೀನುಗುಳ್ದ ತಾಂಬೂಲವನುಂಬ ನಿನ್ನಾದಿಯ ಹಳೆಯನಯ್ಯ. ನಿನ್ನಂಗಣ ದಲ್ಲಿ ಬೊಗಳುವ ಶ್ವಾನನಯ್ಯಾ. ನಿನ್ನ ಮನೆಯ ನಡೆಸೊಡರಯ್ಯಾ. ಎನ್ನ ತಪ್ಪ ಕಾಯುಯ್ಯಾ. ಕಾಯುಯ್ಯಾ. ಶಿವಧೋ ಶಿವಧೋ ಘನಲಿಂಗಿಯ ಮೋಹದ ಚನ್ನ ಮಲ್ಲಿಕಾರ್ಜುನಾ.

ಹಲ್ಲಣ = ಥಡಿ; ಅಂದಣ = ಪಲ್ಲಕ್ಕಿ; ಲಾಂಛನ = ಗುರುತು; ಕೆಡೆ = ದುಷ್ಟ; ಕೂಪ = ಸ್ನೇಹಿತ; ಹಳೆಯ = ಹಳಬ, ಪರಿಚಾರಕ, ಪಶು = ಆಕಳು; ಅಳುಪು = ತೊಂದರೆ ಕೊಡು; ಬೇಹು = ಸುದ್ದಿ, ಗುಪ್ತಸುದ್ದಿ; ಪುನುಗು = ಕಸ್ತುರಿ; ವೀರ ವಂದ = ಶೌರ್ಯವನ್ನು ಉಗ್ಗಡಿಸುವ; ಹರೆ = ನಗಾರಿ; ಎಕ್ಕಲ = ದೊಡ್ಡ, ಘೋರ ಗೋಪ = ದನಕಾಯುವವ; ಚವಮ್ಮಾವುಗೆ = ತೊಗಲಿನ ಮಚ್ಚೆ, ಬೋವ = ಭೋಯಿ ಲೆಂಕ = ಸೇವಕ; ಪಡಿಗ = ಪೀಕದಾನಿ; ಸೊಡರು = ದೀಪ; ದಿಂಡೆ = ದಾಸಿ, ಒರಟು ಹೆಂಗಸು.

೪. ಕೇಳು ಕೇಳಯ್ಯಾ ಆತ್ಮನೇ ಎರಡು ಪ್ರಕಾರದ ಆದಿ ಮಧ್ಯಾವ ಸಾನವ. ತಿಳಿದು ತಿಳಿದು ನೋಡು. ಕೆಡಬೇಡ, ಕೆಡಬೇಡ. ತಂದೆಯ ದೆಸೆ ಯಿಂದ ತಾಯಿಯ ಯೋನಿ ಚಕ್ರದಲ್ಲಿ ಬಂದುದೇ ಆದಿ. ಹೊನ್ನು, ಹೆಣ್ಣು, ಮಣ್ಣು ನನ್ನದೆಂದು ಹಿಡಿದು ಷಟ್ಕರ್ಮವನಾಚರಿಸಿ ಸುಖದುಃಖಗಳಲ್ಲಿ ಮುಳುಗಿಪ್ಪುದೇ ಮಧ್ಯ. ಅಂತಕನ ಕೈಯಿಂದ ಅರಿದು ಸಣ್ಣಿಸಿಕೊಂಡು ಭವಕ್ಕೆ ನೂಂಕಿಸಿ ಕೊಂಬುದೇ ಅವಸಾನ. ಇದನರಿದು ಇವಕ್ಕೆ ಹೇಯ ಮಂಮಾಡು. ಮತ್ತೆ ಆದಿ ಮಧ್ಯಾವಸಾನವುಂ ತಿಳುಹುವೆನು. ನಾನು.

ಮಹಾಲಿಂಗದ ಗರ್ಭಾಬ್ಧಿಯಲ್ಲಿ ಬಂದೆನೆಂಬುದೇ ಆದಿ. ಲೋಕದ ವ್ಯವಹಾರವ ಸಾಕು ಮಾಡಿ ಇಷ್ಟಲಿಂಗದಲ್ಲಿ ನೈಷ್ಠೆಯಾಗಿ, ಪ್ರಾಣಲಿಂಗದಲ್ಲಿ ಪರಿಣಾಮಿಯಾಗಿ, ಕ್ಷುತ್ತಿಂಗೆ ಭಿಕ್ಷೆ ಸೀತಕ್ಕೆ ರಗಟೆಯಾಗಿ, ಮೋಕ್ಷಕಾಮಿಯಾಗಿಪ್ಪುದೇ ಮಧ್ಯ. ತನುವ ಬಿಡುವಲ್ಲಿ ಮನವ ಪರಬ್ರಹ್ಮಕ್ಕೆ ಸಮರ್ಪಣೆಯ ಮಾಡಿ ಜನನ ಮರಣವ ಗೆಲುವುದೇ ಅವಸಾನ. ಇದನರಿದು ಇದಕ್ಕೆ ಮೆಚ್ಚಿ ಲಿಂಗವನೆ ಸಾಧಿಸು, ವೇಧಿಸು. ಇಂತಲ್ಲದೆ ಕಪಿಯ ಕೈಯ್ಯ ಕನ್ನಡಿಯಂತೆ ಕುಣಿದರೆ ಕುಣಿದು, ಎಡಿಸಿದರೆ ಎಡಿಸಿ, ಹಲುಗಿರಿದರೆ ಹಲುಗಿರಿದು, ಮನವಾಡಿದಂತೆ ನೀನಾಡಬೇಡ. ಮನವಾಡಿದಂತೆ ಆಡಿದವಂಗೆ ಭಕ್ತಿ ಎಲ್ಲಿಯದು, ಜ್ಞಾನವೆಲ್ಲಿಯದು, ವೈರಾಗ್ಯವೆಲ್ಲಿಯದು, ವಿರಕ್ತಿ ಎಲ್ಲಿಯದು, ಮುಕ್ತಿ ಎಲ್ಲಿಯದಯ್ಯಾ ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ,

ಅವಸಾನ= ಅಂತ್ಯ; ಸಣ್ಣಿಸು= ಅರಿಯು; ಹೇಯ= ತಿರಸ್ಕಾರ; ಪರಿಣಾಮಿ= ಆನಂದ ಪಡುವವ; ವೇಧಿಸು= ಹೊಡೆ, ಕೂಡು; ಎಡಿಸು = ನಿಂದಿಸು

೫. ಎಲೆ ಕರುಣಿ ಜನನಿಯ ಜಠರಕ್ಕೆ ಎನ್ನ ತರಬೇಡವಯ್ಯಾ. ತಂದರೆ ಮುಂದೆ ತಾಪತ್ರಯಕ್ಕೊಳಗಾದ ತರಳೆಯ ದುಃಖದ ಬಿನ್ನಪವ ಕೇಳಯ್ಯಾ. ಆಚಾರ ಲಿಂಗಸ್ವರೂಪವಾದ ಘ್ರಾಣ, ಗುರುಲಿಂಗಸ್ವರೂಪವಾದ ಜಿಹ್ವೆ, ಶಿವಲಿಂಗಸ್ವರೂಪವಾದ ನೇತ್ರ, ಜಂಗಮಲಿಂಗಸ್ವರೂಪವಾದ ಶ್ರೋತ್ರ, ಮಹಾಲಿಂಗಸ್ವರೂಪವಾದ ಪ್ರಾಣ, ಪಂಚಬ್ರಹ್ಮಸ್ವರೂಪವಾದ ತನು, ಇಂತಿವೆಲ್ಲವು ಕೂಡಿ ಪರಬ್ರಹ್ಮಸ್ವರೂಪ ತಾನೆಯಾಗಿ, ಆನೆಯರೂಪ ತಾಳಿ ಹಾಳುಗೇರಿಯ ಹೊಗುವ ಹಂದಿಯಂತೆ ಭವದಲ್ಲಿ ಎಂತು ಸುಸುಳುವೆನಯ್ಯಾ? ಹೇಸಿ ಹೇಡಿಗೊಂಡೆನಯ್ಯಾ, ನೊಂದೆನಯ್ಯಾ, ಬೆಂದೆನಯ್ಯಾ, ಬೀಗಿವರಿದು ನಿಂದುರಿದೆನಯ್ಯಾ. ಎನ್ನ ಮೊರೆಯ ಕೇಳಯ್ಯಾ ಮಹಾಲಿಂಗವೇ. ಎನ್ನ ಭವಕ್ಕೆ ನೂಂಕಬೇಡವಯ್ಯಾ. ನಾನು ಅನಾದಿಯಲ್ಲಿ ಭೋಗಕ್ಕಾಸೆ ಮಾಡಿದ ಫಲದಿಂದೆ, ಅಂದಿಂದ ಇಂದುಪರಿಯಂತರ, ನಾನಾಯೋನಿಯಲ್ಲಿ ಬಂದು ನಾಯಿ ಉಣ್ಣದ ಓಡಿನಲ್ಲಿ ಉಂಡು ನರಕೋಟಲೆ ಗೊಂಡೆನಯ್ಯಾ. ಎನಗೆ ಹೊನ್ನು ಬೇಡ, ಹೆಣ್ಣು ಬೇಡ, ಮಣ್ಣುಬೇಡ, ಭೋಗವು ಬೇಡ, ಭಕ್ತಿಯು ಬೇಡ, ಫಲವು ಬೇಡ, ನಿಮ್ಮ ಶ್ರೀಪಾದವ ನೊಡಗೂಡಲು ಬೇಡ, ಎನಗೆ ಪುರುಷಾಕಾರವು ಬೇಡವಯ್ಯಾ. ಎನ್ನ ಮನ ಒಪ್ಪಿ ಪಂಚೈವರು ಸಾಕ್ಷಿಯಾಗಿ ನುಡಿವುತಿಪ್ಪೆನಯ್ಯಾ.



ನಿಮ್ಮಾಣೆ, ಎನಗೊಂದು ಕರುಣಿಸಯ್ಯ. ತಂದೆ ಡೋಹರ ಕಕ್ಕಯ್ಯ ಮಾದರ ಚನ್ನಯ್ಯ ಅಂಬಿಗರ ಚೌಡಯ್ಯ ಇಂತಪ್ಪ ಶಿವಶರಣರ ಮನೆಯ ಬಾಗಿಲ ಕಾವ ಶುನಕನ ಮಾಡಿ ಎನ್ನನಿರಿಸಯ್ಯಾ ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

ಬಿನ್ನಪ= ಪ್ರಾರ್ಥನೆ; ಕುಳಿ = ತಗ್ಗು; ಒತ್ತು = ಸಾಮೀಪ್ಯ; ಹೇಡಿಗೊಳ್ಳು = ಅಂಜು; ಅಸಹ್ಯಪಡು; ಮೊರೆ = ದುಃಖ; ಓಡು = ಮಣ್ಣಿನ ಪಾತ್ರೆ, ಡೋಣಿ; ಕೋಟಲೆ = ತೊಂದರೆ,

೬. ಆದಿ ಅನಾದಿಯಿಂದತ್ತಣ ದೂರಕ್ಕೆ ದೂರ ಭಾವನಿರ್ಭಾವಕ್ಕೆ ಬಾರದಿರ್ದ ನಿಃಕಲ ಪರಬ್ರಹ್ಮವೇ, ಮುನ್ನ ನೀನು ಶಾಖೆದೋರುವಲ್ಲಿ ನಿನ್ನೊಳಂಕುರಿಸಿ ನಾನು ತಾಮಸ ಮುಸುಂಕಿ ಜನನ ಮರಣಕ್ಕೊಳಗಾಗಿ ಎಂಬತ್ತು ನಾಲ್ಕು ಲಕ್ಷ ಪ್ರಾಣಿಗಳ ಗರ್ಭದಿಂಬಂದು ಒಮ್ಮೆ ಮಾನವನಪ್ಪಂದಿಂಗೆ ನಾನುಂಡ ಮೊಲೆಹಾಲು ಸಪ್ತ ಸಮುದ್ರಕ್ಕೆ ಸರಿ ಇಲ್ಲವಯ್ಯಾ. ಇಂತಪ್ಪ ಮಾನವ ಜನ್ಮದಲ್ಲಿ ಬಂದು ಬಂದುದು ಗಣಿತಕ್ಕೆ ಬಾರವಯ್ಯಾ. ಈ ಜನ್ಮದಲ್ಲಿ ನಾನು ಪಿಂಡೋತ್ಪತ್ಯದಲ್ಲಿಯೇ ಶರಣಸತಿ ಲಿಂಗಪತಿ ಎಂಬ ಜ್ಞಾನ ತಲೆದೋರಿ ಶರಣುವೆಣ್ಣಾಗಿ ಹುಟ್ಟಿದೆನಯ್ಯಾ. ಎನಗೆ ನಿನ್ನ ಬಯಕೆ ಎಂಬ ಸಿಂಗರದ ಸಿರಿಯು ಮುಡಿಯಾಯಿತ್ತು. ಎನಗೆ ನಿನ್ನ ನೋಡುವೆನೆಂಬ ಮುಗುಳ್ನೊಲೆ ಮೂಡಿದವು. ಎನಗೆ ನಿನ್ನೊಳು ನುಡಿಯಬೇಕೆಂಬ ಉರುವಣೆಯ ಸಂಪದದ ಜವ್ವನ ಕುಡಿವರಿಯಿತ್ತು. ಎನಗೆ ನಿನ್ನ ನೊಲಿಸಬೇಕೆಂಬ ಸಂಭ್ರಮದ ಕಾಂಚೀ ಧಾಮ, ಕಟಿ ಸೂತ್ರ, ನೇವುರ ನಿಡಿಗೊಂಡಿಹವೆಂಬ ಆಭರಣ ಅನುಲೇಪನ ವಸ್ತ್ರಂಗಳೆನಗೆ ಅಲಂಕಾರನಾಯಿತ್ತು. ಭಕ್ತಿ ಎಂಬ ವಿರಹಾಗ್ನಿ ಎನ್ನ ಹೃದಯ ಕಮಲದಲ್ಲಿ ಬೆಳೆದು ಬೀಗಿ ಬೇರುವರಿದು ನಿಂದಲ್ಲಿ ನಿಲ್ಲಲೀಸದಯ್ಯಾ, ಕುಳಿತಲ್ಲಿ ಕುಳ್ಳಿರಲೀಸದಯ್ಯಾ, ಮನದಲ್ಲಿ ಮನೋಹರ ವಪ್ಪುದಯ್ಯಾ. ಅಂಗ, ಮನ, ಪ್ರಾಣ, ನೇತ್ರ, ಚಿತ್ತಂಗಳೊಳು ಪಂಚ ಮುಖನೆಂಬ ಪಂಚ ಬಾಣಂಗಳು ನೆಲೆಗೆಟ್ಟವಯ್ಯಾ. ನಾನು ಧರೆಯೊಳುಳಿವುದರಿದು. ಪ್ರೇಮದಿಂ ಬಂದು ಕಣ್ತುಂಬಿ ನೋಡಿ ಮನವೊಲಿದು ಮಾತಾಡಿ ಕರುಣದಿಂ ಕೈವಿಡಿದು ಅಕ್ಕರಿಂದಾಲಿಂಗಿಸಿ ದಿಟ್ಟಿಸಿ ಲಲ್ಲೆವಾತಿನಿಂ ಗಲ್ಲವ ಪಿಡಿದು ಪುಷ್ಪ ಪರಿಮಳದಂತೆ ನಾನೀನೆಂಬ ಉಭಯವಿಲ್ಲದಂತೆ ಕೂಡೆನ್ನ ಪ್ರಾಣೇಶನೇ. ಕೂಡದಿರ್ದಡೆ ಗಲ್ಲವ ಪಿಡಿ, ಗಲ್ಲವ ಪಿಡಿಯದಿರ್ದಡೆ ಕೈವಿಡಿ, ಕೈವಿಡಿಯದಿರ್ದಡೆ ಮಾತಾಡು, ಮಾತಾಡದಿ

ರ್ದಡೆ ನೋಡು, ನೋಡದಿರ್ದಡೆ ಬಾ, ಬಾರದಿರ್ದಡೆ ಪ್ರಮಥ ಗಣಂಗಳೊಡನೆ, ನಿನ್ನವಳೆಂದು ನುಡಿ, ನುಡಿಯದಿರ್ದಡೆ ನಿನ್ನ ಮನದಲ್ಲಿ ನಿನ್ನವಳೆಂದು ಭಾವಿಸು, ಭಾವಿಸದಿರ್ದಡೆ ಪುಣ್ಯ ಕಣ್ದೆರೆಯದು, ಕರ್ಮ ಕಾಂತಿಯುಪ್ಪದು, ಕಾಮ ಕೈದುಗೊಂಬ, ಕಾಲ ಕಲಿಯಪ್ಪ, ಭವಕ್ಕೆ ಬಲ್ಮೆ ದೋರುವುದು, ಇಂತಿವರು ಎನಗೆ ಅವಾಂತರದೊಳಗಾದ ಹಗೆಗಳಯ್ಯ. ಇವರೆನ್ನ ತಿಂದು ತೇಗಿ ಹಿಂಡಿ ಹಿಪ್ಪೆಯಂ ಮಾಡಿ, ನುಂಗಿ ಉಗುಳ್ದು ಹಿಂದಣ ಬಟ್ಟೆಗೆ ನೂಂಕುವರಯ್ಯಾ. ಹೋಗಲಂಜುವೆನಯ್ಯಾ. ಹೋದರೆ ಚಂದ್ರ ಸೂರ್ಯಾದಿಗಳುಳ್ಳನ್ನಕ್ಕರ ನಿನ್ನ ನೆನೆವ ಮನಕ್ಕೆ ನಿನ್ನ ಕೊಂಡಾಡುವ ಬಾಯಿಗೆ ನಿನ್ನ ನೋಡುವ ಕಂಗಳಿಗೆ ಸೆರೆ ಸಂಕೊಲೆಯುಪ್ಪದಯ್ಯಾ. ಇಂತಿವಂ ತಿಳಿದು ನಿನ್ನ ಮನವೊಳು ನನ್ನವಳೆಂದರೆ ದಿವಾ ರಾತ್ರಿಯುಳ್ಳನ್ನಕ್ಕರ ಎನ್ನ ಮನ ಜಿಹ್ವೆನೇತ್ರಂಗಳಿಗೆ ಬಂಧನಂಗಳೆಂಬುವು ಮುಂದುಗೆಡುವವಯ್ಯಾ. ನಿನ್ನ ನೆನೆನೆನೆದು ಎನ್ನ ಮನ ಬೀಗಿ ಬೆಳೆದು ತಳಿರಾಗಿ ಹೂಮಿಡಿ ಗೊಂಬುದಯ್ಯಾ. ನಿನ್ನ ಹಾಡಿ ಹಾಡಿ ಜಿಹ್ವೆ ಅಮೃತಸಾಗರದೊಳೋಲಾಡು ತಿಪ್ಪದಯ್ಯಾ. ನಿನ್ನ ನೋಡಿ ನೋಡಿ ಕಂಗಳು ನಿಜ ಮೋಕ್ಷ ವಡೆವುದಯ್ಯಾ. ನಾನು ಈರೇಳು ಭುವನಕ್ಕೆ ಬರುವಹಾದಿ ಹಾಳಪ್ಪುದಯ್ಯಾ. ಶತ್ರುಗಳೆನಗೆ ಮಿತ್ರರಪ್ಪರಯ್ಯಾ. ಭವದ ಬಳ್ಳಿ ಅಳಿವುದು, ಕಾಲನ ಕಲಿಕೆಡುವುದು. ಕಾಮಕೈದು ಖಂಡಿಸುವುದು. ಕರ್ಮದ ಕಾಂತಿ ಕರಗುವದು. ಪುಣ್ಯದ ಕಣ್ಣು ಬಣ್ಣಗೆಡುವುದಯ್ಯಾ. ನಿನಗೊಲಿದವರ ನಿನ್ನಂತೆ ಮಾಡು. ಕೃಪಾಕರನೆ ನಿನಗೆ ಮೆಚ್ಚಿದೆನಯ್ಯಾ. ನಿನ್ನ ಮೆಚ್ಚಿಸಿಕೊಳಲರಿಯದ ಮುಗ್ಧವೆಣ್ಣಿನ ಪತಿ ಭಕ್ತಿಯಂ ಸಾಧಿಸುವ ಎನ್ನವಸ್ಥೆಯಂ ಲಾಲಿಸು. ನಿನ್ನ ಶ್ರೀಪಾದ ಪದ್ಮದೊಳಗೆನ್ನ ಒಡಗೂಡಿಸು. ಎನ್ನ ಬಿನ್ನಪಮಂ ಪಾಲಿಸು, ಘನಲಿಂಗಿಯ ಮೋಹದ ಚನ್ನ ಮಲ್ಲಿಕಾರ್ಜುನಾ.

ಜವ್ವನ= ಯೌವ್ವನ, ಪ್ರಾಯ; ಕುಡಿವರಿ = ಹಬ್ಬು; ಕಾಂಚೀಧಾಮ =ನಡಪಟ್ಟೆ, ಸೈವುರ= ಕಾಲಂದುಗೆ; ಬೀಗು = ಹೆಚ್ಚಾಗು; ಲಲ್ಲೆವಾತು = ಪ್ರೀತಿಯ ಮಾತು; ಕೈದು = ಶಸ್ತ್ರ; ಬಲ್ಮೆ= ಬಲುವು, ಜೋರು; ಅವಾಂತರ = ಮಧ್ಯದಲ್ಲಿ; ತಳಿರು = ಚಿಗರು; ಓಲಾಡು = ಹರಿದಾಡು; ಈರೇಳು =ಹದಿನಾಲ್ಕು;

೭. ಎಲೆ, ಮನ ಬುದ್ಧಿ ಚಿತ್ತಹಂಕಾರವೆಂಬ ಚತುರ್ವಿಧ ಎನ್ನ ಮಂತ್ರಿ ಪ್ರಧಾನರು ಕೇಳಿರಯ್ಯಾ. ನಾನು ಕೆಟ್ಟು ಭ್ರಷ್ಟನಾಗಿ ಹೋದ ಕರ್ಮ ದಂಡಲೆಯ ಬಗೆಯ. ನಾನು ಸ್ವರ್ಗ ಮರ್ತ್ಯ ಪಾತಾಳದೊಳಗುಳ್ಳ



ಭೋಗರಾಜ್ಯಕ್ಕೆ ಅರಸಾಗಿ ಅನಂತಕಾಲ ಪಟ್ಟವನಾಳಿ ಎನ್ನ ಚತುರಂಗ ಬಲಕ್ಕೆ ಬೇಡಿದ್ದ ತಪ್ಪದೀವ ಕಂದಾಯವುಂ ಕೊಟ್ಟು ಕೊಟ್ಟು, ನಷ್ಟವಾಗಿ ಎನಗೆ ಎರಡು ನಾಲ್ವತ್ತೆರಡು ಲಕ್ಷದ ಭವರಾಟಣದ ಋಣಬಿದ್ದಿತ್ತು. ಆ ಋಣಕ್ಕಂಜಿ ಭೋಗರಾಜ್ಯವುಂಬಿಟ್ಟು ದರಿದ್ರನಾದೆನು. ಎನಗೆ ನೀವು ಮಾಡುವ ರಾಜ್ಯಕಾರ್ಯದ ಮಣಿಹವ ನಿಮಗೆ ತೆಗೆಯಿತ್ತು. ಎನ್ನ ನಂಬಿ ಕೆಡಬೇಡ, ಕೆಡಬೇಡ. ನಿಮ್ಮ ಪೂರ್ವಾಶ್ರಯಕ್ಕೆ ನೀವು ಹೋಗಿ. ಎಲೆ ಅಜ್ಞಾನ ತಮಕ್ಕೆ ಜ್ಯೋತಿ ಪ್ರಕಾಶವನುಳ್ಳ ಸವ್ಯಜ್ಞಾನವೇ, ನೀನು ಕೇಳಯ್ಯಾ. ಆತ್ಮನು ಜ್ಞಾನಸ್ವರೂಪನೆಂದು ವೇದಾಗಮಂಗಳು ಶೃತಿ ಸಾರುತ್ತಿವೆ. ನಾನು ಜೀವಾತ್ಮನುಂ ಅಳಿದು, ಶರಣತ್ವಮಂ ಕೈವಿಡಿದೆ. ಎನ್ನೊಳಗೆ ನೀನು ನನೆಯೊಳಗಣ ಪರಿಮಳದಂತೆ ಹುದುಗಿಪ್ಪೆಯಾಗಿ, ನೀನು ನಾನು ಗೋಳಕಾಕಾರ ಸ್ವರೂಪವಾದ ನಿಃಕಲ ಬ್ರಹ್ಮದಲ್ಲಿ ಉವಯವಾದ ಸಹೋದರರು. ಎನ್ನ ಎಂಟು ವೀದಿಯ ಪಟ್ಟಣದ ಚಾವಡಿಯ ಏಕಾಂತವೀದಿಯ ಸುವರ್ಣವಣ್ಣದ ಸಿಂಹಾಸನದ ಮೇಲಿಪ್ಪ ಮನೋನಾಥನಂ ಕಾಣಿಸಿ ನಿನ್ನ ಶ್ರೀಚರಣವುಂ ಎಂದೆಂದು ಪೂಜೆಯ ಮಾಡುವ ಭೃತ್ಯನೆಂದು ಭಯಭಕ್ತಿಯಿಂದ ಬಣ್ಣಿಸಿ ಎನ್ನ ಮಾಯಾಪಾಶಮಂ ಸುಡುವಂತೆ ಒಲವನುಂಟುಮಾಡು. ಚಿದಾಕಾಶದಲ್ಲಿ ಆರು ಮೂರಾಗಿ, ಮೂರು ಒಂದಾಗಿ, ಎರಡು ವೀದಿಯ ಮಾಣಿಕ್ಯಪುರದ ಸಂಗಮ ಸ್ಥಲವೆಂಬ ಅರಮನೆಯಲ್ಲಿ ನೆಲಿಸಿಪ್ಪ ಮಹಾರಾಯನ ಮುಂದೆ ಎನ್ನನಿಕ್ಕಿ ನಿನ್ನ ಆದಿ ಅನಾದಿಯ ಹಳೆಯನೆಂದು ಬಿನ್ನಪಂಗೈದು ಕರುಣ ರಸವುಂ ತುಂಬಿರಿಸಿ ಎನಗೆ ಮುಕ್ತಿ ರಾಜ್ಯಮಂ ಕೊಡುವಂತೆ ಸಂಧಾನವುಂ ಮಾಡಿ ಆ ಮುಕ್ತಿ ರಾಜ್ಯಕ್ಕೆ ಪಟ್ಟವುಂ ಕಟ್ಟಿಸಿ ಅಭಯ ಹಸ್ತವುಂ ಕೊಡಿಸಿ, ಎನ್ನ ಎಂಭತ್ತುನಾಲ್ಕು ಲಕ್ಷ ಭವರಾಟಣದ ಋಣವ ತಿದ್ದುವಂತೆ ಮಾಡಯ್ಯಾ ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

ರಾಟಣ = ರಾಟಾಳ, ಚಕ್ರ; ಮಣಿಹ= ಮಹತ್ವದ ಕಾರ್ಯ; ನನೆ= ಮೊಗ್ಗು ಸಂಧಾನ = ವ್ಯವಸ್ಥೆ; ಅಂಡಲೆ= ತೊಂದರೆ, ತ್ರಾಸ; ವೀದಿ= ಬೀದಿ, ದಾರಿ

೮. ಏನೆಂಬೆನೇನೆಂಬೆನಯ್ಯಾ? ಮತಿಗೆಟ್ಟು, ಮಾನವ ಲೋಕಕ್ಕೆ ಬಂದೆ. ಬಂದ ಬರವಿನಲ್ಲಿಯೇ ಭವವೆಂಬ ಭೂಪತಿ ಎನ್ನ ಸೆರೆವಿಡಿದು ಕಾಲ ಕಾಮನ ವಶಕ್ಕೆ ಕೊಟ್ಟನಯ್ಯಾ. ಕಾಲಂಗೆ ಕಾಯುವ ದಂಡವ

ತೆತ್ತುದು ಲೆಕ್ಕವಿಲ್ಲ. ಮನಸಿಜಂಗೆ ಮನನ ದಂಡವ ತೆತ್ತುದು ಲೆಕ್ಕವಿಲ್ಲ. ಹೋದಿಹೆನೆಂದರೆ ಒಳಕಾವಲರು ಹೊರಕಾವಲರು ಹೋಗಲೀಸರು. ನನ್ನ ಸೆರೆಯ ನಾನು ಬಿಡಿಸಿಕೊಂಡು ಹೋದಿಹೆನೆಂದರೆ, ನಾನು ದರಿದ್ರನಯ್ಯಾ. ಎನ್ನ ಸೆರೆಯ ಬಿಡಿಸಿಕೊಳ್ಳಿರಯ್ಯಾ ಬಸವಾದಿ ಪ್ರಮಥರಿರಾ. ನಿಮ್ಮ ಸೆರೆಗೊಡ್ಡಿ ಬೇಡಿಕೊಂಬೆನಯ್ಯಾ. ಭಕ್ತಿಗೆ ಭಂಡಾರವಾಗಿಪ್ಪ ಸಂಗನಬಸವಣ್ಣ, ಎನಗೆ ಹಾಗ ತೂಕ ಭಕ್ತಿಯ ಕೊಡಯ್ಯಾ. ಪ್ರಸಾದವೇ ಚಿತ್ಪಿಂಡ ಸ್ವರೂಪವಾಗಿಪ್ಪ ಚನ್ನಬಸವಣ್ಣ, ಎನಗೆ ಹಾಗ ತೂಕ ಜ್ಞಾನವ ಕೊಡಯ್ಯಾ. ಮಾಯಾ ಕೋಳಾಹಳನಪ್ಪ ಅಲ್ಲಮ ಪ್ರಭುವೇ, ಎನಗೆ ಹಾಗ ತೂಕ ವೈರಾಗ್ಯವ ಕೊಡಯ್ಯಾ. ಬೆಟ್ಟದ ಗುಂಡ ತಂದು ಇಷ್ಟ ಲಿಂಗದಲ್ಲಿ ಐಕ್ಯವ ಮಾಡಿದ ಗಟ್ಟಿವಾಳ ಲಿಂಗವೇ. ಎನಗೆ ಹಾಗ ತೂಕ ಲಿಂಗವ ಕೊಡಯ್ಯಾ. ಇವು ನಾಲ್ಕು ಹಾಗ ಕೂಡಿದಲ್ಲಿಯೇ ಮನ ಲಿಂಗದಲ್ಲಿ ಅಂದಣವಪ್ಪುದು. ಮನ ಲಿಂಗದಲ್ಲಿ ಅಂದಣವಾದಲ್ಲಿಯೇ ಎನಗೆ ಚಂದ್ರಾಯುಧ ದೊರೆಕೊಂಬುದು. ಆ ಚಂದ್ರಾಯುಧಮಂ ಪಿಡಿದು ಒಳಕಾವಲ ನಾಲ್ವರ ಕೊರಳ ಕೊಯ್ದು, ಹೊರಕಾವಲೈವರ ಹುರಿ ಹಂಚುಮಾಡಿ ಕೂಟದ ಕಾವಲರ ಪಾಟಮಾಡದೆ. ಭವದ ಬಳ್ಳಿಯ ಕೊಯ್ದು ಕಾಲಕಾಮರ ಕಣ್ಣಕಳೆದು ಎಡಬಲದ ಹಾದಿಯ ಹೊದ್ದದೆ ನಡುವಣ ಸಣ್ಣ ಬಟ್ಟೆಗೊಂಡು ಬಂದು ರತ್ನಾಚಲವನೇರಿ ಅಲ್ಲಿಪ್ಪ ಲಿಂಗಮಂ ಬಲಗೊಂಡು, ನೀವಿರ್ದ ಉನ್ಮನಿಯಪುರಕೆ ಬಂದು ನಿಮ್ಮ ಪಡಿಗ ಪಾದರಕ್ಷೆಯ ಪಿಡಿದು ನಿಮ್ಮ ಬಾಗಿಲ ಕಾಯ್ದಿಪ್ಪದೆ ಎನಗೆ ಭಾಷೆ. ಎನ್ನ ಬಿನ್ನಪಮಂ ನೀವು ಮನವೊಲಿದು ಕರುಣಿಪುದಯ್ಯಾ. ಇದಕ್ಕೆ ನೀವೇ ಸಾಕ್ಷಿಯಯ್ಯಾ ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

ತೆತ್ತು = ಕೊಡು; ಪಾಟ = ನೆಲಕ್ಕೆ ದಬ್ಬೋಣ, ನಾಶ; ಅಚಲ = ಪರ್ವತ; ಬಲಗೊಳ್ಳು = ನಮಸ್ಕರಿಸು;

೯. ನಿತ್ಯವಾಗಿಪ್ಪ ಪರಮಾತ್ಮನು ಅನಿತ್ಯವಾಗಿಪ್ಪ ದೇಹದೊಡನಾಡಿ ಜೀವನಾಗಿ ಹೋಗುತ್ತಿದೆ ನೋಡಾ. ನಿತ್ಯ ಅನಿತ್ಯದ ಸಂದನಿಕ್ಕಿದ ಸಮರ್ಥರಾರಯ್ಯ? ಇದಕ್ಕೆ ಅನುಕೂಲವಾಗಿ ಮಾಡಿದವರು ಮತ್ತೊಬ್ಬರುಂಟೆಂದು ನಿನ್ನ ಮನದಲ್ಲಿ ತಿಳಿಯಬೇಡಾ. ಅದು ತನಗೆ ತಾನೆ ಮಾಡಿ



ಕೊಂಡಿತ್ತು. ಅದು ಹೇಗೆಂದೊಡೆ, ಆತ್ಮನು ಭೋಗವೆಂಬ ಸೂಜಿಯ ಪಿಡಿದು ಆ ಸೂಜಿಗೆ ಮೂರೊಂದು ಕರಣ ಎರಡು ಮೂರು ಇಂದ್ರಿಯಂಗಳೆಂಬ ನವಸೂತ್ರವನೇರಿಸಿ ತನು ವ.ನನ ಸಂಚ ಸೇರುವೆಯನು ಮಾಡಿ ಕಟದಾರವಂ ಕಟ್ಟಿ ಸಂದರಿಯ ಬಾರದಂತೆ ಅದು ತನಗೆ ತಾನೆ ಹೊಲುಕೊಂಡಿತ್ತು. ಇದ ಬಿಚ್ಚಿ ಬೇರೆ ಮಾಡುವ ಪರಿಯಾವುದಯ್ಯಾ? ಭೋಗವೆಂಬ ಸೂಜಿಯ ಮುರಿದು, ನಾಲ್ಕು ಕರಣ ಐದಿಂದ್ರಿಯವೆಂಬ ಒಂಬತ್ತು ದಾರವಂ ತುಂಡು ತುಂಡಿಗೆ ಹರಿಯಲೊಡನೆ, ತನು ಪ್ರಕೃತಿಯ ಕೂಡಿತ್ತು. ಪ್ರಾಣ ಪರಬ್ರಹ್ಮವ ಕೂಡಿತ್ತು ಕಾಣಾ ಘನಲಿಂಗಿಯ ಮೋಹದ ಚನ್ನ ಮಲ್ಲಿಕಾರ್ಜುನಾ.

ಸಂದು = ಪದರು. ಸೂತ್ರ = ದಾರ. ಸಂಚ = ಕೂಟ. ಪ್ರಕೃತಿ = ವಸ್ತುವಿನ ಮೂಲ ಸ್ವರೂಪು.

೧೦. ಮೂರೈದು ತನುವಿಡಿದ ನರಗುರಿಗಳೆಲ್ಲ ಭಕ್ತರಪ್ಪರೆ? ಅಲ್ಲಲ್ಲ. ನಮ್ಮ ಶಿವ ಭಕ್ತರ್ಗೆ ಸದ್ಗೋಷ್ಠಿ ಸದಾಚಾರಂಗಳೇ ಪಾದಂಗಳು. ಗುರುವೇ ಸ್ಥೂಲತನು, ಲಿಂಗವೇ ಸೂಕ್ಷ್ಮ ತನು, ಜಂಗಮವೇ ಕಾರಣ ತನು, ಸಮ್ಯಜ್ಞಾನವೇ ಶೀರ್ಷ ಪ್ರಸಾದ ನೇತ್ರಂಗಳು, ಇಂತಪ್ಪ ತನುವಿಡಿದು ತಾವು ಊರಿಗೆ ಹೋಗುವಂತೆ ಮುಕ್ತಿಪುರಕ್ಕೆ ಹೋಗಿ, ನೊಸಲ ಕಣ್ಣು ಪಂಚಮುಖ ದಶಭುಜ ಉಮಾ ವಲ್ಲಭನಾದ ಪರಶಿವನ ಓಲಗದ ಗಣಂಗಳ ಮಧ್ಯದಲ್ಲಿ ಓಲಾಡುತಿಪ್ಪರಯ್ಯ ನಮ್ಮವರು. ಇಂತಪ್ಪ ತನುವಿಡಿಯದ ಅಜ್ಞಾನಿಗಳು ಕಿರುಬಟ್ಟೆಯಲ್ಲಿ ಹರಿದು, ಕಂಗೆಟ್ಟು ಕಾಡಹೊಕ್ಕು ಕಣ್ಣು ಕಾಣದೆ ಕಮರಿ ಬಿದ್ದು, ಬಳಲುತಿಪ್ಪರಿದೇನಯ್ಯ ಘನಲಿಂಗಿಯ ಮೋಹದ ಚನ್ನ ಮಲ್ಲಿಕಾರ್ಜುನಾ.

ಗೋಷ್ಠಿ = ನುಡಿ; ನೊಸಲು = ಹಣೆ; ಓಲಗ = ದರಬಾರ, ಕಿರು = ಸಣ್ಣ ಕಮರಿ = ನೆಲದಲ್ಲಿಯ ಬಿರುಕು, ತಗ್ಗು

೧೧. ಆರು ಬಣ್ಣದ ಹದಿನೈದು ದೇಹದ ಕೋಡಗ ಒಂದು ರತ್ನವ ಮೆಟ್ಟಿಕೊಂಡು, ಒಂದು ರತ್ನವ ಹಿಡಿದುಕೊಂಡು, ಮತ್ತೊಂದು ರತ್ನವ ಮರೆ ಮಾಡಿಕೊಂಡು, ಮೇಲು ಪರ್ವತದ ಶಿಖರವನೇರಿತ್ತು ನೋಡಾ. ಅದಕ್ಕೆ ತಾನಿರ್ದ ಪಂಚವರ್ಣದ ಪಟ್ಟಣವ ಹಾಳುಮಾಡಿ, ಆ ಪಟ್ಟಣದ ಪ್ರಜೆ ಪರಿವಾರಂಗಳ ಕೈಕಾಲ ಕೊಯ್ದು, ಮಂತ್ರಿ ನಾಲ್ವರ ಕಡಿ ಖಂಡವ ಮಾಡಿ, ಪ್ರಾಣ ಸ್ನೇಹಿತರಪ್ಪ ಸಂಗಾತಿಗಳೈವರ ಕಣ್ಣ ಕಳೆದು, ಒಡಹು

ಟ್ಟಿದರಿಬ್ಬರ ತಲೆಯೊಡೆಯ ನಿಕ್ಕಿ, ತನ್ನಿಂದ ತಾನೇ ಸತ್ತಿತ್ತು. ಭಕ್ತಿ ಎಂಬ ಬಿಲ್ಲ ಹಿಡಿದು ನಿರಹಂಕಾರವೆಂಬ ತಿರುಹನೇರಿಸಿ, ಉರಿಯ ಬಾಣದಲೆಚ್ಚ ಮರ್ಕಟನ ಕೊಂದು ಆ ರತ್ನಂಗಳ ತಕ್ಕೊಂಡು ಸೂರೆಯ ಜಟ್ಟಾತನೀಗ ಲಿಂಗಕ್ಕೆ ಸಲೆ ಸಂದ ಶರಣನಯ್ಯಾ ಘನಲಿಂಗಿಯ ಮೋಹದ ಚನ್ನ ಮಲ್ಲಿಕಾರ್ಜುನಾ.

ಕಡಿಖಂಡ = ತುಂಡಾದ ಮಾಂಸ, ಸಂಗಾತಿ = ಜೋಡಿಗ, ತಿರುಹ = ಬಾಣದ ಹೆದೆ, ಸಂದ = ಸೇರಿದ,

೧೨. ಎಲೆ ತಂಗಿ, ಶರಣಸತಿ ಲಿಂಗಪತಿಯಾದ ಪತಿವ್ರತಾ ಭಾವದ ಚಿನ್ಹ ನಿನ್ನ ನಡೆನುಡಿಯಲ್ಲಿ ಹೊಗರುದೋರುತ್ತಿದೆ. ನಿನ್ನ ಪೂರ್ವಾಪರವಾವುದಮ್ಮ? ಸುತ್ತೂರು ಸಿಂಹಾಸನದ ಪರ್ವತ ದೇವರ ಶಿಷ್ಯರು ಭಂಡಾರಿ ಬಸವಪ್ಪೊಡೆಯ ದೇವರು, ಆ ಭಂಡಾರಿ ಬಸವಪ್ಪೊಡೆಯ ದೇವರ ಶಿಷ್ಯರು ಕೂಗುಲೂರ ನಂಜಯ್ಯ ದೇವರು, ಆ ನಂಜಯ್ಯ ದೇವರ ಕರಕಮಲದಲ್ಲಿ ಉದಯವಾದ ಶರಣು ವೆಣ್ಣಯ್ಯ ನಾನು. ಎನ್ನ ಗುರುವಿನ ಗುರು ಪರಮಗುರು ಪರಮಾರಾಧ್ಯ ತೋಂಟದಾರ್ಯನಿಗೆ ಗುರುಭಕ್ತಿಯಿಂದ ಎನ್ನ ಶರಣು ಮಾಡಿದರು. ಆ ತೋಂಟದಾರ್ಯನು, ತನ್ನ ಕೃಪೆ ಎಂಬ ತೊಟ್ಟಿಲೊಳಗೆನ್ನ ಮಲಗಿಸಿ, ಪ್ರಮಥ ಗಣಂಗಳ ವಚನ ಸ್ವರೂಪಾರ್ಥವೆಂಬ ಹಾಲು ತುಪ್ಪಮಂ ಸದಾ ದಣಿಯಲೆರೆದು, ಅಕ್ಕರಿಂದ ರಕ್ಷಣ್ಯಮಂ ಮಾಡಿ ಘನಲಿಂಗಿಯೆಂಬ ನಾಮಕರಣಮಂ ಕೊಟ್ಟು ಪ್ರಾಯ ಸಮರ್ಥೆಯುಂಮಾಡಿ ಸತ್ಯ ಸದಾಚಾರ ಜ್ಞಾನ ಕ್ರಿಯೆಗಳೆಂಬ ದಿವ್ಯಾಭರಣಂಗಳಂ ತೊಡಿಸಿ ಅರುಹೆಂಬ ಬಣ್ಣವ ನಿರಿವಿಡಿದುಡಿಸಿ, ಅರ್ಥಿಯ ಮಾಡುತಿಪ್ಪ ಸಮಯದಲ್ಲಿ ಘನಲಿಂಗಿಯ ಮೋಹದ ಚನ್ನ ಮಲ್ಲಿಕಾರ್ಜುನ ತನಗೆ ನಾನಾಗಬೇಕೆಂದು ಬೇಡ ಕಳುಹಲು ಎಮ್ಮವರು ಅವರಿಂಗೆ ಮಾತನಿಕ್ಕಿದರಮ್ಮಾ.

ಹೊಗರು = ಪ್ರಕಾಶ. ನಿರಿವಿಡಿದು = ವ್ಯವಸ್ಥೆಯಿಂದ. ಅರ್ಥಿ = ಬೇಡಿಕೆ ಇಚ್ಛೆ, ಪ್ರೀತಿ.

೧೩. ಇನ್ನೇವೆ ನಿನ್ನೇವೆ ನೆಲೆ ತಂದೆ? ಹೆಣ್ಣು ಬಾಲೆಯ ಮೊರೆಯ ಕೇಳಯ್ಯಾ. ಮುನ್ನ ಹುಟ್ಟಿದ ಒಂಬತ್ತು ಮಕ್ಕಳ ನಗೆ ನುಡಿಯ ಕೇಳಲಾರೆ. ಮನೆಯ ಗಂಡನ ಬೆಡಗು ಬಿನ್ನಾಣವ ನೋಡಲಾರೆ. ಎನ್ನ ಸಿರಿಯಲ್ಲಿ ನಾನು ಓಲಾಡಲಾರೆ. ಎನಗೊಂದು ಮಗುವ ಕೊಡಯ್ಯ ಗುರುವೇ. ಆ



ಮಗುವಿನ ಕೈಯ್ಯಿಂದ ಎನ್ನ ಗಂಡನ ತಲೆಯೊಡೆಯನಿಕ್ಕಿಸು. ಮಕ್ಕಳ ಕೊರಳನಿರಿಸು. ಎನ್ನ ದಂಡವ ಕೊಳ್ಳಿಸು. ಪಟ್ಟಣಕ್ಕೆ ಹೋಹ ಹಾದಿ ಮೂರು ಬಟ್ಟೆ ಕೂಡಿದ ಮಧ್ಯದಲ್ಲಿ ಮಣಿಹವ ಮಾಡುತಿರ್ಪ ಕೈಕಾಲಿಲ್ಲದ ಮೋಟಂಗೆ ಮೆಚ್ಚಿ ಮರುಳಾದ ಪತಿವ್ರತೆಯಯ್ಯಾ ನಾನು. ಎನ್ನ ಕೊಂಡು ಹೋಗಿ ಅವನಿಗೆ ಮದುವೆಯ ಮಾಡಯ್ಯಾ ಘನಲಿಂಗಿಯ ಮೋಹದ ಚನ್ನ ಮಲ್ಲಿಕಾರ್ಜುನಾ.

ಬೆಡಗು = ಸೌಂದರ್ಯ. ಬಿನ್ನಾಣ = ವಿಜ್ಞಾನ, ಜ್ಞಾನ, ಜಾಣತನ.

೧೪. ಎಮ್ಮ ತಂದೆಯ ಬಸಿರಲ್ಲಿ ಬಂದಳೆಮ್ಮವ್ವೆ. ಎನ್ನ ತಂಗಿಯರಿಬ್ಬರು ಹೆಂಡರಾದರೆನಗೆ. ಎನ್ನ ಸತಿಯರು ಎನ್ನ ಮದವಳಗಿತ್ತಿಯ ಮಾಡಿ ಎಮ್ಮಪ್ಪಗೆ ಮದುವೆಯ ಮಾಡಿದರು. ಎನ್ನ ಗಂಡನ ಮನೆಯ ಒಡವೆಯ ಉಗುರು ಕಣ್ಣಿನಲೆತ್ತಿ ಒಗತನವ ಮಾಡುವೆನು. ಎಮ್ಮಕ್ಕನ ಕೈಯಿಂದ ಎನ್ನ ಗಂಡನ ಹೆಂಡತಿ ಎನಿಸಿಕೊಂಬೆನು. ಎನ್ನ ಗಂಡ ಅಳಲಿ ಆಳದೆ ಹೋಗಲಿ. ಪತಿಭಕ್ತಿಯ ಬಿಡೆ ಕಾಣಾ ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

ಒಗತನ = ನಡವಳಿಗೆ; ಅಳಲು = ದುಃಖಪಡು

೧೫. ದೇವಾ ಕಂಬಳಕ್ಕೆ ಹೋಗಿ ಕನಕದ ಕೊಡನ ಕಂಡಂತೆ, ಮರ್ತ್ಯಲೋಕಕ್ಕೆ ಬಂದು ಮಾನವ ಜನ್ಮವ ಕಂಡೆ. ಆ ಮಾನವ ಜನ್ಮಕ್ಕೆ ಗುಣಾಕ್ಷರಜ್ಞೆಯಾದಂತೆ ಲಿಂಗ ಬಂದುದ ಕಂಡೆ. ಎನಗಿದು ಚೋದ್ಯವಯ್ಯಾ. ಎನಗಿದು ವಿಪರೀತವಯ್ಯಾ. ಇದಕ್ಕೆ ನುಡಿದಂತೆ ನಡಿಸು, ನಡೆದಂತೆ ನುಡಿಸು. ನುಡಿನಡೆಗೆ ಭಿನ್ನವಾದರೆ ನಿಮ್ಮ ಶರಣರೊಪ್ಪರು. ನಿಮ್ಮ ಶರಣರೊಪ್ಪದಲ್ಲಿಯೇ, ನೀನೊಪ್ಪೆ. ನೀನೊಪ್ಪದಲ್ಲಿಯೇ ಎನಗೆ ಬಂದಿತ್ತು ಹಿಂದಣ ಭವದ ಹೆಮ್ಮಾರಿ. ಅದಕ್ಕೆ ನಾನಂಜುವೆನಯ್ಯಾ, ನಾನಳಕುವೆನಯ್ಯಾ. ನುಡಿನಡೆ ಎರಡಾಗದಂತೆ ನಡಿಸಯ್ಯಾ ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

ಕಂಬಳ = ಕೂಲಿ, ಗುಣಾಕ್ಷರಜ್ಞೆ = ಉತ್ತಮವಾದುದನ್ನು ತಿಳಿಯುವದು, ಚೋದ್ಯ = ಆಶ್ಚರ್ಯ

೧೬. ಅರ್ಥದ ಮೇಲೆ ಆಶೆಯುಳ್ಳನ್ನಕ್ಕರ ಮರ್ತ್ಯ ಲೋಕದ ಮಹಾ ಜಂಜರಿ ಬಿಡದಯ್ಯಾ. ನಾನು ಮರ್ತ್ಯಲೋಕದ ಹಂಬಲ ಹರಿದು, ನಿನ್ನ

ನಂಬಿ ನೆಚ್ಚಿದನೆಂಬುದಕ್ಕೆ ಪ್ರತ್ಯಕ್ಷವುಂ ತೋರುತಿರ್ಪೆ ನೋಡಯ್ಯ ಲಿಂಗವೇ. ಅನರ್ಘ್ಯವಾದ ಮುತ್ತು ರತ್ನಂಗಳ ಹೊಂಗೊಡದಲ್ಲಿ ತುಂಬಿ ನಾನಿರ್ದ ಏಕಾಂತ ವಾಸಕ್ಕೆ ಉರುಳಿ ಒರಲು ಹಾವ ಕಂಡ ಮರ್ಕಟ ನಂತೆ ನಾನು ಅಡ್ಡ ಮುಖವ ನಿಕ್ಕಿದೆನು. ನಿನಗೊಲಿವ ಶರಣನೆಂದೆ ಭಾವಿಸಿ ಎನ್ನ ಮರ್ತ್ಯಲೋಕದ ಸಂಕೊಲೆಯ ತರಿದು ನಿನ್ನಗಣಂಗಳ ಒಳಗು ಮಾಡು. ಅದಲ್ಲದೆ ಅದರ ಮೇಲೆ ನಾನು ಕಿಂಚಿತ್ತು ಆಸೆ ಮಾಡಲೊಡನೆ, ಚಂದ್ರ ಸೂರ್ಯಾದಿಗಳುಳ್ಳನ್ನಕ್ಕ ಎನ್ನ ಹಂದಿ ನಾಯಿ ಬಸುರಲ್ಲಿ ಹಾಕದಿದ್ದೆಯಾದರೆ ನಿನಗಲ್ಲವು ಪ್ರಭುವಿನಾಣೆ. ಆಳಿನಪಮಾನ ಆಳ್ದಂಗೆ ತಪ್ಪದಯ್ಯ ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

ಜಂಜರಿ = ತೊಂದರೆ; ಸಂಕೊಲೆ = ಬೇಡಿ; ಆಳ್ದ = ಅರಸು, ಒಡೆಯ.

೧೭. ಎನ್ನಂತರಂಗದಲ್ಲಿ ಕುಮಂತ್ರ ಕುಡಿವರಿದಭೇದವ ನಿನ್ನೊಡನೆ ಮರೆಯಿಲ್ಲದೆ ಆಡುತಿಪ್ಪೆನಯ್ಯಾ. ಒಡೆಯನೇ ಜಾಗ್ರಾವಸ್ಥೆಯಲ್ಲಿ ಲೋಕೋಪಚಾರ ಬಿಡದು. ಜಿಹ್ವಾಲಂಪಟತನ ಉಡುಗದು. ಸುಖ ದುಃಖಕ್ಕೆ ಎನ್ನ ಮನ ಅಳುತ್ತ ನಗುತ್ತ ಇದ್ದ ಬಳಿಕ ಎನಗೆ ಇಷ್ಟಲಿಂಗದ ಪೂಜೆ ಎಲ್ಲಿಯದೋ? ಸ್ವಪ್ನಾವಸ್ಥೆಯಲ್ಲಿ ಬ್ರಹ್ಮಾಂಡದೊಳಗುಳ್ಳ ಕಡೆ ಮೊದಲಿಲ್ಲದ ದುರ್ವಿಕಾರ ಸ್ವಪ್ನದಲ್ಲಿ ಹರಿದಾಡುವ ಜೀವಂಗೆ ಪ್ರಾಣಲಿಂಗದ ಪೂಜೆ ಎಲ್ಲಿಯದೋ? ಸುಷುಪ್ತಾವಸ್ಥೆಯಲ್ಲಿ ಲಿಂಗವ ಕೂಡಿ ನೈಮರೆದಿರದೆ ಕನಸಿನ ಸ್ತ್ರೀಯ ಕೂಡಿ ಆನಂದಿಸುವ ಕಾಮವಿಕಾರಿಗೆ ಭಾವಲಿಂಗ ಪೂಜೆ ಎಲ್ಲಿಯದೋ? ಈ ಪ್ರಕಾರದ ದುರ್ಗುಣಂಗಳ ನಾನು ಮರೆಮಾಡಿಕೊಂಡು ಶರಣನೆಂದು ವಚನಂಗಳ ಹಾಡಿದ ಗೀತ ತಿಂಗಳ ಬೆಳಗಿನ ಸಿರಿಯ ಕಂಡು ನಾಯಿ ಹರುಷಗೊಂಡು ಗೋಳಿಟ್ಟು ಬೊಗಳಿದಂತಾಯಿತ್ತು. ಅದೇನು ಕಾರಣವೆಂದೊಡೆ ನೀನೆನ್ನಂಗದ ಮೇಲಕ್ಕೆ ಬಂದೆಯೆಂಬ ಸಂತೋಷಕ್ಕೆ ಉಬ್ಬಿ ಕೊಬ್ಬಿ ಅಹಂಕರಿಸಿ ಹಾಡಿದೆನಲ್ಲದೆ ನುಡಿದಂತೆ ನಡೆ ಇಲ್ಲ. ಇದು ಕಾರಣ ಎನ್ನ ಮನದ ಕಾಳಿಕೆಯುಂ ಕರುಣದಿಂದೆ ಕಳೆದು, ಅವಸ್ಥಾತ್ರಯಂಗಳಲ್ಲಿ ನಿನ್ನ ಅಪ್ಪಿ ಅಗಲದಿಪ್ಪಂತೆ ಎನ್ನ ಪರಮ ಕಾಷ್ಠೆಯ ಮಾಡಯ್ಯ ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

ಕುಮಂತ್ರ = ದುಷ್ಟರಿಚಾರ; ಕುಡಿವರಿ = ಹಬ್ಬು; ಉಡುಗು = ಕಡಿಮೆಯಾಗು; ತಿಂಗಳ = ಚಂದ್ರ; ಕಾಳಿಕೆ = ಮಾಲಿನ್ಯ; ಕಾಷ್ಠೆ = ಸ್ಥಳ, ಸ್ಥಿತಿ; ಪರಮ = ಶ್ರೇಷ್ಠ



೧೮. ಭಕ್ತಿ. ಜ್ಞಾನ, ವೈರಾಗ್ಯ ತಪ್ಪದೆ ಷಟ್‌ಸ್ಥಲ ಮಾರ್ಗದಿರವು ತಪ್ಪದೆ, ಜ್ಞಾನಕ್ರಿಯೆಗಳಲ್ಲಿ ಪ್ರೇಮ ತಪ್ಪದೆ, ಶರಣಸತಿ ಲಿಂಗಪತಿಯಾದ ಭಾವ ತಪ್ಪದೆ, ಇಷ್ಟ ಪ್ರಾಣ ಭಾವಲಿಂಗದ ಪೂಜೆ ತಪ್ಪದೆ, ಷಡ್ವಿಧ ಲಿಂಗಂಗಳಲ್ಲಿ ಅರ್ಪಿತಾವಧಾನ ತಪ್ಪದೆ, ತೀರ್ಥ ಪ್ರಸಾದದಲ್ಲಿ ಒಯ್ಯಾರ ತಪ್ಪದೆ, ಮಂತ್ರಂಗಳ ಒಡವೆರೆದು ಲಿಂಗ ಸಂಧಾನ ತಪ್ಪದೆ, ಹಿಡಿದ ವ್ರತನೇಮಂಗಳಲ್ಲಿ ನಿಷ್ಠೆ ತಪ್ಪದೆ, ನಡೆದಂತೆ ನುಡಿದು ನುಡಿದಂತೆ ನಡೆವ ಭಾಷೆ ತಪ್ಪದೆ, ದ್ವೈತಾ ದ್ವೈತವ ನೂಂಕಿ, ಬರಿಯ ವೈರಾಗ್ಯವನೊಪ್ಪಗೊಳ್ಳದೆ, ನಿಜವಿರಕ್ತಿಯ ಹೊಲಬು ತಪ್ಪದೆ, ಪಂಚೈವರೊಂದಾಗಿ ಸದ್ಯೋನ್ಮುಕ್ತಿಗೆ ಮನವಿಟ್ಟು ಅರ್ಥಿಯಿಂದ ಆಚರಿಸುವರಯ್ಯ ನಿಮ್ಮ ಶರಣರು, ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

ಇರವು = ಸ್ಥಿತಿ, ಒಯ್ಯಾರ = ಸೌಂದರ್ಯ,

೧೯. ಅಂಗದ ಮೇಲಕ್ಕೆ ಬಂದಾಚಾರ ಲಿಂಗದ ಹೊಲಬನರಿಯದೆ. ಕೈಲಾಸದ ಮೇಲಿಪ್ಪ ಬಾಲಕೋಟಿ ಸೂರ್ಯ ಪ್ರಕಾಶವನುಳ್ಳ ಶಿವನನೊಲಿಸಬೇಕೆಂದು ಒಂದು ವಸ್ತುವ ಎರಡಿಟ್ಟು ನುಡಿವ ಮಂದಮತಿಗಳು ನೀವು ಕೇಳಿರೊ. ಮಹಾಮೇರು ಪರ್ವತವೇ ಶರಣ. ಆ ಶರಣನ ಸ್ಥೂಲತನುವೇ ರಜತಾದ್ರಿ. ಸೂಕ್ಷ್ಮತನುವೇ ಹೇಮಾದ್ರಿ. ಕಾರಣ ತನುವೇ ಮಂದರಾದ್ರಿ. ಈ ಮೂರು ಪರ್ವತಂಗಳುಳ್ಳ ಅರಮನೆಯಲ್ಲಿ ನೆಲಸಿಪ್ಪ ಶಿವನಾರೆಂದೊಡೆ ನಿರಾಕಾರ ಶೂನ್ಯ ಬ್ರಹ್ಮನೇ ಶರಣನ ಕುರಿತು, ಪಂಚಸಾದಾಖ್ಯಂಗಳನೊಳಕೊಂಡು, ಸಾಕಾರನಾಗಿ ಬಂದ, ಇಷ್ಟಲಿಂಗವೇ ಶಿವನು. ಸಾಕ್ಷಿ॥ ಜ್ವಲತ್ಕಾಲಾನಲಾಭಾಸ ತಟಿತ್ಕೋಟಿ ಸಮಪ್ರಭಾ। ತಸ್ಯೋರ್ಧ್ವೇ ಚ ಶಿಖಾ ಸೂಕ್ಷ್ಮಾ ಚಿದ್ರೂಪಾ ಪರಮಾ ಕಲಾ ॥೧॥ ಏವಂಭೇದ ಕಳಾದೇವಿ ಸದ್ಗುರು ಶಿಷ್ಯ ಮಸ್ತಕೆ। ಹಸ್ತಾಬ್ಜ ಮಥನಂಗ್ರಾಹ್ಯಂ। ತಸ್ಯ ಭಾವಕರೋವಿತಂ॥೨॥ ಇಂತೆಂದುದಾಗಿ ಆ ಶಿವನೇ ಶಿವನು. ಆ ಶಿವನ ಧರಿಸಿಪ್ಪ ಶರಣನ ಕಾಯವೇ ಕೈಲಾಸ. ಇದಲ್ಲದೆ ಮತ್ತೊಂದು ಕೈಲಾಸ, ಬೇರೊಬ್ಬ ಶಿವನುಂಟೆಂದು, ಭ್ರಮೆಗೊಂಡು ಮನವನೆರಡು ಮಾಡಿಕೊಂಬುದು ಅಜ್ಞಾನ ನೋಡಾ. ಉರದ ಮಧ್ಯದಲ್ಲಿಪ್ಪ ಗಂಡನ ಬಿಟ್ಟು, ಇನ್ನು ನೆರೆಮನೆಯ ಗಂಡರಿಗೆ ಮನವನಿಕ್ಕುವ ಹಾದರಗಿತ್ತಿಗೆ ಪತಿ ಭಕ್ತಿ ಎಲ್ಲಿಯದೋ? ಶ್ರೀಗುರುನಾಥ ಕರುಣಿಸಿ ಕೊಟ್ಟ ಕ್ರಿಯಾ ಲಿಂಗವನು ಅರ್ಚನೆ ಪೂಜನೆಯಿಂದ ಅರ್ಪಿತಾವಧಾನದಿಂದ ಧ್ಯಾನ ಧಾರಣದಿಂದ ಸಮತೆ ಸಮಾ

ಧ್ಯಾನದಿಂದ, ಧ್ಯಾನ ಮೌನ ಉಪಾವಸ್ಥೆಯಿಂದ ಮುನಿಸು ಮೂದಲೆಯಿಂದ ಕಾಮಿಸಿ ಕಂಬನಿ ದುಂಬಿ ಕರಸ್ಥಲದಲ್ಲಿಪ್ಪ ಪ್ರಾಣೇಶ್ವರನ ಶ್ರೀಚರಣಕ್ಕೆ ಲಲಾಟ ಪೂಜೆಯಂ ಮಾಡಿ, ಒಲಿಸಿ ಒಡಗೂಡಿ ನಿಜಮುಕ್ತಿವಡೆಯುದೆ ಆಕಾರವ ಮರೆದು, ನಿರಾಕಾರವ ಕೂಡಿಹೆನೆಂಬ ಲೋಕದ ಕಾಕು ಮಾನವರೆಲ್ಲ ಕಾಲಕಾಮರಿಗೆ ತುತ್ತಾಗಿ, ಕಾಲಾಗ್ನಿ ರುದ್ರನ ಹೊಡೆಗಿರ್ಚಿನೊಳಗಾದರಯ್ಯ ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

ಅವಧಾನ=ಏಕಾಗ್ರತೆ, ಉಪಾವಸ್ಥೆ = ಅಭಿಲಾಷೆ, ಚಿಂತೆ, ಮುನಿಸು = ಸಿಟ್ಟು, ಮೂದಲೆ = ಉಪಹಾಸ, ಕಾಕು ಮಾನವ = ವಿಚಾರವಿಲ್ಲದ ಮನುಷ್ಯ, ಹೊಡೆಗಿರ್ಚು = ದೊಡ್ಡ ಕಿಚ್ಚು.

೨೦. ನಿಜಗುಣ ಚಂದಿಮರಸರು ಕರಸ್ಥಲದ ನಾಗಿದೇವರೊಳಗಾದ ಎಲ್ಲ ವಿರಕ್ತರು ಆವ ಕ್ರಿಯೆಯಲ್ಲಿ ಆಚರಿಸಿ ಲಿಂಗೈಕ್ಯರಾದರೆಂದು ಕೆಟ್ಟು ನುಡಿವ ಭವಹೇತುಗಳು ನೀವು ಕೇಳಿರೊ. ಅವರು ತುಂಬಿದ ತೊರೆಯ ಸಂಭ್ರಮದಿಂದ ಹಾಯಿದರು. ಶಕ್ತಿಯ ಮುಂದೆ ಹಾಲು, ಬೋನ, ಹಣ್ಣು, ಕಜ್ಜಾಯವಿಕ್ಕಿರಲು ಆ ಶಕ್ತಿಯ ಮಾತನಾಡಿಸಿ ಉಂಡರು. ವಿಷವ ಪದಾರ್ಥವೆಂದು ಕೊಡಲು ಉಂಡು ದಕ್ಕಿಸಿಕೊಂಡರು. ಪಚ್ಚೆಯ ಕಡಗಮಂ ತಿರುಗುಣಿಯ ಮಡುವಿಗಿಟ್ಟು, ತಿರುಗಿ ಕರೆದುಕೊಂಡರು. ಕೆಂದೆಂಗಿನ ಎಳ ನೀರ ಭಾವಾರ್ಪಣವ ಮಾಡಿದರು. ದೇವೇಂದ್ರನ ಭೋಗಮಂ ಬಿಟ್ಟರು. ತನುವ ನಿಲಿಸಿ, ಪ್ರಾಣವ ಕೊಂಡೊಯ್ದರು. ಉಂಗುಷ್ಠದಲ್ಲಿ ಧರಿಸಿದ ಲಿಂಗಮಂ ತೆಗೆಯಲು, ಆ ಲಿಂಗದ ಕೂಡೆ ಪ್ರಾಣವ ಕಳುಹಿದರು. ಮಿಡಿವಿಲ್ಲಿನೊಳಗೆ ಲಿಂಗವ ನೆಚ್ಚು, ಆ ಲಿಂಗದೊಡನೆ ನಿರ್ವಯಲಾದರು. ಉಪಾಧಿಕೆಯ ಒಡಲಾಸೆಯಂ ಸುಟ್ಟರು. ಚಳಿ, ಮಳೆ ಎನ್ನದೆ ಅರಣ್ಯದಲ್ಲಿದ್ದರು. ಹಸಿದರೆ ಕೆಸರ ಮೆದ್ದರು. ಅವರು ಲಿಂಗಾಂಗ ರೂಢರಾಗಿ, ಲಿಂಗದಲ್ಲಿ ಐಕ್ಯವಾದರು. ನೀವು ಅವರಂತೆ ಲಿಂಗಾಂಗವ ತೋರಬೇಕು. ಅದಲ್ಲದಿರ್ದೊಡೆ, ಜ್ಞಾನ, ಕ್ರಿಯೆಗಳಿಂದಿರಬೇಕು. ಅಲ್ಲದಿರ್ದೊಡೆ ಸುಮ್ಮನಿರ್ದು ಶಿವಶರಣರ ಮನಸಿಂಗೆ ಬರಬೇಕು. ಹೀಗಲ್ಲದೆ ಹೊಟ್ಟೆಯ ಕಿಚ್ಚಿನ ಬಾಯಬಡುಕತನವೇತಕಯ್ಯಾ ನಿಮಗೆ? ಆನೆ ಮದವೆದ್ದು ಸೋಮ ಬೀದಿಯ ಸೂರೆಮಾಡಿತ್ತೆಂದು, ಆಡು ಮದವೆದ್ದು ಬೇಡಗೇರಿಗೆ ಹೋಗಿ ಕೊರಳ ಮುರಿಸಿಕೊಂಬಂತೆ,



ಅಂದಿನ ಕಾಲದ ಹನುಮ ಲಂಕೆಯ ದಾಂಟಿದನೆಂದು ಇಂದಿನ ಕಾಲದ ಕಪಿ ಹಳ್ಳವ ದಾಂಟಿದಂತೆ, ಅರ್ಥಿಯಿಂದ ಅರಸುವೆಣ್ಣು ಉಪ್ಪರಿಗೆಯನೇರಿದಳೆಂದು, ತೊತ್ತು ತಿಪ್ಪೆಯನೇರಿದಂತೆ, ಕುಮಾರ ಕುದುರೆಯನೇರಿದನೆಂದು ಗುಲಾಮ ಕುನ್ನಿಯನೇರಿದಂತೆ, ಬಲಮುರಿ ಶಂಖ ಧಿಗಿಲು ಭುಗಿಲೆಂದು ಝೇಂಕರಿಸಿತೆಂದು ಕೆರೆಯೊಳಗಣ ಗುಳ್ಳೆ, ಕಿಚು ಕಿಚು ಎಂಬಂತೆ, ತಮ್ಮರವ ತಾವರಿಯದೆ ಬಾಳುವ ಕಾಲದಲ್ಲಿ ಮರಣವ ಮದ್ದಕೊಂಬ ಈ ಖೂಳ ಮಾನವರ ಎನಗೊಮ್ಮೆ ತೋರದಿರಯ್ಯ ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

ಭವಿಹೇತು = ಪ್ರಪಂಚವೇ ಮುಖ್ಯ ಉದ್ದೇಶವಾಗಿದ್ದವ; ತೊರೆ = ನದಿ; ಖಂಡೆಯ = ಕತ್ತಿ; ಬಟ್ಟ = ದುಂಡನ್ನ; ಮಿಡಿ = ಒಗೆಯು; ನಿರ್ವಯಲು = ಶೂನ್ಯತೆ; ಉಪಾಧಿಕೆ = ತೋರಿಕೆ, ನಿಜವಲ್ಲದ ಸ್ಥಿತಿ, ಗುಳ್ಳೆ = ಶಂಖದ ಹುಳು, ಒಂದು ತರದ ಮೀನು; ಮದ್ದು = ಔಷಧ.

೨೧. ಸಾಧು ಗುಣಕ್ಕೆ ಸಲೆ ಸಂದ ವಾರಣ ಬಂದು, ಹುಟ್ಟುಗುರುಡರ ಸಭಾ ಮಧ್ಯದಲ್ಲಿ ನಿಲ್ಲಲು, ಕೆಲದೊಳೊಬ್ಬ ಕಣ್ಣುಳ್ಳಾತ ಆನೆ ಬಂದಿತ್ತೆಂದು ನುಡಿಯಲೊಡನೆ ಅತಿ ಪ್ರೇಮದಿಂದ ಕಂಗಳರು ಆ ಆನೆಯ ಮುಟ್ಟಿ ನೋಡಿ, ಆನೆ ಕೊಳಗದಾಕಾರವೆಂದು ಕಾಲ ಮುಟ್ಟಿದಾತ, ಆನೆ ಒನಕೆಯಾಕಾರವೆಂದು ಸೊಂಡಿಲು ಮುಟ್ಟಿದಾತ, ಆನೆ ಹರಿವೆಯಾಕಾರವೆಂದು ಕುಂಭಸ್ಥಳವ ಮುಟ್ಟಿದಾತ, ಆನೆ ಮೊರದಾಕಾರವೆಂದು ಕಿವಿಯ ಮುಟ್ಟಿದಾತ, ಆನೆ ಕೋಲಾಕಾರವೆಂದು ಬಾಲವ ಹಿಡಿದಾತ, ಇಂತಿವರೆಲ್ಲರು ಆನೆಯ ನೆಲೆಯನರಿಯದೆ, ತಮ್ಮೊಳಗೆ ತಾವು ಕೊಂಡಾಡುತಿರ್ದರು. ಆನೆಯ ನೆಲೆಯ ಆನೆಯನೇರುವ ಪಟ್ಟದರಸು ಬಲ್ಲನಲ್ಲದೆ ಹುಟ್ಟುಗುರುಡರೇನು ಬಲ್ಲರಯ್ಯಾ? ಈ ಪ್ರಕಾರದಲ್ಲಿಪ್ಪ ಪಶು ಪ್ರಾಣಿಗಳು ನಿಜೈಕ್ಯದ ಆಚರಣೆಯನರಿಯದೆ ಮೂಗಿನಾಭರಣವ ಕಿವಿಗಿಕ್ಕಿ, ಕಿವಿಯಾಭರಣವ ಮೂಗಿಗಿಕ್ಕುವಂತೆ, ನುಡಿದು ನಡೆವುತಿಪ್ಪರು. ಅದು ಶಿವಜ್ಞಾನಿಗಳ ಮತವಲ್ಲ. ಅದು ಹೇಗೆಂದೊಡೆ, ಪ್ರತ್ಯಕ್ಷ ಜ್ಞಾನವ ಪ್ರಮಾಣಿಸಿ, ಅಪರೋಕ್ಷ ಜ್ಞಾನವ ಆಲೋಚಿಸಿ, ಸಹಜ ಜ್ಞಾನವ ಸಂಪಾದಿಸಿ, ಈ ಜ್ಞಾನತ್ರಯಂಗಳನೊಂದುಮಾಡಿ ಬಿಡುವ ಹಿಡಿವ ಆಚರಣೆಯ ನೆಲೆಗೊಳಿಸಿಕೊಂಡು, ಹಿಡಿದಾಚರಣೆಯಲ್ಲಿ ಪರಾಕ್ರಮಿಯಾಗಿ ಆದಿ ಅನಾದಿ ಮೇಲಣ ಜ್ಯೋತಿರ್ಮಯವಪ್ಪ ಸೂಕ್ಷ್ಮ ಲಿಂಗಮಂ ಬೆರಸಿ, ಭಿನ್ನವಿಲ್ಲ

ದಿರ್ಪ ಆಚರಣೆಯ ವಿವರವಂ ಮಹೇಶ್ವರ ಬಲ್ಲನಲ್ಲದೆ, ಅಜ್ಞಾನಿ ಬಾಯಿ ಬಡುಕರವರೆತ್ತ ಬಲ್ಲರಯ್ಯ ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

ವಾರಣ = ಆನೆ; ಕಂಗಳ = ಕುರುಡ; ಕೊಳಗ = ಅಳೆಯುವ ಸೇರು; ಅಪರೋಕ್ಷ = ಕಣ್ಣಿಗೆ ಅಗೋಚರ, ಪ್ರತ್ಯಕ್ಷವಲ್ಲದ;

೨೨. ಬೆಳಗು ಕತ್ತಲೆ ಎಂಬ, ಕತ್ತಲೆ ಬೆಳಗೆಂಬ ಪಶುಮತದವಾಖಂಡಿಗಳು ನೀವು ಕೇಳಿರೋ. ಮಲ ಮಾಯಾ ಕರ್ಮಂಗಳು ಆತ್ಮಂಗೆ ಕೇಡಿಲ್ಲದೆ ಅನಾದಿಯಲ್ಲಿ ಉಂಟೆಂದು ನುಡಿವುತಿಪ್ಪಿರಿ. ಕಾಮಧೇನುವಿನ ಗರ್ಭದಲ್ಲಿ ಕತ್ತೆಯ ಮರಿ ಹುಟ್ಟುವವೆ? ಕಲ್ಪವೃಕ್ಷದಲ್ಲಿ ಕಾಗೆಯ ಮರಿಯ ಹಣ್ಣು ಬೆಳೆವುದೇ? ಪರುಷದಗಿರಿಯಲ್ಲಿ ಕಬ್ಬಿನ ಮೊಳೆದೋರುವುದೇ? ಅನಂತಕೋಟಿ ಮಿಂಚುಗಳ ಪ್ರಭೆಯನೊಳಕೊಂಡ ಪರಶಿವತತ್ವನಲ್ಲಿ ಉದಯವಾದ ಚಿದಂಶಿಕನಪ್ಪ ಪರಮಾತ್ಮಂಗೆ ಅನಾದಿ ಮಲವನುಂಟು ಮಾಡುವ ಸಿದ್ಧಾಂತಿಯ ಅಡ್ಡವಸ್ತ್ರವಲ್ಲಿಪ್ಪದು ಅಡ್ಡಗಲ ಮೂರು ಕಲ್ಲಿಲ್ಲದೆ ಲಿಂಗವಿಲ್ಲ. ಅದೇನು ಕಾರಣವೆಂದೊಡೆ, ಇಕ್ಕುವಾಕೆ ಮೂಗು ಮುಚ್ಚಿಕೊಂಡು ಇಕ್ಕಿದಬಳಿಕ ಉಂಬಾತ ಹೇಗುಂಬನಯ್ಯಾ. ಆತ್ಮನು ಅನಾದಿ ಮಲಾವರಣನೆಂದು, ನೀನೆ ಉಸುರುತ್ತಿದ್ದ ಬಳಿಕ ನಿನ್ನಂಗದ ಮೇಲೆ ಬರುವ ಲಿಂಗಕ್ಕೆ ಮೂಗಿಲ್ಲವಯ್ಯಾ. ಪುಣ್ಯ ಕ್ಷೇತ್ರದಲ್ಲಿ ಲಿಂಗವಿಪ್ಪುದಲ್ಲದೆ ಹಾಳು ಕೇರಿಯಲ್ಲಿ ಲಿಂಗ ಉಂಟೆ? ಇಲ್ಲವೆಂಬುದು ನಿನ್ನ ನೀನೇ ತಿಳಿದು ನೋಡಾ. ಇದು ಕಾರಣ ದ್ವೈತ ಮಾರ್ಗಕ್ಕೆ ಮುಕ್ತಿಯೆಂಬುದು ಎಂದೆಂದಿಗೂ ಸಟೆ ಹೋಗಿರಿ, ಎಂದೆನಯ್ಯ .ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

೨೩. ತಾಪತ್ರಯಂಗಳಿಗೆನ್ನನೊಳಗು ಮಾಡುವ ಕರ್ಮತ್ರಯಂಗಳು ಕೆಟ್ಟ ಕೇಡ ನೋಡಾ ಎಲೆ ತಂಗಿ. ಕಾಯದ ಕಳವಳಕಂಜಿ, ಸಂಚವ ಮಡಗುವ ಹೊನ್ನ ಬಿಟ್ಟಲ್ಲಿಯೇ ಸಂಚಿತ ಕರ್ಮನಾಸ್ತಿಯಾಯಿತ್ತು. ಸಂಚಿತ ಬಂದುದ ಮೊದಲಾಗಿ ಆಗಾಗಲೆ ಅನುಭವಿಸಿ, ಲಬ್ಧವ ನುಳಿಯಲೀಯದೆ ಭೋಗವನುಂಬ ಹೆಣ್ಣು ಬಿಟ್ಟಲ್ಲಿಯೇ ಪ್ರಾರಬ್ಧ ಕರ್ಮ ನಾಸ್ತಿಯಾಯಿತ್ತು. ಇಂದು ಬಿತ್ತಿ ಮುಂದಕ್ಕೆ ಅನುಮಾಡುವ, ಮಣ್ಣು ಬಿಟ್ಟಲ್ಲಿಯೇ ಆಗಾಮಿ ಕರ್ಮ ನಾಸ್ತಿಯಾಯಿತ್ತು. ಸಂಚಿತ ಕರ್ಮ ನಾಸ್ತಿ



ಯಾದಲ್ಲಿಯೇ ಬ್ರಹ್ಮನ ಸೃಷ್ಟಿಯೆಂಬ ಸೆರೆಮನೆ ಹಾಳಾಯಿತ್ತು. ಪ್ರಾರಬ್ಧ ಕರ್ಮ ನಾಸ್ತಿಯಾದಲ್ಲಿಯೇ ವಿಷ್ಣುವಿನ ಸ್ಥಿತಿಯೆಂಬ ಸಂಕೊಲೆ ತಡೆಗಡಿಯಿತ್ತು. ಆಗಾಮಿ ಕರ್ಮನಾಸ್ತಿಯಾದಲ್ಲಿಯೆ ರುದ್ರನ ಸಂಹಾರವೆಂಬ ಪ್ರಳಯಾಗ್ನಿ ಕೆಟ್ಟಿತ್ತು. ಇಂತೀ ಮೂವರಂ ದಾಂಟಿದಲ್ಲಿಯೇ ತಂದೆ ತಾಯಿಗಳು ಎನ್ನ ಕೈವಿಡಿದೆತ್ತಿಕೊಂಡು, ಬಸವಾದಿ ಪ್ರಮಥರ ಕೈವಶವ ಮಾಡಿದರಯ್ಯ ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

ಮಡಗು = ಇಡು, ಕೂಡಿಹಾಕು, ಮುಚ್ಚಿಡು; ಸಂಚಿತ = ಕೂಡಿಸಲ್ಪಟ್ಟ; ಅನುಮಾಡು = ಸಿದ್ಧಮಾಡು; ಆಗಾಮಿ = ಮುಂದಿನ; ತಡೆಗಡಿ = ಮುರಿ, ಕೊಯ್ಯು;

೨೪. ತೊಟ್ಟು ಬಿಟ್ಟ ಹಣ್ಣಾಗಿ ಎನಗೆ ನಿಜೈಕ್ಯದ ಬಟ್ಟೆ ನಿರುತವಾಯಿತ್ತಯ್ಯ. ಪರಿಭವಕ್ಕೆ ತರುವ ಪಂಚ ಭೂತಂಗಳೆಂಬ ವಾರಕವ ಪಂಚಬ್ರಹ್ಮಕ್ಕೊಪ್ಪಿಸಿದೆ. ಅಗಣಿತ ಕರಣಂಗಳನೊಳಕೊಂಡು, ಸುಖ ಒಂದು ದುಃಖ ಹದಿನಾರಕ್ಕೊಳಗು ಮಾಡುವ ಆತ್ಮನೆಂಬ ವಾರಕವ ಪರಬ್ರಹ್ಮಕ್ಕೊಪ್ಪಿಸಿದೆ. ಉತ್ಪತ್ತಿ, ಸ್ಥಿತಿ, ಪ್ರಳಯವೆಂಬ ವಾರಕವ ಮೂದೇವರಿಗೊಪ್ಪಿಸಿದೆ. ಇಂತಪ್ಪ ಋಣಂಗಳಂ ತಿದ್ದಿ. ಸಿರಿವಂತನಾಗಿ, ಭವರಾಜನ ಬಲವ ಗೆಲಿದೆ. ಭೂತಳದ ಭೋಗ ನಚ್ಚು ಮಚ್ಚೆಂಬ ಕೊಳವಂ ಕಳೆದೆ. ನಾನು ಹೊಕ್ಕು ಹೊರಟಾಡುವ ತ್ರಿಭುವನನೆಂಬ ತ್ರಿಪುರವಂ ಸುಟ್ಟು, ಸಂಸಾರನೆಂಬ ಸಪ್ತ ಸಮುದ್ರಂಗಳಂ ದಾಂಟಿದೆ. ಉನ್ಮನಿಯ ಪುರದ ಬಚ್ಚಬರಿಯ ಬೆಳಗಿನ ಬಯಲ ಬ್ರಹ್ಮವ ಮರೆಹೊಕ್ಕೆನಯ್ಯಾ ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ

ನಿರುತ = ಸತ್ಯ, ನಿಶ್ಚಯ; ವಾರಕ = ತೊಂದರೆ, ಅಡ್ಡಿ; ಕೊಳ = ಸರೋವರ

೨೫. ಮುಂದನರಿಯದ ಮತಿಗೆಟ್ಟ ಮರುಳ ಮನವೇ, ಕಾಲಕಾಮರ ಗೆಲುವ ಉಪಾಯವಾವುದೆಂದು ತಲೆಯೂರಿ ನೆಲನ ಬರೆವುತಿಪ್ಪೆ. ಮೊಲ ಜಂಬುಕಂಗಳ ಹುಯ್ಯಲಿಗೆ, ಆನೆ ಘೌಜನಡ್ಡಮಾಡಬೇಕೇ? ಕಾಲಕಾಮರ ಗೆಲುವುದಕ್ಕೆ ಆಲೋಚನೆ ಏತಕಯ್ಯಾ, ಮನವೇ? ಪಂಚೇಂದ್ರಿಯಂಗಳು ಪಂಚ ಬ್ರಹ್ಮನನಪ್ಪಿ ಅಗಲದಿಪ್ಪುದೆ ಪಂಚಬಾಣನ ಹರಣದ ಕೇಡು. ನಾನು ಪರಬ್ರಹ್ಮದಲ್ಲಿಯೇ ಜನನ. ಎನ್ನ ತನು ಮನಧನಂಗಳ ಪರಬ್ರಹ್ಮಕ್ಕೆ ಮಾರು ಗೊಟ್ಟೆನೆಂಬ ನಿಚ್ಚಟದ ನುಡಿಯೆ ಕಾಲನ ಗಂಟಲಗಾಣ. ಅದು ಹೇಗೆಂದೊಡೆ ಲಿಂಗಾಂಕಿತವಾದ ವೃಕ್ಷಂಗಳ ಮಂಡಲಾಧಿ

ಪತಿ ಮೊದಲಾಗಿ ಮುಟ್ಟಲಮ್ಮ. ಆನೆಯ ತನುಜನ ಆಡು ಮುರಿದಡೆ, ಹೀನ ವಾರಿಗಪ್ಪುದಯ್ಯ? ಈ ಪ್ರಕಾರದ ಸಮ್ಯಜ್ಞಾನದಿಂದ ನಿಮ್ಮ ಶರಣರು ಕಾಲಕಾಮರ ಗೆಲಿದರಯ್ಯ ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

ಜಂಬುಕ = ನರಿ; ಹುಯ್ಯಲು = ಒದರಾಟ, ಗುಲ್ಲು, ಪಂಚಬಾಣ = ಕಾಮ; ಮಾರು ಕೊಡು = ಬದಲು ಕೊಡು, ತಿರಿಗಿ ಕೊಡು, ಒಪ್ಪಿಸು; ನಿಚ್ಚಟ = ಸತ್ಯತೆಯುಳ್ಳ; ಮಂಡಲಾಧಿಪತಿ = ಅರಸು;

೨೬. ನುಡಿವೆನು. ನುಡಿಯಲಂಜುವೆನಯ್ಯಾ. ಲಿಂಗದ ವಿನೋದಾರ್ಥವಾಗಿ ಗಮನವಂಕುರಿಸಿ, ಒಂದಾನೊಂದು ದೇಶಕ್ಕೆ ಹೋಗುತ್ತಿಪ್ಪಾಗ ಅರಣ್ಯ ಮಧ್ಯದಲ್ಲಿ ಹಸಿವೆದ್ದು ಆಸುವ ನಂಡಲೆವು ತಿರುವಲ್ಲಿ, ತೃಷೆಯೆದ್ದು ಮನವ ಮತಿಗೆಡಿಸಿ, ಹಲ್ಲುಹತ್ತಿ ನಾಲಿಗೆ ತರಗಾಗಿ ಮೂರ್ಛೆಯಾಗುತಿರುವ ಸಮಯದಲ್ಲಿ ಕರ್ಜೂರ, ಮಾವು, ಜಂಬೂಫಲಂಗಳೊಳಗಾದ ಎಲ್ಲ ಫಲಂಗಳು ಕಾಯಮುಕ್ತಿ, ಜೀವನ್ಮುಕ್ತಿಯೆಂಬ ಸಂಜೀವನ ರಸವ ತುಂಬಿಕೊಂಡು, ವೃಕ್ಷಂಗಳಡಿಯಲ್ಲಿ ಬಿದ್ದಿರಲು, ಕಣ್ಣಿನಲ್ಲಿ ನೋಡಿ, ಮನದಲ್ಲಿ ಬಯಸಿ, ಕೈಮುಟ್ಟಿ ಎತ್ತಿದೆನಾದಡೆ, ಎನ್ನ ವಿರಕ್ತಿ ಎಂಬ ಪತಿವ್ರತಾ ಭಾವಕ್ಕೆ ಅದೇ ಹಾನಿ ನೋಡಾ. ಅದೇನು ಕಾರಣವೆಂದೊಡೆ, ಅಂಗಭೋಗ ಅನರ್ಪಿತ, ಲಿಂಗಭೋಗ ಪ್ರಸಾದವೆಂದು ಆದ್ಯರ ವಚನ ಸಾರುತ್ತಿದ್ದಾವೆ ನೋಡಾ. ಇದುಕಾರಣ ಅನರ್ಪಿತವ ಭುಂಜಿಸಿ, ತನುವ ರಕ್ಷಣ್ಯವ ಮಾಡಿ ಶುನಕನ ಬಸಿರಿನಲ್ಲಿ ಬಂದು ಹೊಲೆಯರ ಬಾಗಿಲ ಕಾಯ್ದು ಹಲವಾಹಾರವನುಂಡು. ನರಕಕ್ಕಿಳಿಯಲಾರದೆ ಮುಂದ ನರಿಯದೆ ನುಡಿದೆನಯ್ಯ. ಸತಿಯ ಭಾಷೆ ಪತಿಗೆ ತಪ್ಪವಯ್ಯ ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

ಶರಗು = ಒಣ ಎಲೆ.

೨೭. ಒಡ ಒಡಕು ಹುರಳಿಯ ಹೊಟ್ಟೆಯ ಹುರಿವಾಕೆಯ ಕೈಯ್ಯ ಸೊಟ್ಟು, ಕುರುಡುಗಣ್ಣು, ಮೆಲುವಾತ ದೊಡ್ಡ ಮೂಕೊರೆಗ ಇಂತಿವರು ತಮ್ಮ ಭೋಗಕ್ಕೆ ಸುರಪತಿಯ ಭೋಗವ ಜರಿವ ನರಗುರಿಗಳ ನಾನೇ ನೆಂಬೆನಯ್ಯ ಘನಲಿಂಗಿಯ ಮೋಹದ ಚನ್ನ ಮಲ್ಲಿಕಾರ್ಜುನಾ.

ಮೆಲು = ತಿನ್ನು; ಮೂಕೊರೆಗ = ಕೊಯ್ದ ಮೂಗಿನವ,



೨೮. ಎನ್ನ ಮನೋ ಮಧ್ಯದೊಳಗೊಂದು ಅನುಮಾನ ಅಂಕುರವಾಯಿತ್ತು ಕೇಳಾ ಎಲೆ ತಂಗಿ. ಲಿಂಗಾಣತಿಯಿಂದ ಬಂದ ಪದಾರ್ಥವನು ಮನವೊಪ್ಪಿ ಲಿಂಗಕ್ಕೆ ಕೊಟ್ಟುದೆ ಪ್ರಸಾದ. ಆ ಪ್ರಸಾದವ ಒಳಗಿರ್ದ ರಸವೇ ಪ್ರಸಾದ. ಹೊರಗಿರ್ದುದೇ ಹಿಪ್ಪಿ. ಮತ್ತಂ ಹೊರಗಿರ್ದ ಮಧುರವೇ ಪ್ರಸಾದ ಒಳಗಿರ್ದುದೇ ಕಠಿಣ. ಕಠಿಣಿಸಿ ಕೊಂಬುದೆಂಬ ಸುಖಿತನವ ನುಡಿಯಲಂಜಿ ನಡಗುತಿಪ್ಪೆನಯ್ಯ. ಅದೇನು ಕಾರಣ ನಡಗುತಿರ್ಪೆ? ಪ್ರಸಾದವೇ ಪರತತ್ವವೆಂದು ಪ್ರಮಥ ಗಣಂಗಳ ಸಮ್ಯಜ್ಞಾನವ ನುಡಿ ಉಲಿವುತ್ತಿದೆ. ಇದುಕಾರಣ ಪ್ರಸಾದವೆಂಬ ಪರತತ್ವದಲ್ಲಿ ಜ್ಞಾನ ಅಜ್ಞಾನಂಗಳೆರಡು ಹುದಿಗಿಪ್ಪವೆಂದು ನಾ ನುಡಿಯಲಮ್ಮೆ. ತಥಾಪಿ ನುಡಿದಡೆ ಎನಗೆ ಮರ್ತ್ಯದ ಮಣಿಹವಂದೆಂದಿಗೂ ತೀರದೆಂದು ಕಠಿಣ ಪದಾರ್ಥವ ಲಿಂಗಕ್ಕೆ ಕೊಟ್ಟು ಕೊಳಲಮ್ಮೆನಯ್ಯಾ ಘನಲಿಂಗಿಯ ಮೋಹದ ಚನ್ನ ಮಲ್ಲಿಕಾರ್ಜುನಾ.

ಆಣತಿ = ಆಜ್ಞೆ; ಕಠಿಣಿಸು = ತೊಂದರೆಗೊಳಿಸು, ಅಮ್ಮೆ = ಶಕ್ಯನಲ್ಲ,

೨೯. ಪಿಂಡ ಬ್ರಹ್ಮಾಂಡಂಗಳಿಲ್ಲದಂದು ಅಷ್ಟದಿಕ್ಪಾಲಕರ ಹುಟ್ಟಿಲ್ಲದಂದು ನಿಷ್ಕಲ ಪರಂಜ್ಯೋತಿ ತಾನೊಂದೇ ನೋಡಾ. ಅದು ತನ್ನ ಚಿತ್ಕಾಂತಿಯ ಸಂಗಸಮರಸದಿಂದ ಮಹಾಲಿಂಗವೆನಿಸಿತ್ತು. ಆ ಮಹಾಲಿಂಗವೇ ತನ್ನ ಪರಮಾನಂದದಿಂದ ಪ್ರಸಾದಲಿಂಗವೆಂದು, ಜಂಗಮಲಿಂಗವೆಂದು, ಶಿವಲಿಂಗವೆಂದು. ಗುರುಲಿಂಗವೆಂದು, ಆಚಾರಲಿಂಗವೆಂದು, ಹೀಗೆ ಪಂಚಲಿಂಗವೆನಿಸಿತ್ತು. ಆ ಪಂಚಲಿಂಗಂಗಳ ಪ್ರಾಣ ಲಿಂಗಮುಖ ಪದಾರ್ಥಂಗಳಾವಾವೆಂದೊಡೆ, ಆಚಾರ ಲಿಂಗಕ್ಕೆ ಗುರುಲಿಂಗವೇ ಪ್ರಾಣ, ಆ ಪ್ರಾಣ ಲಿಂಗಕ್ಕೆ ಆಚಾರಲಿಂಗವೇ ಅಂಗ, ಆ ಅಂಗಕ್ಕೆ ಆಚಾರಲಿಂಗದ ಆಚಾರಾದಿ ಪ್ರಸಾದ ಲಿಂಗಂಗಳೇ ಪಂಚಮುಖ, ಆ ಮುಖಂಗಳಿಗೆ, ಪಂಚಪ್ರಕಾರವ ಗಂಧಗಳೇ ದ್ರವ್ಯ ಪದಾರ್ಥ. ಗುರುಲಿಂಗಕ್ಕೆ ಶಿವಲಿಂಗವೇ ಪ್ರಾಣ, ಆ ಪ್ರಾಣಕ್ಕೆ ಗುರುಲಿಂಗವೇ ಅಂಗ, ಆ ಅಂಗಕ್ಕೆ ಗುರುಲಿಂಗದ ಆಚಾರಾದಿ ಪ್ರಸಾದ ಲಿಂಗಂಗಳೇ ಪಂಚಮುಖ, ಆ ಪಂಚಮುಖಂಗಳಿಗೆ ಪಂಚಪ್ರಕಾರವ ರಸಂಗಳೇ ದ್ರವ್ಯ ಪದಾರ್ಥ. ಶಿವಲಿಂಗಕ್ಕೆ ಜಂಗಮಲಿಂಗವೇ ಪ್ರಾಣ, ಆ ಪ್ರಾಣಕ್ಕೆ ಶಿವಲಿಂಗವೇ ಅಂಗ, ಆ ಅಂಗಕ್ಕೆ ಶಿವಲಿಂಗದ ಆಚಾರಾದಿ ಪ್ರಸಾದ ಲಿಂಗಂಗಳೇ ಪಂಚಮುಖ, ಆ ಮುಖಂಗಳಿಗೆ ಪಂಚಪ್ರಕಾರ ಸ್ವರೂಪಂಗಳೇ ದ್ರವ್ಯ ಪದಾರ್ಥ. ಜಂಗಮ ಲಿಂಗಕ್ಕೆ ಪ್ರಸಾದ ಲಿಂಗವೇ ಪ್ರಾಣ, ಆ ಪ್ರಾಣಕ್ಕೆ ಜಂಗಮಲಿಂಗವೇ ಅಂಗ, ಆ

ಅಂಗಕ್ಕೆ ಜಂಗಮಲಿಂಗದ ಆಚಾರಾದಿ ಪ್ರಸಾದ ಲಿಂಗಂಗಳೇ ಪಂಚಮುಖ, ಆ ಮುಖಂಗಳಿಗೆ ಪಂಚಪ್ರಕಾರದ ಸ್ಪರ್ಶನಂಗಳೇ ದ್ರವ್ಯಪದಾರ್ಥ, ಆ ಪ್ರಸಾದ ಲಿಂಗಕ್ಕೆ ಮಹಾಲಿಂಗವೇ ಪ್ರಾಣ, ಆ ಪ್ರಾಣಕ್ಕೆ ಆ ಪ್ರಸಾದ ಲಿಂಗವೇ ಅಂಗ, ಆ ಅಂಗಕ್ಕೆ ಪ್ರಸಾದ ಲಿಂಗದ ಆಚಾರಾದಿ ಪ್ರಸಾದ ಲಿಂಗಂಗಳೇ ಪಂಚಮುಖ, ಆ ಮುಖಂಗಳಿಗೆ ಪಂಚಪ್ರಕಾರದ ನಾದಂಗಳೇ ದ್ರವ್ಯಪದಾರ್ಥ. ಈ ಪ್ರಕಾರದಲ್ಲಿ ಪಂಚಲಿಂಗಂಗಳೇ ಪ್ರಾಣ, ಲಿಂಗಮುಖ ಪದಾರ್ಥ, ಇಂತಿವರ ನೆಲೆಯ ತಿಳಿದು ತಟ್ಟಿ ಮುಟ್ಟಿದ ಸುಖಂಗಳು ಆಯಾಯ ಮುಖಂಗಳಿಗೆ ಕೊಟ್ಟ ತೃಪ್ತಿಯ ಭಾವದಿಂದ ಮಹಾಲಿಂಗಕ್ಕೆ ಸಮರ್ಪಿಸುವ ಅವಧಾನ ನಿಮ್ಮ ಶರಣರಿಗಲ್ಲದೆ ಮಿಕ್ಕಿನ ಜಡ ಜೀವಿಗಳವರೆತ್ತ ಬಲ್ಲರಯ್ಯಾ ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

ಅವಧಾನ= ಲಕ್ಷ, ಏಕಾಗ್ರತೆ,

೩೦. ಆಚಾರಲಿಂಗವ ಅಂಗೈಯೆಡೆಗಳವಡಿಸಿಕೊಂಡು ಮಜ್ಜನಕ್ಕೆರೆದು, ತ್ರಿಪುಂಡ್ರಮಂ ಧರಿಸಿ, ಪುಷ್ಪ ಜಾತಿಗಳಿಂದರ್ಪಿಸಿ, ಪೂಜೆಯ ಮಾಡುವ ಕರದಲ್ಲಿ ಆ ಪೂಜೆಗೆ ಮೆಚ್ಚಿ ಪಂಚಸ್ಪರ್ಶನಂಗಳಂ ಮರೆಯಲೊಡನೆ, ಆ ಕರದಲ್ಲಿ ಜಂಗಮಲಿಂಗ ನೆಲೆಗೊಂಡಿತ್ತು. ಆ ಲಿಂಗದ ಪ್ರಕಾಶಮಂ ನೋಡುವ ನೇತ್ರಂಗಳು ಆ ಪ್ರಕಾಶಕ್ಕೆ ಮೆಚ್ಚಿ ಪಂಚ ವರ್ಣಂಗಳಂ ಮರೆಯಲೊಡನೆ ಆ ನೇತ್ರಂಗಳಲ್ಲಿ ಶಿವಲಿಂಗ ನೆಲೆಗೊಂಡಿತ್ತು. ಆ ಲಿಂಗದ ಸದ್ವಾಸನೆಯಂ ವಾಸಿಸುವ ಘ್ರಾಣ, ಆ ವಾಸನೆಗೆ ಮೆಚ್ಚಿ ಪಂಚಗಂಧಂಗಳಂ ಮರೆಯಲೊಡನೆ ಆ ಘ್ರಾಣದಲ್ಲಿ ಆಚಾರಲಿಂಗ ನೆಲೆಗೊಂಡಿತ್ತು. ಆ ಲಿಂಗಮಂ ಮಂತ್ರಸ್ವರೂಪವನೆತ್ತಿಕೊಂಡಾಡುವ ಜಿಹ್ವೆ ಆ ಮಂತ್ರಕ್ಕೆ ಮೆಚ್ಚಿ, ಪಂಚರಸಂಗಳಂ ಮರೆಯಲೊಡನೆ ಆ ಜಿಹ್ವೆಯಲ್ಲಿ ಗುರುಲಿಂಗ ನೆಲೆಗೊಂಡಿತ್ತು. ಆ ಲಿಂಗಮಂ ಮನವೊಲಿದು ಹಾಡುವ ನಾದಮಂ ಕೇಳಿದ ಶ್ರೋತ್ರ, ಆ ನಾದಕ್ಕೆ ಮೆಚ್ಚಿ. ಪಂಚನಾದಂಗಳಂ ಮರೆಯಲೊಡನೆ ಆ ಶ್ರೋತ್ರದಲ್ಲಿ ಪ್ರಕಾಶವಲಿಂಗ ನೆಲೆಗೊಂಡಿತ್ತು. ಆ ಲಿಂಗಮಂ ನೆನೆವ ಮನ, ಆ ನೆನಹಿಂಗೆ ಮೆಚ್ಚಿ. ಪಂಚ ಪರಿಣಾಮಂಗಳಂ ಮರೆಯಲೊಡನೆ, ಆ ಮನದಲ್ಲಿ ಮಹಾಲಿಂಗ ನೆಲೆಗೊಂಡಿತ್ತು. ಈ ಷಡಿಂದ್ರಿಯಂಗಳು ಆ ಲಿಂಗವನಪ್ಪಿ ಅಗಲದ ಕಾರಣ ಆ ಲಿಂಗ ಒಲಿದು ಷಡಿಂದ್ರಿಯಂಗಳಲ್ಲಿ ಲಿಂಗವಾಗಿ ನೆಲೆಗೊಂಡಿತ್ತು. ಇಂತಪ್ಪ ಇಷ್ಟಲಿಂಗದಲ್ಲಿ ಸಹಜ ಶರಣ ನಿಷ್ಠೆ ನಿಬ್ಬೆರಗಾಗಿ ಧ್ಯಾನ ಯೋಗಮಂ ಕೈಕೊಂಡು, ಷಡ್ವರ್ಣಂಗಳ



ಮರೆಯಲೊಡನೆ ಆ ಲಿಂಗ ಒಲಿದು, ಅಂಗವೇಧಿಸಿ ಜ್ಞಾನಕ್ರಿಯಂಗಳಲ್ಲಿ ಷಡ್ವಿಧ ಪ್ರಾಣಲಿಂಗವಾಗಿ ನೆಲೆಗೊಂಡಿತ್ತು. ಆ ಪ್ರಾಣಲಿಂಗಂಗಳಂ ಶರಣ ಮಂತ್ರ ಮಾಲೆಯಿಂ ಹೃದಯದೊಳಿಂಬಿಟ್ಟು, ಮನದರಳ್ದ ತಾವರೆಯಲ್ಲಿ ಜಾಗ್ರ ಸ್ವಪ್ನದಲ್ಲಿ ಪೂಜಿಸುವ ಧಾರಣ ಯೋಗದೊಳಿರ್ದು ಕ್ರಿಯೆಯ ಮರೆಯಲೊಡನೆ, ಆ ಲಿಂಗ ಒಲಿದು, ಮನವೇಧಿಸಿ ಭಾವಂಗಳಡಗಿ ತ್ರಿವಿಧ ಭಾವಲಿಂಗವಾಗಿ ನೆಲೆಗೊಂಡಿತ್ತು. ಆ ಭಾವಲಿಂಗಂಗಳಂ ಶರಣ ಒಡವೆರೆಯಲೊಡನೆ ಕರ್ಪುರ ಹೋಗಿ ಉರಿಯ ಪಿಡಿದಂತಾದ ಸಮಾಧಿಯೋಗದೊಳಿರ್ದು, ಜ್ಞಾನವ ಮರೆಯಲೊಡನೆ ಆ ಶರಣಂಗೆ ಆ ಲಿಂಗ ಒಲಿದು ಸರ್ವಾಂಗ ಲಿಂಗವಾಯಿತ್ತು ಆತನೆ ಪರಬ್ರಹ್ಮ. ಇದನರಿಯದೆ ಜ್ಞಾನಕ್ರಿಯೆಗಳಿಂದಾಚರಿಸಿ, ಲಿಂಗಾಂಗ ಸಂಯೋಗವಾಗದೆ, ಕೆರಹಿನಟ್ಟಿಗೆ ನಾಯಿ ತಲೆದೂಗುವಂತೆ ತಮ್ಮ ಅರುಹಿಂಗೆ ತಾನೆ ತಲೆದೂಗಿ, ಅಹಂಬ್ರಹ್ಮನೆಂಬ ಚೌರಾಸಿ ಹೊಲೆಯರ ಎನಗೊಮ್ಮೆ ತೋರದಿರಯ್ಯಾ ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

ಅಳವಡಿಸು = ಸಿದ್ಧಪಡಿಸು; ಪರಿಣಾಮ = ಸುಖ; ನಿಬ್ಬೆರಗು = ಸಂಯೋಗ, ವೇಧಿಸು = ಕೂಡು; ಒಡವೆರೆ = ಸಂಯೋಗವಾಗು, ಕೂಡು; ಅರುಹು = ಜ್ಞಾನ,

೩೧. ಕರ್ತಭೂತಳದ ವರ್ತಮಾನಕ್ಕೆ ಹೇಸಿ, ಮನ ಓತು, ನಿರ್ವಾಣದಾಸೋಹಮಂ ಕೈವಿಡಿದು ಎನ್ನ ತನುವೇ ವನಿತೆ, ಕರಣಂಗಳೇ ದ್ರವ್ಯ, ಉರವಣಿಸಿದ ಭಕ್ತಿಯೇ ನೆಲ, ಇಂತೀ ತ್ರಿವಿಧ ಪದಾರ್ಥಂಗಳಂ ಹಿಡಿದು ಗಣಂಗಳ ಮುಂದೆ ಕರಪಾತ್ರೆಯೆಂಬ ಕಾಯಕಮಂ ಕಟ್ಟಿದೆ. ಎನ್ನ ಸಮಯಾಚಾರಕ್ಕೆ ಸುಷುಮ್ನ ಮಂಟಪದಲ್ಲಿ ಗುರುವ ತಡೆದೆ. ತ್ರಿಪುಟಿಯ ಮಂಟಪದಲ್ಲಿ ಲಿಂಗವ ತಡೆದೆ. ಹೃದಯ ಮಂಟಪದಲ್ಲಿ ಜಂಗಮವ ತಡೆದೆ. ಎನ್ನ ಸ್ವಯಕಾಯಕಮಂ ತಂದು, ರೂಪು ಪದಾರ್ಥಂಗಳಂ ನಿರ್ಭಾವ ಪರಿಯಾಣದಲ್ಲಿ ಗಡಣಿಸಿ ಗುರುವಿನ ಮುಂದಿಕ್ಕಿದೆ. ರುಚಿ ಪದಾರ್ಥಂಗಳಂ ಸುಮನ ಪರಿಯಾಣದಲ್ಲಿ ಲಿಂಗದ ಮುಂದಿಕ್ಕಿದೆ. ತೃಪ್ತಿ ಪದಾರ್ಥಂಗಳಂ ಭಾವ ಪರಿಯಾಣದಲ್ಲಿ ಗಡಣಿಸಿ ಜಂಗಮದ ಮುಂದಿಕ್ಕಿದೆ. ಇಂತೀ ನಿರಂಜನ ಗುರುಲಿಂಗಜಂಗಮ ಸವಿದ ಒಕ್ಕು ಮಿಕ್ಕ ತ್ರಿವಿಧ ಪ್ರಸಾದವನುಂಡು, ತ್ರಿವಿಧ ಕರ್ಮನಾಸ್ತಿಯಾಗಿ ನಾನು ಬದುಕಿದೆನಯ್ಯಾ ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

ಓ = ಪ್ರೀತಿಸು; ನಿರ್ವಾಣ = ಮುಕ್ತಿ; ಗಡಣಿಸು = ಕೂಡಹಾಕು; ಒಗು = ಬಿಡು, ಚೆಲ್ಲು; ನಿರಂಜನ = ಶುದ್ಧ

೩೨. ಶಿವಪ್ರಸಾದ ಬೀಸರ ಹೋಗಬಾರದೆಂದು ಎಚ್ಚರಿಕೆ ಅವಧಾನದಿಂದರ್ಪಿಸಿ, ಪ್ರಕ್ಷಾಲನ ಲೇಹ್ಯ ಅಂಗಲೇಪನದಿಂದ ಅವಧಾನವ ಮಾಡುತಿಪ್ಪ ಪರಮವಿರಕ್ತರೇ, ಪದಾರ್ಥವಂ ಕರದಲ್ಲಿ ತಂದುಕೊಟ್ಟರೇನು ಮಾಡಿಕೊಂಬಿರಯ್ಯಾ. ಭಕ್ತರು ಕ್ರಿಯೆವಿಡಿದು ಪದಾರ್ಥವ ಪರಿಯಾಣದಲ್ಲಿ ತಂದರೆ ಭಯಭಕ್ತಿಯಿಂದ ಒಯ್ಯಾರದಲ್ಲಿ ಪ್ರಸಾದವ ಸಲಿಸುವದೆ ಎನ್ನ ಕ್ರಿಯಕ್ಕೆ ಸಂದಿತ್ತು. ಅದಲ್ಲದೆ ಎನ್ನ ಕರಪಾತ್ರದಲ್ಲಿಗೆ ತಂದು ಭಿಕ್ಷವ ನೀಡಿದರೆ ಕೊಂಡುದೆ ಪ್ರಸಾದ, ಒಕ್ಕುದೆ ಪದಾರ್ಥ, ಅದು ಎನ್ನ ಜ್ಞಾನಕ್ಕೆ ಸಂದಿತ್ತು. ಅದು ಹೇಗೆಂದೊಡೆ, ಹರಿ ಶಬ್ದವ ಕೇಳೆನೆಂದು ಭಾಷೆಯ ಮಾಡಿದ ಶಿವಭಕ್ತೆ ಸತ್ಯಕ್ಕನ ಮನೆಗೆ ಶಿವನು ಜಂಗಮವಾಗಿ ಭಿಕ್ಷಕ್ಕೆ ಬಂದು ಹರಿ ಎನ್ನಲೊಡನೆ ಹರನ ಬಾಯ ಹುಟ್ಟಿನಲ್ಲಿ ತಿವಿದಳು. ಅದು ಅವಳ ಭಾಷೆಗೆ ಸಂದಿತ್ತು. ಅವಳು ಶಿವದ್ರೋಹಿಯೇ? ಅಲ್ಲ. ನಾನು ಸಂಸಾರ ಸಾಗರದಲ್ಲಿ ಬಿದ್ದು ಏಳುತ್ತ ಮುಳುಗುತ್ತ ಕಟುಕ ನೀರ ಕುಡಿವ ಸಮಯದಲ್ಲಿ ಶಿವನ ಕೃಪೆಯಿಂದ ನನ್ನಿಂದ ನಾನೆ ತಿಳಿದು ನೋಡಿ ಎಚ್ಚತ್ತು ಮೂರು ಪಾಶಂಗಳ ಕುಣಿಕೆಯ ಕಳೆದು, ಭೋಗ ಭುಕ್ತ್ಯಾದಿಗಳ ನತಿಗಳೆದು, ಅಹಂಕಾರ ಮಮಕಾರಂಗಳನಳಿದು, ಉಪಾಧಿಕೆ ಒಡಲಾಸೆಯಂ ಕಡೆಮೆಟ್ಟಿ ಪೊಡವಿಯ ಸ್ನೇಹವಂ ಹುಡಿಗುಟ್ಟಿ ಉಟ್ಟುದ ತೊರೆದು ಊರ ಹಂಗಿಲ್ಲದೆ ನಿರ್ವಾಣಿಯಾಗಿ, ನಿಜಮುಕ್ತಿ ಸೋಪಾನವಾಗಿಪ್ಪ ಕರಪಾತ್ರೆಯೆಂಬ ಬಿರಿದ ಬಸವಾದಿ ಪ್ರಮಥರರಿಕೆಯಾಗಿ ಶಿವನ ಮುಂದೆ ಕಡುಗಲಿಯಾಗಿ ನಾನು ಕಟ್ಟಿದ ಬಿರಿದಿಂಗೆ ಹಿಂದು ಮುಂದಾದರೆ ಶಿವನು ಮೂಗ ಕೊಯ್ದು ಕನ್ನಡಿಯ ತೋರಿ ಅಣಕವಾಡಿ ನಗುತಿಪ್ಪನೆಂದು ನಾನು ಕರಪಾತ್ರದಲ್ಲಿ ಸಂದೇಹವಿಲ್ಲದೆ ಸಲಿಸುತಿಪ್ಪೆನು. ಆ ಸಮಯದಲ್ಲಿ ಕೊಂಡುದೆ ಪ್ರಸಾದ ಒಕ್ಕುದೇ ಪದಾರ್ಥ ಇದು ಎನ್ನ ಸಮ್ಯಜ್ಞಾನದ ಬಿರಿದಿಂಗೆ ಸಂದಿತ್ತು. ನಾನು ಪ್ರಸಾದ ದ್ರೋಹಿಯೇ? ಅಲ್ಲ. ಇಂತಲ್ಲದೆ ನಾನು ಮನಸಿಂಗೆ ಬಂದಂತೆ ಉಂಡುಟ್ಟಾಡಿ, ರೂಪರಸ ಗಂಧವೆಂಬ ತ್ರಿವಿಧ ಪ್ರಸಾದದಲ್ಲಿ ಉದಾಸೀನವ ಮಾಡಲಮ್ಮೆನು. ಮಾಡಿದೆನಾದರೆ ವರಾಹ ಕುಕ್ಕುಟನ ಬಸುರಲ್ಲಿ ಬಪ್ಪುದು ತಪ್ಪದು. ಇದ ಕಡೆಮುಟ್ಟ ನಡಿಸು ನಡಿಸಯ್ಯಾ ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.



ಬೀಸರವೋಗು = ನಾಶವಾಗು, ಕೆಡು; ಲೇಹ್ಯ = ನೆಕ್ಕತಕ್ಕ; ಸಂದಿತ್ತು, ಒಪ್ಪಿತ್ತು; ಅತಿಗಳೆ = ವಿಸಾರು, ಬಿಡು; ಹುಡಿಗುಟ್ಟು = ನಾಶಮಾಡು; ಅಣಕ = ಚೇಷ್ಟೆ, ವರಾಹ = ಹಂದಿ; ಕುಕ್ಕುಟ = ಕೋಳಿ.

೩೩. ಅರ್ಪಿತ ಅವಧಾನವ ಕ್ರಮವ ವಿಸ್ತರಿಸಿ ಒಪ್ಪವಿಟ್ಟು ಹೇಳಿಹೆ, ಕೇಳಿರಣ್ಣ. ಭಿನ್ನ ಭೋಜನ, ಪ್ರಸಾದ ಭೋಜನ, ಸಹ ಭೋಜನವೆಂದು ಲಿಂಗಾರ್ಪಿತ ಮೂರು ಪ್ರಕಾರವಾಗಿಪ್ಪುದು. ಮುಂದಿಟ್ಟ ಸಕಲ ಪದಾರ್ಥಂಗಳ ಲಿಂಗಕ್ಕೆ ಕೊಟ್ಟು, ಆ ಲಿಂಗವಂ ಸೆಜ್ಜೆಯರ ಮನೆಗೆ ಬಿಜಯಂಗೈಸಿ ಅಂದಂದಿಂಗೆ ಬಂದ ಪದಾರ್ಥವಂ ಲಿಂಗಕ್ಕೆ ಕೊಡದೆ ಕೊಂಬುದೀಗ ಭಿನ್ನ ಭೋಜನ, ಮುಂದಿಟ್ಟ ಸಕಲ ಪದಾರ್ಥಂಗಳಂ ಲಿಂಗಕ್ಕೆ ಒಂದೇವೇಳೆ ಕೊಡದೆ ಎತ್ತಿದ ಭೋಜ್ಯವಂ ಲಿಂಗಕ್ಕೆ ಕೊಟ್ಟು ಆ ಭೋಜ್ಯವಂ ಇಳುಹದೆ ಕೊಂಬುದೀಗ ಪ್ರಸಾದ ಭೋಜನ, ಮುಂದಿಟ್ಟ ಸಕಲ ಪದಾರ್ಥಂಗಳ ಲಿಂಗಕ್ಕೆ ಮೊದಲುಕೊಟ್ಟು, ಮತ್ತೆ ಭೋಜ್ಯ ಭೋಜ್ಯಕ್ಕೆ ಕೊಟ್ಟು ಕೊಂಬುದೀಗ ಸಹ ಭೋಜನ, ಇಂತೀ ತ್ರಿವಿಧ ಭೋಜನದಂತರಂಗದನ್ವಯವ ನಿಮ್ಮ ಶರಣರೇ ಬಲ್ಲರಯ್ಯಾ ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

ಒಪ್ಪ = ಸೌಂದರ್ಯ, ಸರಿಯಾದದ್ದು; ಸೆಜ್ಜೆ = ಇರುವಸ್ಥಳ; ಭೋಜ್ಯ = ಉಣ್ಣತಕ್ಕ ಪದಾರ್ಥ; ಅನ್ವಯ = ಸಂಬಂಧ.

೩೪. ಶಿವನ ಕೃಪೆಯಿಂದ ಎನ್ನ ಪುಣ್ಯ ಹಣ್ಣಾದಂತೆ ಸರ್ವಾಂಗದಲ್ಲಿ ಪ್ರಸಾದಂಗಳ ನಾನು ಎಡೆಬಿಡದೆ, ಆಚಾರ ಪ್ರಸಾದವೇ ಆದಿ ಪ್ರಸಾದವೆಂದು ಧರಿಸಿರ್ದ ಸಂಭ್ರಮವ ನೋಡಾ. ಎಲೆ ಅಮ್ಮ ಮುಕ್ತಿಪದವ ತೋರುವ ಪ್ರಸಾದವ ತತ್ವದ ಎರಡರ ಮೇಲೆ ಧರಿಸಿದೆ. ಆ ಪ್ರಸಾದವೇ ಅಭ್ಯಂತರದ ಪಂಚಪ್ರಸಾದಂಗಳ ಪಂಚಸ್ಥಾನದಲ್ಲಿ ಧರಿಸಿಪೆ. ಪ್ರಸಿದ್ಧ ಪ್ರಸಾದವ ಆಕಾಶದಲ್ಲಿ ಧರಿಸಿದೆ. ಸಿದ್ಧ ಪ್ರಸಾದವ ಬ್ರಹ್ಮರಂಧ್ರದಲ್ಲಿ ಧರಿಸಿದೆ. ಶುದ್ಧಪ್ರಸಾದವ ಶಿಖಿಯಲ್ಲಿ ಧರಿಸಿದೆ. ಮಹಾ ಪ್ರಸಾದವ ಪಶ್ಚಿಮದಲ್ಲಿ ಧರಿಸಿದೆ. ಇಂತಪ್ಪ ಬ್ರಹ್ಮವೆಂಬ ಮಹಾ ಪ್ರಸಾದಂಗಳ ನಾನು ದಿವಾರಾತ್ರಿ ಎನ್ನದೆ, ಪೂಜೆಯ ಮಾಡಿದಲ್ಲಿಯೇ ಎನಗೆ ಪರಮಾರ್ಥದರಿವು ಕೈಸಾರಿತ್ತು. ಆ ಪರಮಾರ್ಥದರಿವು ಕೈಸಾರಿದಲ್ಲಿಯೇ ಎನ್ನ ತನು, ಮನ, ಧನಂಗಳು ಪದಾರ್ಥಂಗಳಾದವು. ಆ ಪದಾರ್ಥಂಗಳ ಏಕಚಿತ್ತ ಮನೋಭಾವದಲ್ಲಿ ತೋಂಟದ ಸಿದ್ಧಲಿಂಗನೆಂಬ ನಿಃಷ್ಕಲ ಬ್ರಹ್ಮಕ್ಕೆ ಸಮರ್ಪಿಸಿದಲ್ಲಿಯೇ ಎನಗೆ

ಅನಿತ್ಯವು ಕೆಟ್ಟು, ನಿತ್ಯವೆಂಬುದು ನಿಜವಾಯಿತಯ್ಯ ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

೩೫. ಮುಕ್ತಿಗೆ ಸದಾ ಸಂಧಾನದಲಿ ಇರಬೇಕೆಂದು ಶಿವಶರಣರು ನುಡಿವುತಿಪ್ಪರು. ಆ ಸಂಧಾನದ ಹೊಲಬ ನಾನರಿಯೆ. ಎನಗೆ ಮುಕ್ತಿಯಿಲ್ಲ. ಇನ್ನೇವೆ ಇನ್ನೇವೆನೆಂದು ಕಂಬನಿದುಂಬಿ ಕರಗುತಿಪ್ಪ ಮನವೇ, ಗುರು ಕೊಟ್ಟ ಸಂಧಾನವೇ ಕರಕಮಲದಲ್ಲಿ ಪ್ರಸನ್ನತ್ವ ಪ್ರಸಾದವುಂ ಪ್ರತ್ಯಕ್ಷವಾಗಿ ತೋರುತ್ತಿದೆ. ಗುರುಕೊಟ್ಟ ಸಂಧಾನವೇ ಎಂಟೆಸಳಿನ ಚೌವಳದ ಮಧ್ಯ ದಲ್ಲಿ ಹೊಂಗಳಸದಂತೆ ಥಳಥಳನೆ ಹೊಳೆವುತ್ತಿದೆ. ಗುರುಕೊಟ್ಟ ಸಂಧಾ ನವೇ ಮುಪ್ಪುರದ ಮಧ್ಯದಲ್ಲಿ ರತ್ನ ಮಿಂಚಿನಂತೆ ಕುಡಿವರಿದು ಉರಿವು ತ್ತಿದೆ. ಗುರುಕೊಟ್ಟ ಸಂಧಾನವೇ ಪಂಚಪತ್ರದ ಮಧ್ಯದಲ್ಲಿ ಬೆಳ್ದಿಂಗಳಲತೆ ಯಂತೆ ಬೀದಿವರಿದು ಬೆಳಗು ಬೀರುತ್ತಿದೆ. ಈ ಪ್ರಕಾರದ ಬೆಳಗೆ ಮುಕ್ತಿಗೆ ಸಂಧಾನವಾಗಿ ಒಪ್ಪುತಿಪ್ಪುದು. ಇದನೆ ಕಣ್ದುಂಬಿ ನೋಡಿ ಇದನೆ ಮನದ ಣಿವಂತೆ ಹಾಡು. ಇದನೆ ಅಪ್ಪಿ ಅಗಲದಿಪ್ಪುದೇ ನಿಜಮುಕ್ತಿ. ಇದಕೆ ತಪ್ಪದು. ನೀನಂಜಬೇಡ. ಗುರುಕೊಟ್ಟ ಸಂಧಾನವ ಮರೆದು ಭಿನ್ನವಿಟ್ಟು ಲಕ್ಷಿಸುವ ಸಂಧಾನವೆಲ್ಲ ಭವದ ಸಂಧಾನವಯ್ಯಾ ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

ಹೊಲಬು = ಮಾರ್ಗ; ಹೊಂಗಳಸ = ಬಂಗಾರದ ಕಳಸ; ಮುಪ್ಪುರ = ಮೂರು ಊರುಗಳಿರುವಸ್ಥಳ; ಕುಡಿವರಿ = ಹಬ್ಬು; ಬೀದಿವರಿ = ಪಸರಿಸು;

೩೬. ಕುಂದಣಕ್ಕೆ ಒಪ್ಪುವ ಒರೆಬಣ್ಣದ ಮಿಶ್ರವ ಚಿನ್ನ ಒರೆವವ ಬಲ್ಲನಲ್ಲದೆ ಗೈದುಂಬ ಒಕ್ಕಲ ಮಗನೆಂತು ಬಲ್ಲನಯ್ಯಾ? ವಸ್ತುವನೊಡ ಗೂಡುವ ಸಂಧಾನದ ನುಡಿಯ ಗಡಣದ ಬೆಳಗ ಲಿಂಗಸಂಧಾನಿ ಬಲ್ಲನ ಲ್ಲದೆ ಆವು ಮರವೆಯನೊಳಗೊಂಡಿಪ್ಪ ವೇಷಧಾರಿಗಳವರೆತ್ತ ಬಲ್ಲರಯ್ಯಾ ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

ಗಡಣ = ಸಮೂಹ.

೩೭. ಕತ್ತಲೆ ಸತ್ತು ಬೆಳಗು ಬೀದಿವರಿಯಿತ್ತು ನೋಡಾ. ಎಲೆ ಅವ್ವಾ ಪಂಚತತ್ವಂಗಳ ಮೇಲಿಪ್ಪ ಆಚಾರ ಲಿಂಗದ ನೈಷ್ಠೆಯ ಬಲದಿಂದ ಅಖಂಡಿತ ಕರಣಂಗಳನೊಳಗೊಂಡಿಪ್ಪ ಈಷಣತ್ರಯಂಗಳ ಭೋಗವನಿಕ್ಕಿ ತ್ಯಾಗಾಂಗಿ ಯಾದೆ. ಹದಿನೇಳು ತತ್ವಂಗಳ ಮೇಲಿಪ್ಪ ಜಂಗಮಲಿಂಗದ ಎಚ್ಚರಿನ ಬಲದಿಂದ ಅನಂತ ಸವಿಯ ನೊಳಗೊಂಡಿಪ್ಪ ಷಡುರಸಂಗಳಲ್ಲಿ ಲಿಂಗ



ಭೋಗೋಪಭೋಗಿಯಾಗಿ, ಭೋಗಾಂಗಿಯಾದೆ. ಮೂರು ತತ್ವಂಗಳ ಮೇಲಿಪ್ಪ ನಿರಾಕಾರಲಿಂಗದ ಅರುಹಿನ ಬಲದಿಂದ ಪ್ರಣವ ಪಂಚಾಕ್ಷ ರಿಯಂ ಸ್ಮರಿಸಿ, ಮನ ಮಹಾಲಿಂಗದಲ್ಲಿ ಯೋಗವಾಗಿ, ಯೋಗಾಂಗಿ ಯಾದೆ. ಚಿಪ್ಪಬ್ರಹ್ಮಾಂಡದೊಳಗಣ ಏಳು ತಾವರೆಯ ಮೇಲಿಪ್ಪ ನಿಃಕಲ ಚಿದ್ಬಿಂದುಲಿಂಗಕ್ಕೆ ಪ್ರಾಣಪೂಜೆಯಂ ಮಾಡಿ, ಮನ ಮಹಾಜ್ಞಾನದ ಬಲ ದಿಂದ ನವದ್ವೀಪಂಗಳ ಲಿಂಗಂಗಳ ಬೆಳಗು ಪಿಂಡಾಂಡದಲ್ಲಿ ಪ್ರಭಾವಿಸಿ ತೋರುತಿಪ್ಪುದಾಗಿ, ನಾನು ಸರ್ವಾಂಗಲಿಂಗಿಯಾದೆನಯ್ಯ ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

ಬೀದಿವರಿ = ಹೊರಹೊರಡು, ಪ್ರಸಾರವಾಗು; ಅಖಂಡಿತ = ಸಂಪೂರ್ಣವಾಗಿ ರುವ; ಈಷಣತ್ರಯ = ದ್ರವ್ಯ ಹೆಂಡತಿ ಮತ್ತು ಮಕ್ಕಳು ಇವರಿಗೋಸ್ಕರ ಆಶೆ; ಪ್ರಭಾವಿಸು = ಒಡಮೂಡು;

೩೮. ಮಣ್ಣಹಿಡಿದವರೆಲ್ಲರು ಬ್ರಹ್ಮನ ಸೃಷ್ಟಿಗೊಳಗಾದರು ಹೊನ್ನು ಹಿಡಿದವರೆಲ್ಲರು ವಿಷ್ಣುವಿನ ಸ್ಥಿತಿಗೊಳಗಾದರು. ಹೆಣ್ಣಹಿಡಿದವರೆಲ್ಲರು ರುದ್ರನ ಸಂಹಾರಕ್ಕೊಳಗಾದರು. ಹೊನ್ನು, ಹೆಣ್ಣು, ಮಣ್ಣು ಬಿಟ್ಟು ಲಿಂಗ ಸಂಯೋಗವನರಿಯದೆ, ಸದಾಚಾರದಲ್ಲಿ ತಿರಿದುಂಡು, ಆತ್ಮಸುಖಿಯಾದವ ರೆಲ್ಲರು ಫಲಭೋಗಕ್ಕೊಳಗಾದರು. ನಾನು ಮೂರನುಬಿಟ್ಟು ಆರುಕಂಡು ಮೂದೇವರ ಗೆಲಿದೆ ಆರುಬಿಟ್ಟು ಮೂರಕಂಡು ಮನಮುಳುಗಿ ಮೂರೊಂದು ಪದವದಾಂಟಿ ಶಿವನೊಳಗಾದೆನಯ್ಯ ಘನಲಿಂಗಿಯ ಮೋಹದ ಚನ್ನಮಲ್ಲಿ ಕಾರ್ಜುನಾ.

೩೯. ಶರಣಸಂಭಾಷಣೆಯಿಂದ ಪುರಾತರ ವಚನದ ಪರಮಾಮೃತದ ದಣಿಯಲುಂಡು, ಆ ವಚನದ ಹೆಜ್ಜೆವಿಡಿದು ಹೋಗಿ, ತ್ರಿವಿಧಲಿಂಗದ ಅಸ್ಯಂತವಂ ಅರಿದು, ಆ ಲಿಂಗಂಗಳಂ ಅರಿವಿಡಿದಾಚರಿಸಿ, ಷಡಂಗಷಡ್ವಿಧ ಲಿಂಗಂಗಳಿಗೆ ಮಾತೃಸ್ಥಾನವಾದ ನಿಷ್ಕಲ ಬ್ರಹ್ಮವೆನಿಪ್ಪ ಸಿದ್ಧಲಿಂಗ ಪ್ರಭುವಕಂಡು, ಆ ಸಿದ್ಧಲಿಂಗ ಪ್ರಭುವಂ ಹೃದಯ ತ್ರಿಪುಟ ಸುಷುಮ್ನ ಎಂಬ ಮೂರು ಸಿಂಹಾಸನದ ಮೇಲೆ ಗುರುಲಿಂಗಜಂಗಮವೆನಿಸಿಕೊಂಡು, ಮೂರ್ತಿಗೊಳಿಸಿ ತುಂಬಿತುಳಕದ, ಮಂದಮಾರುತನ ಸ್ಪರ್ಸೋಂಕದ, ಭಾನುವಿನ ಕಿರಣಕ್ಕೆ ಬಳಲದ, ಚಂದ್ರೋದಯಕ್ಕೆ ಅಂಪವಾಗದ, ಜನರ ಕಣ್ಮನಕ್ಕೆ ಅಗೋಚರವಾದ ಜಾಜಿ, ಸಂಪಿಗೆ ಇರುವಂತಿಗೆ, ಮಲ್ಲಿಗೆ, ಕೆಂದಾವರೆ, ಸೇವಂತಿಗೆ ಎಂಬ ಭಾವ ಪುಷ್ಪಂಗಳಲ್ಲಿ ಪೂಜೆಯಂ ಮಾಡಿ,

ಬೀಗಿ ಬೆಳೆವುತಿಪ್ಪಶರಣಂಗೆ ಮತ್ತೆ ಅನುಭಾವದ ಸುಖಸವಿದೋರ್ಪುದೆ ಅಯ್ಯಾ? ಕನೆಸಾಧ್ಯವಾದಬಳಿಕ ಹಾಲಿನ ಹಂಗೇತಕಯ್ಯಾ ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ?

ಕೆಳದಿ = ಸ್ನೇಹಿತಳು; ಬೀಗು = ಹೆಚ್ಚಾಗು;

೪೦. ಲಿಂಗಾಂಗ ಸಂಬಂಧದ ಭೇದವ ನರಿಯದೆ ನಾವು ಲಿಂಗಾಂಗ ಸಂಬಂಧಿಗಳೆಂದು ಅಂವಚಂವವಾಗಿ ನುಡಿದುಕೊಂಬ ಕ್ರಿಯಾಭ್ರಾಂತರು ನೀವು ಕೇಳಿರಿ ಲಿಂಗಾಂಗ ಸಂಬಂಧದ ಉತ್ತರೋತ್ತರದ ನಿರ್ಣಯವ. ಹೊರಗಣ ಹುವ್ವನೇತಂದು ಸ್ಥೂಲ ತನುವಿನ ಮೇಲಿಪ್ಪ ಆಚಾರಲಿಂಗವಂ ಪೂಜೆಯಂ ಮಾಡಿ, ತನುವಸಮರ್ಪಿಸಿ ಬೇಡಿಕೊಂಡು ಹೊರಗಣ ಹೊನ್ನು. ಹೆಣ್ಣು. ಮಣ್ಣು ಷಟ್ಕರ್ಮಂಗಳಂ ಬಿಟ್ಟುದೆ ಇಷ್ಟಲಿಂಗದ ಪೂಜೆ. ಒಳಗಣ ಹುವ್ವನೇತಂದು ಸೂಕ್ಷ್ಮತನುವಿನ ಮೇಲಿಪ್ಪ ಜಂಗಮ ಲಿಂಗಮಂ ಪೂಜೆಯಂ ಮಾಡಿ, ಮನವ ಸಮರ್ಪಿಸಿ ಉಪಾವಸ್ಥೆಯಂ ಮಾಡಿ, ಒಳಗಣ ಅಂತಃಕರಣಂಗಳ ಸುಟ್ಟುದೆ ಪ್ರಾಣಲಿಂಗದ ಪೂಜೆ. ಮನೋಮಧ್ಯದೊಳಗಿಪ್ಪ ಭಾವಪುಷ್ಪವನೆ ತಂದು ಕಾರಣ ತನುವಿನ ಮೇಲಿಪ್ಪ ತೃಪ್ತಿಲಿಂಗವಂ ಪೂಜೆಯಂ ಮಾಡಿ ಸಂತೋಷವಮಂ ಸಮರ್ಪಿಸಿ ದೈನ್ಯಂ ಬಟ್ಟು, ಜ್ಞಾನ ಕ್ರಿಯೆಗಳಳಿದುದೆ ಭಾವಲಿಂಗದ ಪೂಜೆ. ಈ ಪ್ರಕಾರ ಲಿಂಗಾಂಗದ ಸಾಧಕತ್ವವಂ ಶಿವರಾತ್ರೆಯ ಸಂಕಣ್ಣಂಗೊಲಿದಂತೆ ಎನಗೊಲಿದು ಕರುಣಿಸಯ್ಯಾ ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

ಉಪಾವಸ್ಥೆ = ಅಭಿಲಾಷೆ.

೪೧. ಪರಮ ಲಿಂಗಾಂಗಿಯ ಇರವು ಎಂತಪ್ಪುದಯ್ಯಾ ಎಂದೊಡೆ, ವಾಕ್ಯ ಮೂಲ ಮಂತ್ರದಲ್ಲಿ ಜೋಕೆ ಗುಂದದೆ, ಪಾಣಿ ಶಿವಲಿಂಗಪೂಜೆಗೆ ಮಾಣದೆ, ಮನಸಂದು ಪಾದ ಏಕಾಂತ ವಾಸಕ್ಕೆ ಹದುಹದಿಂದ ಪದವಿಟ್ಟು, ಗುಹ್ಯಬ್ರಹ್ಮಚಾರಿಯಾಗಿ, ಆನಂದವಂ ಅಳಿದು, ಪಾಯುವಿನ ಗುಣ ಆದಕ್ಕದು ಸಹಜವೆಂದು ನೆಲೆಯಮಾಡಿ, ಕರ್ಮೇಂದ್ರಿಯಂಗಳ ಕಾಲ ಮುರಿದು, ಶಬ್ದ ಮೊದಲು ಗಂಧ ಕಡೆಯಾದ ನಾಲ್ಕೊಂದು ವಿಷಯಂಗಳು ತನುಮನವ ಸೋಂಕುವದಕ್ಕೆ ಮುನ್ನವೇ ಲಿಂಗಾರ್ಪಣವ ಮಾಡಿ, ಆ ವಿಷಯಂಗಳಿಗೊಳಗಾಗದೆ, ಆತ್ಮತ್ರಯಂಗಳ ತಾಳಕೊಯ್ದು, ಪಂಚಬ್ರಹ್ಮವ ಪಂಚೇಂದ್ರಿಯಂಗಳಲ್ಲಿ ಪ್ರತಿಷ್ಠೆಯಂ ಮಾಡಿ, ಕಾಮುಕತನವ ಕಡೆಗೊತ್ತಿ, ಜ್ಞಾನೇಂದ್ರಿಯಂಗಳ ನೆನಹ ಕೆಡಿಸಿ, ಪ್ರಾಣ ಮೊದ



ಲಾದ ಮೂರೆರಡು ವಾಯುಗಳ ಜರಿದು, ಸೆರೆವಿಡಿದು ಮೂಲವಾಯುವಿನ ಸಮಮಾಡಿ ಪಂಚವಾಯುಗಳ ಸಂಚವಂ ಕೆಡಿಸಿ, ಅಂತಃಕರಣಂಗಳೆಂಬ ಮಾನಸಗಳ್ಳರ ಕಳೆದು, ದ್ವಾದಶ ಪತ್ರದ ಹೊಂದಾವರೆಯ ಲಿಂಗಕ್ಕೆ ನಿರಂಜನ ಪೂಜೆಯಂ ಮಾಡುವ ಪೂಜಾರಿಗಳಂ ಮಾಡಿ, ಕರಣಂಗಳಂ ಗೆಲಿದು, ಅಂತಃಕರಣಂಗಳಂ ಚಿಂತೆಗೊಳಗು ಮಾಡಿ, ಆತ್ಮಜ್ಞಾನವಂ ಅಡಗಿಸಿ ಭೋಗವಂ ನೀಗಿ, ಪಂಚಭೂತಂಗಳೆಂಬ ಭೂಪಾಲರಿಗೆ ಪರಿಚಾರಕರಾದ ಇಪ್ಪತ್ತೈದು ಜೀವರಿಗೆ ನಿರುದ್ಯೋಗವಂ ಮಾಡಿ, ಫಲಪದಂಗಳನೊದೆದು, ನಿರ್ವಯಲ ಕೂಟಕ್ಕೆ ಮನವಿಟ್ಟು ಇಷ್ಟಲಿಂಗವಂ ಕರಸ್ಥಲದಲ್ಲಿ ಪಿಡಿದು ಪೂಜೆಯಂ ಮಾಡಿ, ಆ ಲಿಂಗವಂ ಅನಿಮಿಷ ದೃಷ್ಟಿಯಿಂದ ನೋಡುವದೀಗ ಅಂಗದನೋಟ, ಅದು ರತ್ನಾಕರ ಜಂಬೂದ್ವೀಪದ ಸುನಾದ. ಬ್ರಹ್ಮದ ಕೂಟ ಹೀಗಲ್ಲದೆ, ಪಂಚಭೂತಂಗಳ ಕುಟಿಲ ವ್ಯಾಪಾರಂಗಳೆಂಬ ಬಲೆಗೆ ತಾನು ಸಿಲುಕಿ, ಭಕ್ತಿ ಜ್ಞಾನ, ವೈರಾಗ್ಯವಂ ಸುಟ್ಟುರುಹಿ, ಉಪಾಧಿಕೆಯಲ್ಲಿ ಒಡವೆರೆದು, ಹೊಟ್ಟೆಯಕಿಚ್ಚಿಂಗೆ ಇಷ್ಟಲಿಂಗವಂ ಕರದಲ್ಲಿ ಪಿಡಿದು, ಪೂಜೆಯಮಾಡಿ, ಇದಿರ ಮೆಚ್ಚಿಸುವೆನೆಂದು ಆ ಲಿಂಗವ ನೋಡುವ ನೋಟವೆಂತಪ್ಪುದೆಂದೊಡೆ, ಹೊತ್ತು ಹೋಕನ ಕೋಡಗ ತಿರುಗಾಟಕ್ಕೆ ಬಂದು ಮಾಣಿಕವಂ ಕಂಡು, ಆ ಮಾಣಿಕವಂ ಕರದಲ್ಲಿ ಪಿಡಿದು, ಮೂಸಿ, ನೆಕ್ಕಿ ನೋಡಿ ಹಲ್ಲು ಕಿರಿದು ನೋಡಿ, ನೋಡಿ, ಕಾಲವಂ ಕಳೆವ ತೆರನಂತಾಯಿತ್ತಯ್ಯಾ ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

ಮಾಣದೆ = ಬಿಡದೆ; ಸಂದು = ಒಪ್ಪಿ; ಪ್ರತಿಷ್ಠೆ = ಸ್ಥಾಪನ; ಹೊಂದಾವರೆ = ಬಂಗಾರದ ಬಣ್ಣದ ಕಮಲ; ಅನುಮಿಷ = ಏಕಾಗ್ರ; ರತ್ನಾಕರ = ಸಮುದ್ರ;

೪೨. ಮುಚ್ಚಿ ಮೂದಲಿಸಿ ಮೊನೆಗೆಡಿಸುವ ಮಾಯಾ ಪ್ರಪಂಚನ ಬಲೆಗೆ ಸಿಲುಕದೆ, ನಾನು ಧ್ಯಾನ ಮೌನ ಉಪಾವಸ್ಥೆಯಿಂದ ಷಟ್ಕೋಣೆಯ ಸುವರ್ಣ ದ್ವೀಪದ ಅರಸಿನ ಬಲವಿಡಿದು ಪಂಚವಿಂಶತಿ ತತ್ವಂಗಳೆಂಬ ಮಾಯಾಸುಭಟರ ಸುಡಕೊಂದು ಪಂಚಬ್ರಹ್ಮವೇ ಪಂಚಭೂತಂಗಳಾಗಿ, ತನುವಿಡಿದು ಲಿಂಗನೈಷ್ಠೆಯಿಂದ ಓಂಕಾರಸ್ವರೂಪನಾಗಿ ಅಹಂಕರಿಸದೆ, ದಾಸೋಹಂ ಭಾವದಿಂದ ತ್ರಿಕೂಟ ಪರ್ವತಕ್ಕೆ ಪಶ್ಚಿಮ ದಿಕ್ಕಿನಲ್ಲಿ ಅನಂತ ಕಾರ್ಮುಗಿಲ ಮಿಂಚುಗಳಂತೆ ತೋರುತಿಪ್ಪುದೀಗ ಶಾಂಭವ ದ್ವೀಪ. ಆ ಶಾಂಭವ ದ್ವೀಪದಲ್ಲಿ ನೆಲಸಿಪ್ಪ ನಿರವಯಲ ಬೆಳ್ದಿಂಗಳ ಬೀಜವಂ ನಾನು

ಕಂಡು, ಕಂಬನಿದುಂಬಿ ನಮಸ್ಕಾರಮಂ ಮಾಡಿದ ಫಲದಿಂದ ಬ್ರಹ್ಮ, ವಿಷ್ಣು, ರುದ್ರ ಇಂತೀ ಮೂವರಂ ಕೆಡೆಮೆಟ್ಟಿ ಜನನ ಮರಣಂಗಳ ಗೆಲಿದು ನಾನು ಹುಟ್ಟುಗೆಟ್ಟೆನಯ್ಯ ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

ಮೂದಲಿಸು= ಸಿಟ್ಟುಮಾಡು; ಪಂಚವಿಂಶತಿ= ಇಪ್ಪತ್ತೈದು; ಕಾರ್ಮುಗಿಲ= ಪೂರ್ವದ ಮಳೆಗಾಲದ ಮುಗಿಲು.

೪೩. ಅಯ್ಯಾ ಪಂಚತತ್ವಂಗಳ ಪಡೆವ ತತ್ವ ಪ್ರತ್ಯಕ್ಷವಾಗದ ಮುನ್ನ ಪದ್ಮಜಾಂಡವ ಧರಿಸಿಪ್ಪ ಕಮಠ ದಿಕ್ಕರಿಗಳಿಲ್ಲದಮುನ್ನ ನಿರ್ಮಲಾಕಾರವೇ ಸಾಕಾರವಾಗಿ ನಿರಂಜನನೆಂಬ ಪ್ರಣಮವಾಯಿತ್ತಯ್ಯಾ. ಆ ನಿರಂಜನ ಪ್ರಣಮವೆಂಬ ಮರುಜೀವಣಿಯ ಬೀಜ ಹ್ರಾಂಕಾರ ಮಂಟಪದಲ್ಲಿ ಮೂರ್ತಿಗೊಂಡಿತ್ತಯ್ಯ. ಆ ನಿರಂಜನ ಪ್ರಣಮವೆಂಬ ಮರುಜೀವಣಿಯ ಬೀಜ ತನ್ನ ನಿರಂಜನ ಶಕ್ತಿಯ ನೆನಹಿಂದ ಹಕಾರಚಕ್ರವೆಂಬ ಕುಂಭಿನಿಯಲ್ಲಿ ಶುದ್ಧಪ್ರಸಾದವೆಂಬ ಮೊಳೆ ತೋರಿತ್ತಯ್ಯಾ. ಆ ಶುದ್ಧ ಪ್ರಸಾದವೆಂಬ ಮೊಳೆ ತನ್ನ ಶೂನ್ಯಶಕ್ತಿಯ ಸಂಜ್ಞೆಯಿಂದ ಕರ್ಣಿಕಾಪ್ರವೇಶ ಪಂಚನಾದವನುಳ್ಳ ಷೋಡಶ ಕಲಾಪುಂಜರಂಜಿಪ ಹನ್ನೊಂದುನೂರು ದಳದ ಪತ್ರದಲ್ಲಿ ಪ್ರಣಮ ಚಿತ್ರ ಒಪ್ಪುತ್ತಿಪ್ಪ ಹ್ರೀಂಕಾರ ಸಿಂಹಾಸನದ ಮೇಲೆ ಸಿದ್ಧಪ್ರಸಾದವೆಂಬ ಎಳೆ ತಳಿರಾಯಿತ್ತಯ್ಯಾ. ಆ ಸಿದ್ಧ ಪ್ರಸಾದನೆಂಬ ಎಳೆ ತಳಿರು ತನ್ನ ಶಾಂತಿಶಕ್ತಿಯ ಚಲನೆಯಿಂದ ಮೂರು ಬಟ್ಟೆಯ ಮೇಲಿಪ್ಪ ಎರಡು ಮಂಟಪದ ಮಧ್ಯದಲ್ಲಿರ್ಪ ಪ್ರಸಿದ್ಧಪ್ರಸಾದವೆಂಬ ಮಹಾ ವೃಕ್ಷ ಬೇಗಿ ಬೆಳೆಯಿತ್ತಯ್ಯಾ. ಆ ಪ್ರಸಿದ್ಧ ಪ್ರಸಾದನೆಂಬ ಮಹಾವೃಕ್ಷ ತನ್ನ ಚಿಚ್ಛಕ್ತಿಯ ಲೀಲಾವಿನೋದದಿಂದ ಪಂಚಶಕ್ತಿಗಳೆಂಬ ನಾಲ್ಕೊಂದು ಹೂವಾಯಿತ್ತು. ಆ ಹೂವುಗಳೇ ಮಹಾಕೂಟದಿಂದ ಪಂಚಲಿಂಗಗಳೆಂಬ ಪಂಚಪ್ರಕಾರದ ಮೂರೆರಡು ಹಣ್ಣಾಯಿತ್ತು. ಆ ಹಣ್ಣುಗಳ ಆದ್ಯಂತವಂ ಪಿಡಿದು ಸದ್ಯನ್ಮುಕ್ತಿಯಾಗಬೇಕೆಂದು ಸದಾಕಾಲದಲ್ಲಿ ಬಯಸುತ್ತಿರ್ಪ ಮಹಾ ಶಿವಶರಣನು ತಿಳಿದುನೋಡಿ, ಮನದಲ್ಲಿ ಕಂಡು, ಆರುನೆಲೆಯ ನಿಚ್ಚಣಿಗೆಯ ಆ ತರುಲತೆಗೆ ಸೇರಿಸಿ ಜ್ಞಾನಕ್ರಿಯೆಗಳೆಂಬ ದೃಢದಿಂದೇರಿ ನಾಲ್ಕನೆಲೆಯ ಪೀತವರ್ಣದ ಹಣ್ಣ ಸುಚಿತ್ತವೆಂಬ ಹಸ್ತದಲ್ಲಿ ಪಿಡಿದು, ಆರೆಲೆಯ ನೀಲವರ್ಣದ ಹಣ್ಣ ಸುಬುದ್ಧಿ ಎಂಬ ಹಸ್ತದಲ್ಲಿ ಪಿಡಿದು, ಹತ್ತೆಲೆಯ ಸ್ಫಟಿಕ ವರ್ಣದ ಹಣ್ಣ ನಿರಹಂಕಾರವೆಂಬ ಹಸ್ತದಲ್ಲಿ ಪಿಡಿದು ಹನ್ನೆರಡೆ



ಲೆಯ ಸುವರ್ಣ ವರ್ಣದ ಹಣ್ಣ ಸುಮನವೆಂಬ ಹಸ್ತದಲ್ಲಿ ಪಿಡಿದು, ಹದಿನಾರೆಲೆಯ ಮಿಂಚುವಣ್ಣದ ಹಣ್ಣ ಸುಜ್ಞಾನವೆಂಬ ಹಸ್ತದಲ್ಲಿ ಪಿಡಿದು ಆಸನ ಸ್ಥಿರನಾಗಿ, ಕಣ್ಮುಚ್ಚಿ ಜ್ಞಾನಚಕ್ಷುವಿನಿಂ ನಿಟ್ಟಿಸಿ, ಕಟ್ಟೆಕ್ಕರಿಂ ನೋಡಿ, ರೇಚಕ ಪೂರಕ ಕುಂಭಕಂಗಳಿಂದ, ಪೆಣ್ದುಂಬಿನಾದ, ವೀಣಾನಾದ, ಘಂಟಾನಾದ, ಭೇರೀನಾದ, ಮೇಘನಾದ, ಪ್ರಣವನಾದ, ದಿವ್ಯನಾದ, ಸಿಂಹನಾದಂಗಳಂ ಕೇಳಿ, ಹರುಷಂಗೊಂಡು ಆ ಫಲಂಗಳಂ ಮನವೆಂಬ ಹಸ್ತದಿಂ, ಮಡಿಲಂತುಂಬಿ, ಮಾಯಾ ಕೋಳಾಹಳನಾಗಿ, ಪಂಚಭೂತಂಗಳ ಸಂಚವ ಕೆಡಿಸಿ, ದಶವಾಯುಗಳ ಹಸಗೆಡಿಸಿ, ಅಷ್ಟಮದಂಗಳ ಹಿಟ್ಟುಗುಟ್ಟಿ, ಅಂತಃಕರಣಂಗಳ ಚಿಂತೆಗೊಳಗುಮಾಡಿ, ಮೂಲಾಹಂಕಾರಗಳ ಮುಂದುಗೆಡಿಸಿ, ಸಪ್ತ ವ್ಯಸನಂಗಳ ತೊತ್ತುಳ ದುಳಿದು, ಜ್ಞಾನೇಂದ್ರಿಯಂಗಳ ನೆನಹುಗೆಡಿಸಿ, ಕರ್ಮೇಂದ್ರಿಯಂಗಳ ಕಾಲಮುರಿದು, ತನ್ಮಾತ್ರಂಗಳ ತಾಳಕೊಯ್ದು, ಅರಿಷಡ್ವರ್ಗಂಗಳ ಕೊರಳನರಿದು ಸ್ಫಟಿಕದ ಪುತ್ಥಳಿಯಂತೆ ನಿಜಸ್ವರೂಪನಾಗಿ, ಎರಡೆಸಳ ಕಮಲ ಕರ್ಣಿಕಾಗ್ರದೊಳಿಪ್ಪ ಪರಬ್ರಹ್ಮದ ಮಾಣಿಕ್ಯ ವರ್ಣದ ದ್ವಿಪಾದವಂ ಸುಜ್ಞಾನವೆಂಬ ಹಸ್ತದಿಂ ಪಿಡಿದು, ಓಂಕಾರವೆಂಬ ಮಂತ್ರದಿಂದ ಸಂತೈಸಿ, ನೀರು ನೀರು ಕೂಡಿದಂತೆ ಪರಬ್ರಹ್ಮವನೊಡಗೂಡಿ ಆ ಪರಬ್ರಹ್ಮವು ತಾನಾಗಿ, ಬ್ರಹ್ಮರಂಧ್ರವೆಂಬ ಶಾಂಭವ ಲೋಕದಲ್ಲಿರ್ಪ, ನಿಃಷ್ಕಲ ಪರಬ್ರಹ್ಮದ ನಿರಾಕಾರ ಪಾದವಂ, ನಿರ್ಭಾವನೆಂಬ ಹಸ್ತದಿಂ ಪಿಡಿದು, ಪಂಚಪ್ರಸಾದನೆಂಬ ಮಂತ್ರದಿಂ ಸಂತೈಸಿ ಕ್ಷೀರ ಕ್ಷೀರ ಬೆರಸಿದಂತೆ ನಿಷ್ಕಲ ಬ್ರಹ್ಮವ ನೊಡಗೂಡಿ, ಆ ನಿಷ್ಕಲ ಬ್ರಹ್ಮವು ತಾನೆಯಾಗಿ, ಮೂರು ಮಂಟಪದ ಮಧ್ಯದಲ್ಲಿ, ಕುಸುಮಪೀಠದೊಳಿಪ್ಪ ಶೂನ್ಯ ಬ್ರಹ್ಮದ ಶೂನ್ಯ ಪಾದವಂ ನಿಷ್ಕಲ ಹಸ್ತದಿಂ ಪಿಡಿದು, ಕ್ಷಕಾರವೆಂಬ ಮಂತ್ರದಿಂ ಸಂತೈಸಿ ಘೃತ ಘೃತವ ಕೂಡಿದಂತೆ ಶೂನ್ಯ ಬ್ರಹ್ಮವ ನೊಡಗೂಡಿ ಆ ಶೂನ್ಯ ಬ್ರಹ್ಮವು ತಾನೆಯಾಗಿ "ನಿಶ್ಶಬ್ದಬ್ರಹ್ಮ ಮುಚ್ಯತೆ" ಎಂಬ ಒಂಬತ್ತು ನೆಲೆಯ ಮಂಟಪದೊಳಿರ್ಪ ನಿರಂಜನ ಬ್ರಹ್ಮದ ನಿರಂಜನ ಪಾದವಂ ಶೂನ್ಯವೆಂಬ ಹಸ್ತದಿಂ ಪಿಡಿದು, ಹ್ರಾಂಕಾರ ಮಂತ್ರದಿಂ ಸಂತೈಸಿ ಬಯಲು ಬಯಲು ಬೆರಸಿದಂತೆ ನಿರಂಜನ ಬ್ರಹ್ಮವ ನೊಡಗೂಡಿ ಆ ನಿರಂಜನ ಬ್ರಹ್ಮವು ತಾನೆಯಾಗಿ ಮಹಾಗುರು ಸಿದ್ಧಲಿಂಗ ಪ್ರಭುವಿನ ಗರ್ಭಾಬ್ಧಿಯಲ್ಲಿ ಜನಿಸಿದ ಬಾಲಕಿಯಯ್ಯಾ ನಾನು. ಎನ್ನ ಹೃದಯ ಕಮಲದೆಂಬ ಮಂಟಪದ ಚತುಃಪತ್ರಿಕಾ ಮಧ್ಯದ ಪದ್ಮ ಪೀಠ

ದಲ್ಲಿ ಎನ್ನ ತಂದೆ ಸ್ವಸ್ಥಿರನಾಗಿ ಎನಗೆ ಷಟ್‌ಸ್ಥಲಮಾರ್ಗ ಪೂರ್ವ ಪುರಾ
ತರ ವಚನಾನುಭಾವ ಭಕ್ತಿಜ್ಞಾನ ವೈರಾಗ್ಯವೆಂಬ ಜೇನು ಸಕ್ಕರೆ ಪರಮಾ
ಮೃತವ ದಣಿಯಲುಣಿಸಿದನಯ್ಯಾ. ಆ ಜೇನುಸಕ್ಕರೆ ಪರಮಾಮೃತವ
ದಣಿಯಲುಣಲೊಡನೆ ಎನ್ನ ಬಾಲತ್ವ ಕೆಟ್ಟು, ಯವ್ವನಂ ಬೆಳೆದು, ಬೆಡಗು
ಕುಡಿವರಿದು, ಮೊಟುಜವ್ವನೆ ಯಾದೆನಯ್ಯಾ ನಾನು. ಎನಗೆ ನಿಜಮೋಕ್ಷ
ವೆಂಬ ಮನ್ಮಥ ವಿಕಾರ ಎನ್ನ ನಂಡಲೆದು ಆಳ್ದು ನಿಂದಲ್ಲಿ ನಿಲ್ಲಲೀಸದಯ್ಯಾ.
ಅನಂತಕೋಟಿ ಸೋಮ ಸೂರ್ಯ ಪ್ರಕಾಶವನುಳ್ಳ ಪರಂಜ್ಯೋತಿಲಿಂಗವೆ,
ನಿಮ್ಮ ಕೃಪೆ ಎಂಬ ಶುಭಲಗ್ನದಲ್ಲಿ ಎನಗೆ ಶಿವಾನಂದ ಭಕ್ತಿಯೆಂಬ ತಾಳಿ
ಬಂದಿಯ ಕಟ್ಟಿ ಮಂತ್ರವಲ್ಲದೆ ಕುಮಂತ್ರವ ನುಡಿಯೆನೆಂಬ ಕಂಠಮಾಲೆ
ಯಧರಿಸಿ, ಅರ್ಪಿತವಲ್ಲದೆ ಅನರ್ಪಿತವ ಪರಿಮಳಿಸೆನೆಂಬ ಮೌಕ್ತಿಕದ
ಕಟ್ಟಾಣಿ ಮೂಗುತಿಯನಿಕ್ಕಿ ಸುಶಬ್ದವಲ್ಲದೆ ಅಪಶಬ್ದವ ಕೇಳೆನೆಂಬ ರನ್ನದ
ಕರ್ಣಾಭರಣಂಗಳ ತೊಡಿಸಿ, ಶರಣತ್ವವಲ್ಲದೆ ಜೀವತ್ವವನೊಲ್ಲೆನೆಂಬ
ತ್ರಿಪುಂಡ್ರಮಂ ಧರಿಸಿ ಕ್ರಿಯೆಯಲ್ಲದೆ ನಿಃಕ್ರಿಯೆಯ ಮಾಡೆನೆಂಬ ಮೌಕ್ತಿಕದ
ಬೊಟ್ಟನಿಕ್ಕಿ ನಿಮ್ಮವರಿಗಲ್ಲದೆ ಅನ್ಯರಿಗೆರಗೆನೆಂಬ ಕನಕಲತೆಯ ಬಾಸಿಗಮಂ
ಕಟ್ಟಿ, ಸಮ್ಯಜ್ಞಾನವಲ್ಲದೆ ಅಜ್ಞಾನವ ಹೊದ್ದೆನೆಂಬ ನವದುಕೂಲವನು
ಡಿಸಿ, ಲಿಂಗಾಣತಿಯಿಂದ ಬಂದುದನಲ್ಲದೆ ಅಂಗ ರತಿಯಿಂದ ಬಂದುದ
ಮುಟ್ಟೆನೆಂಬ ರನ್ನಗಂಕಣಮಂ ಕಟ್ಟಿ, ಶರಣ ಸಂಗವಲ್ಲದೆ ಪರಸಂಗವ
ಮಾಡೆನೆಂಬ ಪರಿಮಳಮಂ ಲೇಪಿಸಿ, ಶಿವಪದವಲ್ಲದೆ ಚತುರ್ವಿಧ ಪದಂಗಳ
ಬಯಸೆನೆಂಬ ಹಾಲು ತುಪ್ಪಂಗಳ ಕುಡಿಸಿ, ಪ್ರಸಾದವಲ್ಲದೆ ಭಿನ್ನರುಚಿಯ
ನೆನೆಯೆನೆಂಬ, ತಾಂಬೂಲಮಂ ನಿತ್ತು ಸಿಂಗರಂಗೆಯ್ದು ನಿನ್ನ ಕರುಣ
ಪ್ರಸಾದವೆಂಬ ವಸಂತ ಚಪ್ಪರದಲ್ಲಿ ಪ್ರಮಥಗಣಂಗಳ ಮಧ್ಯದಲ್ಲಿ ಎನ್ನ
ಮದುವೆಯಾಗಯ್ಯಾ ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನಾ.

೪೪. ಲೋಕದ ನಚ್ಚು ಮಚ್ಚನೇ ನೀಗಿ, ನಿಚ್ಚಟನಾಗಿ ಜ್ಞಾನ
ಕ್ರಿಯೆಗಳಿಂದಾಚರಿಸಿ, ಅಂಗ ಲಿಂಗ ಸಂಬಂಧಿಗಳಾದ ಶಿವಲಿಂಗ ಮೋಹಿ
ಗಳು ನೀವು ಕೇಳಿರಯ್ಯ, ಶರಣರು ಮುಕ್ತಿಪುರಕ್ಕೆ ಹೋಗುವ ಬಟ್ಟೆಯ
ಬೆಡಗು ಬಿನ್ನಾಣದ ಪರಿಯ. ಆ ಮುಕ್ತಿಪುರಕ್ಕೆ ಹೋಗುವ ಹಾದಿಯಲ್ಲಿ,
ಒಂದು ಪಂಚವರ್ಣದ ಕಣ್ಣಿ ಮನವೆಟ್ಟದ ಮಹಾ ಪಟ್ಟಣವಿದೆ. ಆ
ಪಟ್ಟಣವ ಕಟ್ಟಿದ್ದು ಮೊದಲಾಗಿ, ಊರು ಹಾಳಾಗಿರ್ಪುದು. ಆ ಪಟ್ಟ
ಣದ ನಡುವೆ ಹೋಗುತಿರ್ಪ ಹಾದಿಯಲ್ಲಿ ಅಹಂಕಾರ, ಮಮಕಾರಂಗ



ಳೆಂಬ ಎರಡು ಪಟ್ಟಣಂಗಳು ತುಂಬಿತುಳುಕುತ್ತಿವೆ. ಆ ಎರಡು ಪಟ್ಟ
ಣಕ್ಕೆ ಹೋಗುವ ಹಾದಿ ಎಲ್ಲ ಹೆಬ್ಬಟ್ಟೆಗಳಾಗಿಪ್ಪವು. ಆ ಎರಡು ಪಟ್ಟ
ಣದ ದಿಕ್ಕಿನಲ್ಲಿ ಒಂದು ಭಕ್ತಿಪುರವಿದೆ ಆ ಭಕ್ತಿಪುರಕ್ಕೆ ಹಾನಿ ಇಲ್ಲ.
ಆ ಭಕ್ತಿಪುರಕ್ಕೆ ಹೋದಲ್ಲದೆ ಮುಂದಣ ಮುಕ್ತಿಪುರದ ಬಟ್ಟೆ ಕಾಣಬಾ
ರದು. ಆ ಮುಂದಣ ಪಯಣಗತಿಯ ಸಂಚದೋವರಿಯ ಸಂಚಮಂ
ಶರಣ ಮನದಲ್ಲಿ ತಿಳಿದು, ಈ ಹೆಬ್ಬಟ್ಟೆಗಳಲ್ಲಿ ಹೋದರೆ ಎಂಬತ್ತುನಾಲ್ಕು
ಲಕ್ಷ ಪ್ರಕಾರದ ಪರಮಂಡಲವಲ್ಲಿ ಸುಳಿವುದು ತಪ್ಪದೆಂದು ಅವಕ್ಕ
ಹೇಯವಂ ಮಾಡಿ, ತಮ್ಮವರು ಹೋದ ಬೆಂಬಳಿವಿಡಿದು ಹೋಗಿ, ಭಕ್ತಿ
ಪುರಮಂ ಕಂಡು, ಆ ಭಕ್ತಿಪುರದ ನಡುವೆ ಹೋಗುತಿಪ್ಪ ಹಾದಿಯಲ್ಲಿ,
ಪೇರ್ಬುಲಿ, ಕರಡಿ, ಕಾಳರಕ್ಕಸಿ, ಕರಿಘಟೆ ಇಪ್ಪ ಮಹಾ ಸರೋವ
ರದ ಅರಣ್ಯವಿದೆ. ಆ ಸರೋವರದ ಮಧ್ಯದಲ್ಲಿ ಎಂಟೆಸಳ ಚೌಕಮಂಟ
ಪದ ಸುವರ್ಣ ವರ್ಣದ ದೇಗುಲವಿದೆ. ಆ ದೇಗುಲದಲ್ಲಿ ಮುಕ್ತಿ ರಾಜ್ಯಕ್ಕ
ಪಟ್ಟಗಟ್ಟುವ ಸಮರ್ಥಿಕೆಯನುಳ್ಳ ಜಂಗಮಲಿಂಗವಿದೆ. ಆ ಜಂಗಮಮಂ
ಶರಣ ಕಂಡು ಹರುಷಂಗೊಂಡು, ಭಾವದಲ್ಲಿಯೇ ಷೋಡಶೋಪ
ಚಾರ ಅಷ್ಟವಿಧಾರ್ಚನೆಗಳಿಂದ ಪೂಜೆಯಂ ಮಾಡಿ, ತನ್ನ ಮನದಲ್ಲಿ
ಅಭೀಷ್ಟೆಯಂ ಮನ ನೆನೆದಂತೆ ಮನದಲ್ಲಿ ಬೇಡಿ, ದೇಹ, ಪ್ರಾಣಕ್ಕುಳ್ಳ
ಸಮಸ್ತ ಕರಣಾದಿ ಗುಣಂಗಳನೆಲ್ಲವಂ ಸುಟ್ಟು, ಬೊಟ್ಟಿಕ್ಕಿ ನಿರ್ಮಲ
ಸ್ವರೂಪನಾಗಿ, ಅಲ್ಲಿಂದ ಮುಂದೆ ನಡೆವುತಿಪ್ಪಾಗ ಊರ್ಧ್ವ ದಿಕ್ಕಿನ ಆಕಾ
ಶದಲ್ಲಿ ಅನೇಕ ಜೋದ್ಯವನೋಗೊಂಡಿಪ್ಪ ತ್ರಿಪುರಮಂ ಕಂಡು, ಆ
ತ್ರಿಪುರದ ಮೇಲೆ ಬ್ರಹ್ಮರಂಧ್ರವೆಂಬ ಕೈಲಾಸದ ಕಡೆಯ ಬಾಗಿಲೊ
ಳಿಪ್ಪ ಐಕ್ಯಸ್ಥಲವೆನಿಸುವ. ಆರು ನೆಲೆಯ ಮಾಣಿಕ್ಯವರ್ಣದ ಉಪ್ಪರಿ
ಗೆಯ ತಳಮಂ ಕಂಡು, ಪತಿಯಿದ್ದ ಮನೆಯ ಬಾಗಿಲ ಸತಿಸಾರು
ವಂತೆ ಶರಣ ಆ ಉಪ್ಪರಿಗೆಯ ಬಾಗಿಲಂ ಸಾರಿ, ಆ ಬಾಗಿಲಲ್ಲಿ, ಡಾಕಿನಿ,
ಶಾಕಿನಿ, ರಾಕಿಣಿ, ಪಾಕಿಣಿ ಕಾಕಿಣಿ, ಹಾಕಿಣಿಯರೆಂಬ ಷಡ್ವಿಧ ಶಕ್ತಿ
ಗಳಿಗೆ ಆದಿ ನಾಯಕಿಯಾಗಿಪ್ಪಳು. ಊರ್ಧ್ವ ಕುಂಡಲಿ ಎಂಬ ಜ್ಞಾನ
ಶಕ್ತಿ, ಆ ಶಕ್ತಿ ಬಾಗಿಲಿಗೆ ದ್ವಾರಪಾಲಕಿಯಾಗಿಪ್ಪಳು. ಅವಳು ಅಂಗರ
ತಡೆವಳು, ನಿರಂಗರಂ ಬಿಡುವಳೆಂಬುದಂ ಶರಣ ತನ್ನ ಮನದಲ್ಲಿ ತಾನೇ
ತಿಳಿದು, ಅಲ್ಲಿಪ್ಪ ಮಹಾಲಿಂಗಮಂ ಶರಣ ಮಂತ್ರಮಾಲೆಯಂ ಮಾಡಿ
ಮನದಲ್ಲಿ ಧರಿಸಿ, ಸೋಮಸೂರ್ಯ ಕಲಾಸ್ವಮಂ ನಿಲಿಸಿ ಕುಂಭಮಂ

ಇಂಬುಗೊಳಿಸಿ, ಝೇಂ ಝೇಂ ಯೆಂಬ ಝೇಂಕರಿಸುತಿಪ್ಪ ಪೆಣ್ಡಂಬಿ
ನಾದವಂ, ತಿಣ ತಿಣಿಯೆಂಬ ಸಣ್ಣ ರಾಗದಿಂದ ಮನವ ಸೋಂಕುತಿಪ್ಪ
ವೀಣಾನಾದವಂ, ಲಿಂಗಾ, ಲಿಂಗಾ ಎಂದು ಕರೆವುತಿಪ್ಪ ಘಂಟಾನಾ
ದವಂ, ಧಾಂಧಾಂ ಎನುತಿಪ್ಪ ಪೂರಿತವಾದ ಭೇರೀನಾದವಂ, ಚಿಟಿ
ಪಟಲು, ಧಿಗಿಲುಘುಗಿಲೆನುತಿಪ್ಪ ಮೇಘನಾದವಂ, ಓಂ ಓಂ ಎಂಬ
ಎಲ್ಲಿ ಎಡೆವಿಡದೆ ಉಲಿವುತಿಪ್ಪ ಪ್ರಣಮನಾದವಂ, ಜೇಂ ಹ್ರಾಂ ಹ್ರೀಂ
ಹ್ರೂಂ ಹ್ರೇಂ ಹ್ರೈಃ ಎಂದು ಬೆಳಗು ಬೀರುತಿಪ್ಪ ದಿವ್ಯನಾದವಂ,
ಆರಣ್ಯಘೋಳಿಡುವಂತೆ ಹೂಂಕರಿಸುತಿಪ್ಪ ಸಿಂಹನಾದವಂ ಈ ಪ್ರಕಾ
ರದ ನಾದಂಗಳಂ ಶರಣ ಕೇಳಿ ಮನದಣಿವ ಹರುಷಂ ಮಿಕ್ಕು ಆ
ಬಾಗಿಲ ದಾಂಟಿ ಪಶ್ಚಿಮ ದಿಕ್ಕಿಗೆ ಮುಖವಾಗಲೊಡನೆ ಚೌಕ ಮಧ್ಯ
ದಲ್ಲಿ ವಜ್ರ ವೈಢೂರ್ಯ ಪುಷ್ಯರಾಗ ಗೋಮೇಧಿಕ ಇಂತಿವರೊಳ
ಗಾದ ನವರತ್ನದ ರಂಭ, ಬೋದಿಗೆ, ಹಲಿಗೆಗಳಿಂದ ಕನ್ನುಗೈಯ್ದ ಶ್ರೀ
ಶಿವ ಮಹಾ ಶ್ರೀಗುರುವಿನ ಒಡ್ಡೋಲಗದ ಹಜಾರದ ಪ್ರಭೆಯು ಆಕಾಶ
ವನಲೆವುತಿರ್ಪುದಂ ಕಂಡು, ಬಹಿರಾವರಣವ ಸೇರಿರ್ಪ ಪ್ರಾಕಾರದ ಕೊಂಟೆ
ಎರಡು ಹದಿನಾರು ಕೊತ್ತಳಗಳಲ್ಲಿ ಈಶಾನ ಪ್ರಜನ್ಯ ಜಯಂತರೊಳ
ಗಾದ ಮೂವತ್ತೆರಡು ತಂಡದ ಅನಂತ ವಸ್ತು ದೇವತೆಗಳ ಕಾವಲು
ಆತ್ಮಾಗ್ರಮಂ ಕಂಡು ಶರಣರ್ಗೆ ತಡಹಿಲ್ಲನೆಂಬುದಂ ತನ್ನ ಮನಜ್ಞಾನ
ದಿಂದವೇ ಅರಿದು ಕಾವಲಾಗಿಪ್ಪ ಸಮಸ್ತ ದೇವತೆಯರ ಕೃಪಾದೃಷ್ಟಿ
ಯಿಂದ ಸಂತೈಸಿ ಮುಕ್ತಿಪುರಕ್ಕೆ ಮೂಲಸೂತ್ರವಾದ ಬ್ರಹ್ಮರಂಧ್ರದ,
ಪೂರ್ವ ದಿಕ್ಕಿನ ಚಂದ್ರ ಮಂಡಲದಲ್ಲಿಪ್ಪ ಬಾಗಿಲ ಬೀಗವಂ ತೆಗೆದು,
ಶರಣ ಒಳಹೊಗಲೊಡನೆ ಬಹಿರಾವರಣದ ವೀಧಿ ಓಲಗದೊಳಿಪ್ಪ ಹರಿ
ಸುರ ಬ್ರಹ್ಮಾದಿ ದೇವತೆಗಳು, ಮನುಮುನಿಗಳು, ಗರುಡ ಗಂಧರ್ವ
ಇಂದ್ರ, ಚಂದ್ರರೊಳಗಾದ ಅನಂತರೆಲ್ಲರು ಚೆವರಿ ಕೆಲಸಾರಿ, ಸೋಮ
ಬೀದಿಯೊಳಿಪ್ಪ ಅನಂತ ರುದ್ರರೊಳಗಾದ ಇಪ್ಪತ್ತುನಾಲ್ಕು ತಂಡದ
ಅನಂತರು ಶಿವನ ಒಡ್ಡೋಲಗದ ವೈಭವವ ನಡಿಸುವ ಪರಿಚಾರಕರು
ಅವರು ಬಂದು, ಶರಣಲಿಂಗದ ದೃಷ್ಟಿ ಸಂಧಾನವಾಗಲೆಂದು ಸಮ್ಮು
ಖವಂ ಮಾಡೆ ಸೂರ್ಯ ಬೀದಿಯೊಳಿಪ್ಪ ಉಮೆಚಂಡೇಶ್ವರ ನಂದಿಕೇ
ಶ್ವರರೊಳಗಾದ ಹದಿನಾರು ತಂಡದ ಅನಂತ ರುದ್ರರು ಬಂದು ಶರಣನ
ಸನ್ಮಾನವಂ ಮಾಡಿ, ಅಗ್ನಿ ಬೀದಿಯೊಳಿಪ್ಪ ವಾಮೆ, ಜ್ಯೇಷ್ಠೆಯರೊಳ



ಗಾದ ಎಂಟು ತಂಡದ ಅನಂತ ಶಕ್ತಿಯರು ಬಂದು ಶರಣನ ಇದಿರು
ಗೊಳ್ಳೆ, ಕರ್ಣಿಕಾ ಬೀದಿಯೊಳಿಪ್ಪ ಅಂಬಿಕೆ ಗಣಾನಿಯರೊಳಗಾದ ನಾಲ್ಕು
ತಂಡದ ಅನಂತ ಶಕ್ತಿಯರು ಬಂದು, ಶರಣನ ಕೈವಿಡಿದು ಕರತಾರೆ
ಈ ಸಿಂಹಾಸನಕ್ಕೆ ಮೇಲುಗದ್ದಿಗೆಯೆನಿಪ್ಪ ಸಿಂಹಾಸನ ಶುಭ್ರವರ್ಣದ
ಹತ್ತುನೂರು ದಳವ ಗರ್ಭೀಕರಿಸಿಕೊಂಡು, ಬೆಳಗುತಿಪ್ಪದೊಂದು ಮಹಾ
ಕಮಲ, ಆ ಕಮಲದ ದಳಂಗಳೊಳಗಿಪ್ಪ ಪ್ರಣವು, ಆ ಪ್ರಣವು ಸ್ವರೂಪ
ವಾದ ಬಸವಾದಿ ಅಸಂಖ್ಯಾತ ಪ್ರಮಥ ಗಣಂಗಳು, ಆ ಪ್ರಮಥ ಗಣಂಗ
ಳಿಗೆ ಶರಣಭಾವವಲ್ಲಿಯೇ ಸಾಷ್ಟಾಂಗವೆರಗಿ, ನಮಸ್ಕಾರವಂ ಮಾಡಿ,
ಆ ಗಣಂಗಳ ಕೃಪಾದೃಷ್ಟಿಯಿಂದ ಶರಣನ ಮೈದಡಹಿ, ಅನಂತಕೋಟಿ
ಸೋಮ, ಸೂರ್ಯ, ಕಲಾಗ್ನಿ, ಮಿಂಚು ನಕ್ಷತ್ರಂಗಳು ತಮ್ಮ. ತಮ್ಮ
ಪ್ರಕಾಶವಂ ಒಂದೇ ವೇಳೆ ತೋರಿದ ಬೆಳಗಿನೊಡ್ಡವಣೆ ಪಂಚಪತ್ರಂಗ
ಳಾವರಣವಾಗಿ ತೋರ್ಪ ಹದಿನಾರು ದಳಂಗಳಲ್ಲಿಪ್ಪ ಷೋಡಶಕಲಾ
ಪುಂಜವೆನಿಸುವ ಪದ್ಮಿನೀ ಚಂದ್ರಿನಿಯರೊಳಗಾದ ಷೋಡಶಲಾವಣ್ಯ
ಶಕ್ತಿಯರ ಬೆಳಗಂ ಕಂಡು, ಆ ಬೆಳಗಿನೊಡ್ಡವಣೆ ಬಯಲಾಯಿತ್ತು.
ಕರ್ಣಿಕಾ ಪ್ರದೇಶದ ಪಂಚ ಮಂತ್ರಂಗಳೊಳಗಿಪ್ಪ ಪಂಚಪ್ರಣವಂಗಳ
ಬೆಳಗಂ ಕಂಡು, ಆ ಲಾವಣ್ಯ ಶಕ್ತಿಯರ ಬೆಳಗು ತೆಗೆದೋಡಿತ್ತು. ಕರ್ಣಿ
ಕಾಗ್ರದೊಳು ನಿಜನಿವಾಸಿಯಾಗಿ ಮೂರ್ತಿಗೊಂಡಿಪ್ಪ ನಿಃಷ್ಕಲ ಬ್ರಹ್ಮದ
ಚರಣದಂಗುಲಿಯ ನಖದ ಬೆಳಗ ಕಂಡು, ಆ ಪ್ರಣವಂಗಳ ಬೆಳಗು
ತಲೆವಾಗಿದವು. ಇಂತಪ್ಪ ಘನಕ್ಕೆ ಘನವಾದ ಮಹಾಘನ ಲಿಂಗವಂ
ಶರಣ ನಿಟ್ಟಿಸಿ ಕಟ್ಟೆಕ್ಕರಿಂ ನೋಡಿ ಮನ ನಲಿದು, ಆನಂದಾಶ್ರುಜಲಂ
ಸುರಿದು, ಪುಳಕಂಗುಳುಹ್ಮ ರೋಮಾಂಚನ ಗುಡಿಗಟ್ಟಿ ಪ್ರಣವುದ
ನುಡಿ ತಡಂಬಡಿಸಿ ನಡೆವಟ್ಟಣಿಸುವ ಕಾಲದಲ್ಲಿ ಕರ್ಪುರದ ಪುತ್ಥಳಿ
ಬಂದು ಉರಿಯ ಪುತ್ಥಳಿಯನಾಲಿಂಗಿಸಿದಂತೆ, ಶರಣ ಬಂದು ಆ ಘನ
ಲಿಂಗವಂ ಅಮರ್ದಪ್ಪಿ ಪುಷ್ಪ ಪರಿಮಳದಂತೆ ಏಕವಾಗಿ ಆ ಘನಲಿಂಗ
ತಾನೆಯಾದ ಮಹಾ ಗುರುಸಿದ್ಧಲಿಂಗೇಶ್ವರ ಪ್ರಭುವಿನ ಶ್ರೀಚರಣವಂ
ನಾನು ಕರಸ್ಥಲದಲ್ಲಿ ಪಿಡಿದು ಪೂಜೆಯ ಮಾಡಲೊಡನೆ ಎನ್ನ ತನುವೇ
ಪಂಚಬ್ರಹ್ಮ, ಪ್ರಣವುವೇ ಪರಬ್ರಹ್ಮವಾಯಿತ್ತು. ಪ್ರವೃತ್ತಿಯ ಬಟ್ಟೆಯ
ಹುಲ್ಲು ಸುಟ್ಟಿತ್ತು. ನಿವೃತ್ತಿಯ ಬಟ್ಟೆ ನಿರ್ಮಲವಾಯಿತ್ತು. ಉಯ್ಯಾ

ಲೆಯ ಮಣೆನೆಲೆಗೆ ನಿಂದಂತೆ ಆದೆನಯ್ಯಾ ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

ಎಕ್ಕಟ್ಟ= ಹತ್ತು; ಹೆಬ್ಬಟ್ಟೆ = ರಾಜಮಾರ್ಗ; ಓವರಿ = ಒಳಮನೆ; ಅಭಿಷ್ಟೆ = ಬಯಕೆ; ಉಲಿ = ಸಪ್ಪಳಮಾಡು; ಪ್ರಾಕಾರ= ಕೋಟೆಯ ಸುತ್ತುಗೋಡೆ; ತಡಹು = ಅಡ್ಡಿ; ಒತ್ತವಣೆ = ಸನ್ನಿಹ; ಉಣ್ಮು = ಹೊರಬೀಳು; ಗುಡಿಗಟ್ಟು= ಎದ್ದುನಿಲ್ಲು;

೪೫. ಅಯ್ಯ ಬಸವಾದಿ ಪ್ರಮಥರೇ ನಿಮ್ಮ ಕರುಣಪ್ರಸಾದವ ನಾನು ಆದಿ ಅನಾದಿಯಲ್ಲಿ ದಣಿಯಲುಂಡ ದೆಸೆಯಿಂದಲೆನ್ನ ತನು ಷಟ್ಸ್ಥಲವ ನೊಳಕೊಂಡು ಉದಯವಾಯಿತ್ತು. ಎನ್ನ ಪಾದ ಷಟ್ಸ್ಥಲಕ್ಕೆ ಒಪ್ಪವಿಟ್ಟಲ್ಲದೆ ಅಡಿ ಇಡವು. ಎನ್ನ ಹಸ್ತ ಷಟ್ಸ್ಥಲದ ಪತಿಯನಲ್ಲದೆ ಪೂಜೆಯ ಮಾಡವು. ಎನ್ನ ಘ್ರಾಣ ಮೊದಲು ಶ್ರೋತ್ರ ಕಡೆಯಾದ ಪಂಚೇಂದ್ರಿಯಂಗಳ ಷಟ್ಸ್ಥಲವನಲ್ಲದೆ ಆಚರಿಸದು. ಎನ್ನ ಮನ ಷಟ್ಸ್ಥಲದ ಷಡ್ವಿಧ ಲಿಂಗಂಗಳ ಮೇಲಲ್ಲದೆ ಹರುಷಂಗೊಂಡು ಹೇದಾಡದು. ಎನ್ನ ಪ್ರಾಣ ಷಟ್ಸ್ಥಲಕ್ಕೆ ಸಲೆಸಂದ ಅಕ್ಕಮಹಾದೇವಿಯರು ಹೋದ ಬಟ್ಟೆಯಲ್ಲಿ ನಡೆವುದಲ್ಲದೆ, ಕಿರುಬಟ್ಟೆಯಲ್ಲಿ ನಡೆಯದು. ಇಂತಿವೆಲ್ಲವು ಷಟ್ಸ್ಥಲವನಪ್ಪಿ ಅವಗ್ರಹಿಸಿದ ನೀಲಾಂಬಿಕೆಯಮ್ಮನ ಗರ್ಭದಲ್ಲಿ ಉದಯವಾದ ಮೋಹದ ಕಂದನಾದ ಕಾರಣ ಎನಗೆ ಷಟ್ಸ್ಥಲದ ಮಾರ್ಗದ ವಿರತಿ ನೆಲೆಗೊಂಡು ನಿಂದಿತ್ತಯ್ಯ ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

ಒಪ್ಪವಿಡು = ಒಲಿ; ಸಂದ = ಒಪ್ಪಿದ;

೪೬. ವಿರತಿ ವಿರತಿ ಎಂದು ವಿರತಿಯ ಹೊಲಬನರಿಯದೆ, ಹಂಬಲಿಸಿ ಹಲುಬುತಿಪ್ಪರಣ್ಣ. ಕಠಿಣ ಪದಾರ್ಥವ ಸವಿದಡೆ ವಿರತಿಯೇ? ಕಠಿಣ ಪದಾರ್ಥವನೊಲ್ಲೆನೆಂದು ಕಳೆವರೆ ವಿರತಿಯೇ? ವೃಕ್ಷವಡಿಯ ಫಲಂಗಳ ಎತ್ತಿ ಮೆದ್ದಡೆ ವಿರತಿಯೇ? ವೃಕ್ಷವ ಮುಟ್ಟೆನೆಂದು ಭಾಷೆಯ ಮಾಡಿದರೆ ವಿರತಿಯೇ? ವೃಕ್ಷದಡಿಯ ಫಲಂಗಳ ತಿಂದರೆ ವಿರತಿಯೇ? ನಿಃಕ್ರಿಯೆಯ ಮಾಡಿದರೆ ವಿರತಿಯೇ? ಕ್ರಿಯಲ್ಲಿ ಮುಳುಗೊಂಡರೆ ವಿರತಿಯೇ? ನಿರ್ಮೌನವಾದರೆ ವಿರತಿಯೇ? ಮೌನನಾಚರಿಸಿ, ಅರುವಿನ ಮಾತ ಬಣ್ಣವಿಟ್ಟು ನುಡಿದರೆ ವಿರತಿಯೇ? ಇಂತಿವೆಲ್ಲವು ವಿರತಿಯ ನೆಲೆಯನರಿಯದೆ ತಲೆಬಾಲಗೆಟ್ಟು ಹೋದವು. ಇನ್ನು



ಮುಕ್ತಿ ಪಥವ ತೋರುವ ವಿರತಿಯ ಬಗೆಯಾವುದೆಂದೊಡೆ, ಷಟ್ಸ್ಥಲಕ್ಕೆ ಒಪ್ಪವಿಟ್ಟು ಎತ್ತಿದ ಮಾರ್ಗವಂ ಇಳುಹದೆ ಹಿಡಿದ ವ್ರತ ನೇಮಂಗಳಲ್ಲಿ ನೈಷ್ಠೆಯಾಗಿ, ಈಷಣತ್ರಯಂಗಳ ಗಾಸಿಮಾಡಿ, ಬಹಿರಂಗದ ಮದಂಗಳ ಬಾಯ ಸೀಳಿ ಅಂತರಂಗ ಮದಂಗಳ ಸಂತೋಷವಂ ಕೆಡಿಸಿ, ಅಷ್ಟ ಮೂರ್ತಿ ಮದಂಗಳ ನಷ್ಟವಮಾಡಿ, ಎಂಟೆರಡು ದಿಕ್ಕಿನಲ್ಲಿ ಹರಿವ ದಶವಾಯುಗಳ ಗಂಟಲ ಮುರಿದು, ಸಗುಣ ನಿರ್ಗುಣಂಗಳ ನಗೆಗೊಳಗು ಮಾಡಿ, ನವನಾಳಂಗಳ ಮುಂಬಾಗಿಲಲ್ಲಿ ಲಿಂಗಂಗಳ ಸಿಂಗರಿಸಿ ತನುಮನವ ಸೋಂಕದೆ ಸಾಕಾರ ನಿರಾಕಾರನೆಂಬ ದ್ರವ್ಯ ಪದಾರ್ಥಂಗಳಂ ವಂಚಿಸದೆ ಆಯಾವ ಲಿಂಗಂಗಳಿಗೆ ತೃಪ್ತಿಯಂ ಮಾಡಿ, ನಡೆವಲ್ಲಿ ನುಡಿವಲ್ಲಿ ಮಂತ್ರಂಗಳಲ್ಲಿ ಮೈ ಮರೆದಿರದೆ ಆಚಾರಾದಿ ಮಹಾಲಿಂಗಂಗಳ ಷಡ್ವರ್ಣದ ಬೆಳಗ ಧ್ಯಾನ ಮೌನದಲ್ಲಿ ಕಣ್ಣಿಲ್ಲದೆ ಕಂಡು, ಗಂಗೆ ಯಮುನೆ ಸರಸ್ವತಿ ಎಂಬ ಮೂರುಗಂಗೆ ಕೂಡಿದ ಮಧ್ಯವಿನ ಸಂಗಮ ಕ್ಷೇತ್ರ, ಆ ಸಂಗಮ ಕ್ಷೇತ್ರದ ರತ್ನಮಂಟಪದಲ್ಲಿ ನೆಲಸಿರ್ಪ ತೋಂಟದ ಅಲ್ಲಮನೆಂಬ ಪರಬ್ರಹ್ಮದ ದಿವ್ಯ ಶ್ರೀಚರಣಮಂ ಭಾವ ಪುಷ್ಪಂಗಳೆಂಬ ಜಾಜಿಮಲ್ಲಿಗೆ ಕೆಂದಾವರೆಯಲ್ಲಿ ಪೂಜೆಯಂ ಮಾಡಿ ಭವಂ ನಾಸ್ತಿಯಾದುದೀಗ ನಿಜ ವಿರತಿ. ಇಂತಪ್ಪ ವಿರತಿಯ ನೆಳವಡಿಸಿಕೊಳಲರಿಯದೆ ಮಾತಿಂಗೆ ಮಾತ ಕೊಟ್ಟು ಮತಿ ಮರುಳಾಗಿಪ್ಪವರಿಗಂಜಿ ನಾನು ಶರಣೆಂಬೆನಯ್ಯಾ ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

ಮೆಲ್ಲು= ತಿನ್ನು; ಮೊತ್ತ =ಸಮೂಹ;

೪೭ ನಿರ್ವಾಣ ಪದಕ್ಕೆ ಕಾಮಿತನಾಗಿ, ಸಕಲ ಪ್ರಪಂಚಿನ ಗರ್ವಮಂ ನೆಗ್ಗಲೊತ್ತಿ, ಏಕನಿಷ್ಠಾಪರನಾಗಿ ಆಚರಿಸುವ ಪರಮ ವಿರಕ್ತರ ಉಪಾಧಿಕೆ ಇಲ್ಲದ ಕ್ರಿಯಂಗಳಾವಾವಯ್ಯಾ ಎಂದೊಡೆ. ತ್ರಿಸಂಧ್ಯಾ ಕಾಲದಲ್ಲಿ ಲಿಂಗಪೂಜೆ, ಲಿಂಗೋದಕ ಹಲ್ಲು ಕಡ್ಡಿ ಮೊದಲಾದ ಸಕಲ ಪದಾರ್ಥಂಗಳ ಇಷ್ಟಲಿಂಗಕ್ಕೆ ಕೊಟ್ಟುಕೊಂಬ ಎಚ್ಚರಿಕೆ, ತೀರ್ಥಪ್ರಸಾದದಲ್ಲಿ ಅವಧಾನ, ಅಚ್ಚಲಿಂಗೈಕ್ಯರ ಮನೆಯ ಭಿಕ್ಷೆ, ಕಠಿಣ ಪದಾರ್ಥಂಗಳ ಹಿಡಿದರೆ ಹಿಡಿದಂತೆ, ಬಿಟ್ಟರೆ ಬಿಟ್ಟಂತೆ, ಇಪ್ಪುದು. ತದ್ದಿನವ ಕಳೆದು, ಭವಿಯ ಭಕ್ತಿಯ ನೊಪ್ಪುಗೊಳ್ಳದೆ, ಬಿದ್ದ ಫಲಂಗಳ ಮುಟ್ಟದೆ, ರಾತ್ರಿಯ ಕಾಲದಲ್ಲಿ ಭಿಕ್ಷಬೀಡಾರವೆಂದು ಭಕ್ತರು ಬಿನ್ನಹವಂ ಮಾಡಿದರೆ ಕೈಕೊಂಬುದು.

ಅಲ್ಲದಿರ್ದೊಡೆ ಹೋಗಲಾಗದು. ಭಕ್ತರು ವಿಭೂತಿ ಮುಂತಾಗಿ ಪದಾ
ರ್ಥಕ್ಕೆ ಹೇಳಿದೊಡೆ ಇಚ್ಛೆಯಾದರೆ ಕೈಕೊಂಬುದು. ಒಲ್ಲದಿರ್ದಡೆ ಬಿಡು
ವದು. ಒಪ್ಪಿ ಕೈಕೊಂಡಬಳಿಕ ವಿಭೂತಿಯು ಮೀರಲಾಗದು. ವಿಭೂ
ತಿಯು ಕಟ್ಟು ವಿರಕ್ತರಿಗೆ ಇಲ್ಲವೆಂಬುವು ಶರಣಸ್ಥಲಕ್ಕೆ ಸಲ್ಲವು. ಇಂತಿ
ವೆಲ್ಲವು ಗಣಂಗಳು ಒಪ್ಪವಿಟ್ಟ ಆಚರಣೆಯು ಸಮಾಧಿ ಯೋಗ ಪರಿ
ಯಂತರ ನಡಿಸುವಾತನೀಗ ನಿರಂಗ ಶರಣ. ಅವಲ್ಲದೆ ಪುರಾತರ ಗೀತ
ವನೋದಿ ಪುರಾತರ ಮಕ್ಕಳಾದಬಳಿಕ ಕಿರಾತರ ಮಕ್ಕಳಂತೆ ಮನಬಂದ
ಪರಿಯಲ್ಲಿ ನಡೆಯಲಾಗದು. ಪುರಾತರಂತೆ ನಡೆವುದು. ಹೀಗಲ್ಲದೆ
ಹೊತ್ತಿಗೊಂದು ಬಗೆ, ದಿನಕೊಂದು ಪರಿ ನಡಿಸುವಲ್ಲಿ ಶರಣನೇನು?
ಮುಗಿಲ ಬಣ್ಣದ ಬೊಂಬೆಯು ? ಶರಣ ಮೊಲನಾಗರೆ? ಶರಣ ಇಂದ್ರ,
ಚಾಪವೇ? ಶರಣ ಗೋಸುಂಬೆಯೋ? ನೋಡಿರಯ್ಯ. ಕಡಿದು ಖಂಡಿಸಿ
ಒಪ್ಪವಿಟ್ಟ ರತ್ನದ ಪುತ್ಥಳಿಯು ಪ್ರಕಾಶದಂತೆ ನಿಜಗುಂದದಿಪ್ಪದೀಗ
ಶರಣಸ್ಥಲ. ಬಾಲಕ ನಿಲ್ಲದ ಅಂಗನೆಯ ಮೊಲೆಯಲ್ಲಿ ಹಾಲು ತೋರು
ವದೇ ಅಯ್ಯಾ? ಶಿವಜ್ಞಾನವಿಲ್ಲದವನ ಮನದಲ್ಲಿ ಕ್ರಿಯೆವಿಟ್ಟ ನಡೆವ
ಆಚರಣೆ ಎಲ್ಲಿಯದೋ? ಮುಕ್ತಿಯ ಪಥಕ್ಕೆ ಕ್ರಿಯೆ ಸಾಧನವಲ್ಲದೆ
ಅದು ಹೇಗೆಂದೊಡೆ ಕ್ರಿಯೆ ಎಂಬ ಬೀಜವಲ್ಲಿ ಸಮ್ಯ ಜ್ಞಾನವೆಂಬ ವೃಕ್ಷ
ಪಲ್ಲವಿಸಿತ್ತು. ಆ ವೃಕ್ಷ ಭಕ್ತಿ ಎಂಬ ಹುವ್ವಾಯಿತ್ತು. ಆ ಹೂವು ಲಿಂಗ
ನೈಷ್ಠೆಯೆಂಬ ಕಾಯಾಯಿತ್ತು. ಆ ಕಾಯಿ ಮುಕ್ತಿ ಎಂಬ ಹಣ್ಣಾಯಿತ್ತು.
ಆ ಹಣ್ಣಿನ ಅಮೃತಸಾರಮಂ ನಾನು ದಣಿಯಲುಂಡು ಬಸವಾದಿ ಪ್ರಮ
ಥರ ಪಡುಗ ಪಾವರಕ್ಷೆಯುಂ ಹಿಡಿವುದಕ್ಕೆ ಯೋಗ್ಯನಾದೆನಯ್ಯಾ ಘನ
ಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

ನೆಗ್ಗು = ನಾಶವಾಗು; ತದ್ದಿನ = ಮೃತತಿಥಿ; ಕಿರಾತ = ಬೇಡ; ಇಂದ್ರ
ಚಾಪ = ಕಾಮನಬಿಲ್ಲು; ಒಪ್ಪವಿಡು = ಬಣ್ಣಗೊಡು;

೪೮ ಭಕ್ತಿಯಿಂದ ವಿರಕ್ತರೆಂದು ಬಾಯಿ ತುಂಬ ಕರಿಸಿಕೊಂಬ
ವಿರಕ್ತರೆಲ್ಲ ವಿರಕ್ತರೆ ಅಯ್ಯ? ವಿರಕ್ತರೊಂದು ಸಾಮರ್ಥ್ಯ. ಸುಗುಣ
ಸುಮುದ್ರೆಯ ಸೂರೆವ್ರತಿಪ್ಪೆ ಕೇಳಿರಣ್ಣ. ಕಾಯದ ಕಣ್ಣ ಜಾಗ್ರದಲ್ಲಿ
ಇಷ್ಟಲಿಂಗಕ್ಕೆ ಸಮರ್ಪಿಸಿ ಕಾಯಗುಣಂಗಳ ಕೆಲಕೆ ತೊಲಗಿಸಿ ತತ್ವ
ದನಾಗಿ, ಮನದ ಕಣ್ಣ ಸ್ವಪ್ನದಲ್ಲಿ ಪ್ರಾಣಲಿಂಗಕ್ಕೆ ಸಮರ್ಪಿಸಿ ಮನೋ
ವಿಕಾರಮಂ ಹಸಗೆಡಿಸಿ, ತ್ವಂಪದನಾಗಿ, ಭಾವದ ಕಣ್ಣ ಸುಷುಪ್ತಿಯಲ್ಲಿ



ಭಾವಲಿಂಗಕ್ಕೆ ಸಮರ್ಪಿಸಿ, ಭಾವದಿಚ್ಛೆಯುಂ ತಪ್ಪಿಸಿ ಅಸಿಪದನಾಗಿ,
ಜ್ಞಾತೃ, ಜ್ಞಾನ, ಜ್ಞೇಯವೆಂಬ ತ್ರಿಪುಟಿಯನೊಂದು ಮಾಡಿ, ಪರಬ್ರಹ್ಮ
ಸ್ವರೂಪನಾಗಿ, ಜಾಗ್ರತ್ ಸ್ವಪ್ನ ಸುಷುಪ್ತಿ ಎಂಬವರತು, ಹಸಿವು, ತೃಷೆ,
ವಿಷಯ ವ್ಯಾಪಾರಂಗಳಂ ಸುಟ್ಟುರುಹಿದ ತೋಂಟದ ಸಿದ್ಧಲಿಂಗ ಅಲ್ಲ
ಮಪ್ರಭು ಅನುಮಿಷ ದೇವರು ಇಂತಿವರು ವಿರಕ್ತರಲ್ಲದೆ ಮತ್ತೆ ವಿರಕ್ತ
ರೆಂಬ ನುಡಿಹುಸಿ, ನಿಮ್ಮ ಹಡಸದಲ್ಲಿರಲಿ. ಅದೇನು ಕಾರಣವೆಂದೊಡೆ
ಗ್ರಂಥ ॥ ವಿಕಾರಂ ವಿಷಯ ದೂರಂ । ರಕಾರಂ ರಾಗ ವರ್ಜಿತಂ ॥ ತಕಾರಂ
ಗುಣಂನಾಸ್ತಿ । ವಿರಕ್ತಸ್ಯ ಮಹೋಚ್ಯತೆ ॥ ಇಂತೆಂದುದಾಗಿ, ಹಗಲಾ
ದರೆ ಹಸಿವು ತೃಷೆಗೆ ಹಂಬಲಿಸಿ ಬಾಯಬಿಟ್ಟು, ಇರುಳಾದರೆ ಕನಸ
ಕಂಡು ಬೆದರಿ, ಶಿವ ಶಿವಾ ಎಂದು ಎದ್ದು ಕುಳಿತು, ಸುಷುಪ್ತಿಯಲ್ಲಿ
ವೈಮರೆದು ಮುಟ್ಟಿದ ತಟ್ಟಿದ ಸಂಜ್ಞೆಯ ನರಿಯದಿಪ್ಪವರೆಲ್ಲ ವಿರಕ್ತರೆ?
ಅಲ್ಲಲ್ಲ. ಅವರು ತ್ರಿವಿಧ ಪದಾರ್ಥವ ನತಿಗಳೆದು, ಗುರುಲಿಂಗ ಜಂಗಮ
ವನಂತರಂಗದಲ್ಲಿ ಪೂಜೆಯ ಮಾಡುವ ದಾಸೋಹಿಗಳಯ್ಯ, ಘನಲಿಂಗಿಯ
ಮೋಹದ ಚನ್ನಮಲ್ಲಿಕಾರ್ಜುನಾ.

ಮುದ್ರೆ = ಗುರತು, ಒರೆ = ತಿಳಿಸು; ಅರತು = ನಾಶವಾಗಿ;
ಉರುಹು = ಸುಡು;

೪೯. ಇಕ್ಕಿದ ಹಲಿಗೆಗೆ ತೊಲಗದ ಕಂಭವೆಂದು ಬಿರಿದನಿಕ್ಕಿ
ಹುಯ್ಯಲ ಕಂಡು, ಓಡಿ ಬರುವಂಗೆ ಆ ಬಿರಿದೇತಕಯ್ಯ? ಮೂವ್ವತ್ತೆರಡು
ಆಯುಧದ ಸಾಧನೆಯ ಕಲಿತು, ಕಾಳಗದಲ್ಲಿ ಕೈಮರೆದು, ಗಾಯವಡೆ
ವಂಗೆ ಆ ಸಾಧನೆ ಏತಕಯ್ಯ? ಕತ್ತಲೆಗಂಜಿ ಕರದಲ್ಲಿ ಜ್ಯೋತಿಯಂ
ಪಿಡಿದು ಹಾಳು ಗುಣಿಯಲ್ಲಿ ಬೀಳುವಂಗೆ ಆ ಜ್ಯೋತಿ ಏತಕಯ್ಯ?
ಆದ್ಯರ ವಚನಂಗಳ ಸದಾಕಾಲದಲ್ಲಿ ಓದಿ, ಶಿವತತ್ವ, ಆತ್ಮತತ್ವ, ವಿದ್ಯಾ
ತತ್ವಂಗಳನರಿದು, ಆರಕ್ಕೆ ಆರ ನೆಲೆಮಾಡಿ, ಮೂರಕ್ಕೆ ಮೂರ ಸಂಬಂಧಿಸಿ
ಐದಕ್ಕೆ ಇನ್ನು ಪ್ರತಿ ಇಲ್ಲವೆಂದು ಅರಿದ ವಿರಕ್ತರು ಪುರಾತನರಂತೆ ಸಮ್ಯ
ಜ್ಞಾನ, ಕ್ರಿಯೆಗಳಿದಂತೆ ಆಚರಿಸುವದು. ಭಕ್ತವಿರಕ್ತರಾಚರಣೆ ಎಲ್ಲ
ಒಂದೇ. ಅದು ಹೇಗೆಂದೊಡೆ, ಭಕ್ತಂಗೆ ಬಹಿರಂಗದ ದಾಸೋಹ, ವಿರ
ಕ್ತಂಗೆ ಅಂತರಂಗದ ದಾಸೋಹ ಈ ಆಚರಣೆಯ ನತಿಗಳೆದು ಮನ
ಬಂದ ಪರಿಯಲ್ಲಿ ನಡೆದು ಕೆಡುವಂಗೆ ಆದ್ಯರ ವಚನ ವೇತಕಯ್ಯಾ?
ಆದ್ಯರ ವಚನವೆಂಬುದು ಸಂತೆಯ ಮಾತೆ? ಪುಂಡರ ಪುರಾಣವೆ?

ಲೋಕದ ಜನರ ಮೆಚ್ಚಿಸುವ ಬೀದಿವಾತೆ? ಶಿವ ಶಿವ ನೀವು ಶಿವಶರಣರ ಕೂಡಾಡಿ ವಚನಂಗಳ ಕಲಿತು, ಆ ವಚನಂಗಳ ನಿಮ್ಮ ಊಟ ವೆಚ್ಚಕೆ ಈಡ ಮಾಡಿಕೊಂಡಿರಲ್ಲದೆ ಮುಂದಣ ಮುಕ್ತಿಯ ಪಥವ ಕಾಣದೆ ಹೋದಿರಲ್ಲಾ. ಇದು ಕಾರಣ ಶಿವಜ್ಞಾನ ಉದಯವಾದ ಲಿಂಗಾಂಗಿಗಳಿಗೆ ಎನ್ನ ನುಡಿ ಹಾಲು ಸಕ್ಕರೆಯ ನುಂಡಂತೆ ಸವಿದೋರುತ್ತಿದೆ. ವೇಷಧಾರಿ ವಿಶ್ವಾಸ ಘಾತಕರಿಗೆ ಎನ್ನ ನುಡಿ ಅಲಗಿನ ಮೊನೆಯಂತೆ ಇರಿವುತ್ತಿದೆ ಅಯ್ಯ ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

ಗುಣಿ= ತಗ್ಗು: ಪ್ರತಿ= ಎದರು, ಜೋಡು; ಅತಿಗಳೆ= ಮೀರು; ಬೀದಿವಾತು= ಕ್ಷುಲ್ಲಕ ಮಾತು; ಅಲಗು = ಕತ್ತಿ; ಮೊನೆ= ಧಾರೆ.

೫೦. ಶರಣು ಶರಣಾರ್ಥಿ ಲಿಂಗವೇ. ಹೊನ್ನು, ಹೆಣ್ಣು, ಮಣ್ಣು ಬಿಟ್ಟಾತನೇ ವಿರಕ್ತದೇವನೆಂದು ಬಣ್ಣವಿಟ್ಟು ನುಣ್ಣಿಸಿ ಕರೆವರಯ್ಯ. ಆವ ಪರಿ ವಿರಕ್ತನಾದನಯ್ಯ ಗುರುವೇ. ಹೊನ್ನೆಂಬ ರಿಪು ಚೋರರ ದೆಸೆಯಿಂದ ಶಿರಚ್ಛೇದನವಂ ಮಾಡಿಸಿ, ನೃಪರಿಂ ಕೊಲ್ಲಿಸು ತಿಪ್ಪುದು. ಹೆಣ್ಣೆಂಬ ರಕ್ಕಸಿ ಲಲ್ಲೆವಾತಿಂದ ಗಂಡನ ಮನವನೊಳಗು ಮಾಡಿಕೊಂಡು ಸಂಸಾರ ಸುಖಕ್ಕೆ ಸರಿ ಇಲ್ಲವೆನಿಸಿ, ಸಿರಿವಂತರಿಗಾಳು ಮಾಡಿ ಇರುಳು ಹಗಲೆನ್ನದೆ ತಿರಿಗಿಸು ತಿಪ್ಪಳು. ಮಣ್ಣೆಂಬ ಮಾಯೆ ತನ್ನ ಅಸುವ ಹಿಂಡಿ ಹಿಪ್ಪಿಯ ಮಾಡಿದಲ್ಲದೆ ಮುಂದಳ ಗುಣವ ಕೊಡದು. ಇವ ಬಿಟ್ಟಾತ ವಿರಕ್ತನೇ? ಅಲ್ಲ. ಕಾಯಕಕ್ಕಾರದೆ ಜೀವಗಳ್ಳನಾಗಿ, ಮಂಡೆಯ ಬೋಳಿಸಿಕೊಂಡು, ಕಂಡ, ಕಂಡವರ ಮನೆಯಲ್ಲುಂಡು, ಕುಂಡೆಯ ಬೆಳಸಿಕೊಂಡಿಪ್ಪಾತ ಆತ್ಮ ಸುಖಿಯಯ್ಯಾ. ಮಾತಿನ ಮಾಲೆಯನುಳಿದು, ಕಾಯದ ಕಳವಳವಳಿದು, ಲೋಕದ ವ್ಯವಹಾರವ ನೂಂಕಿ ಅಂಬಲಿಯ ಅಮೃತ ಸರಿ ಎಂದು ಕಂಡು, ಏಕಾಂಗಿಯಾಗಿ, ತನುವ ದಂಡಿಸಿ, ಗಿರಿಗಹ್ವರಂಗಳಲ್ಲಿದ್ದರೆ ವಿರಕ್ತನೇ? ಅಲ್ಲ. ಅವೇನು ಕಾರಣವೆಂದೊಡೆ ತಾಯಗರ್ಭದಲ್ಲಿ ಶಿಶು ಇಕ್ಕಿದ ಕುಕ್ಕುಟಾಸನವ ತೆಗೆಯದು, ಸೀತ ಉಷ್ಣವೆಂದೆನ್ನದು, ಉಪಾಧಿಕೆಯ ನುಡಿಯದು, ಮುಚ್ಚಿದ ಕಣ್ಣು ಮುಗಿದ ಕೈಯ್ಯಾಗಿ, ಉಗ್ರ ತಪಸ್ಸಿನಲ್ಲಿಪ್ಪುದು. ಅದಕ್ಕೆ ಮುಕ್ತಿಯಾದರೆ ಇವನಿಗೆ ವಿರಕ್ತಿಯುಂಟು. ಬರಿಯ ವೈರಾಗ್ಯ ಭವಕ್ಕೆ ಬೀಜವಯ್ಯಾ. ಇನ್ನು ನಿಜ ವಿರಕ್ತಿಯ ಪರಿಯಾವುದೆಂದಡೆ, ತ್ರಿವಿಧ ಪದಾರ್ಥದಲ್ಲಿ ಮನವಿಲ್ಲದೆ, ಭಕ್ತರ ಬಣ್ಣದ ನುಡಿಗೆ ಹಣ್ಣಾಗದೆ ಅಂಗಭೋಗವ ನೂಂಕಿ



ಲಿಂಗಭೋಗವ ಕೈಕೊಂಡು, ಆತ್ಮತೇಜವ ನಲಂಕರಿಸದೆ, ಅಸುವಿಂಗೆ ಭಿಕ್ಷವ ನೆಲೆಮಾಡಿ, ಸದಾ ಕಾಲದಲ್ಲಿ ಮಂತ್ರ ಮಾಲೆಯಂ ಮನದಲ್ಲಿ ಕೂಡಿ, ಆದಿ ಮಧ್ಯಾವಸಾನಮಂ ತಿಳಿದು, ನಿರ್ಮಲ ಚಿತ್ತನಾಗಿ, ಏಕಾಂತ ವಾಸಿಯಾಗಿ, ನವಚಕ್ರಂಗಳಲ್ಲಿ ನವ ಬ್ರಹ್ಮರ ಮೂರ್ತಗೊಳಿಸಿ, ಕಾಯದ ಕಣ್ಣಿಂದ ಕರತಳಾ ಮಳಕವ ನೋಡುವದೇ ಮನದ ಕಣ್ಣಿಂದ ನವ ಬ್ರಹ್ಮ ಸ್ವರೂಪ ಮನದಣಿವಂತೆ ನೋಡಿ, ಸುಚಿತ್ತವೇ ಮೊದಲು ನಿರವಯವೇ ಕಡೆಯಾದ ನವಹಸ್ತಂಗಳಿಂದ ಭಾವ ಪುಷ್ಪಂಗಳಲ್ಲಿ ಪೂಜೆಯಂ ಮಾಡಿ, ಮನದಣಿಯದೆ ಸುಚಿತ್ತ ಗುರುವನಪ್ಪಿ, ಸುಬುದ್ಧಿ ಲಿಂಗವನಪ್ಪಿ, ನಿರಹಂಕಾರ ಜಂಗಮವನಪ್ಪಿ, ಸುಮನ ಪ್ರಸಾದವನಪ್ಪಿ, ಸುಜ್ಞಾನ ಪಾದೋದಕವನಪ್ಪಿದ ಲಿಂಗಾಂಗಿಯೇ ಈಗ ವಿರಕ್ತ. ಇಂತಪ್ಪ ವಿರಕ್ತಿ ಎಂಬ ಪ್ರಸನ್ನತೆ ಪ್ರಸಾದವಂ ಎನಗೆ ಧರ್ಮಕ್ಕೆ ಕರುಣಿಪುದಯ್ಯ ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

ನುಣ್ಣಿಸು = ಮೃದುಗೊಳಿಸು; ಲಲ್ಲೆವಾತು = ಪ್ರೀತಿಯ ಮಾತು; ಅಸು = ಪ್ರಾಣ; ಆರದೆ = ಸಮರ್ಥನಾಗದೆ; ಉಳಿದು = ಬಿಟ್ಟು; ಕುಕ್ಕುಟ = ಕೋಳಿ; ಹಣ್ಣಾಗು = ಮನಸೋಲು; ಅವಸಾನ = ಅಂತ್ಯ;

೫೧. ಬಿಲ್ಲುಕೋಲ ಹಿಡಿದು ಮನಬಂದ ಪರಿಯಲ್ಲಿ ಎಚ್ಚಾಡುವಾತ ಅರ್ಥಿಕಾರನಲ್ಲದೆ ಬಿಲ್ಲುಕಾರನಲ್ಲವಯ್ಯಾ. ಹೊನ್ನು, ಹೆಣ್ಣು, ಮಣ್ಣು, ಬಿಟ್ಟು ಚನ್ನಾಗಿ ಮಂಡೆಯ ಬೋಳಿಸಿಕೊಂಡು, ಹಾಡಿದ ವಚನಂಗಳನೆ ಹಾಡಿಕೊಂಡು, ಮುಂದೆ ವಸ್ತುವ ಸಾಧಿಸಿಕೊಳ್ಳದೆ, ಹಸಿದರೆ ತಿರಿದುಂಡು, ಮಾತಿನ ಮಾಲೆಯನು ಕಲಿತಾತ ವಿರಕ್ತನೆಂಬ ನಾಮಕ್ಕರುಹನಲ್ಲದೆ, ಸಂಧಾನಕ್ಕರುಹನಲ್ಲ. ಅದೇನು ಕಾರಣವೆಂದರೆ ಮುಕ್ತಿಯೆಂಬ ಬಿಲ್ಲ ಹಿಡಿದು, ಸಮ್ಯಜ್ಞಾನವೆಂಬ ಹೆದೆಯನೇರಿಸಿ, ಲಿಂಗನೈಷ್ಠೆಯೆಂಬ ಬಾಣವ ತೊಟ್ಟು, ಆಕಾಶದ ಮೇಲಣ ಮುಪ್ಪುರದ ಮಧ್ಯದ ಮಾಣಿಕದ ಕಂಭ ಮುಳುಗಲೆಚ್ಚಿದು, ಮಾಯಾ ಬಲೆಯ ಗೆಲಿದ ಶರಣನೀಗ ಲಿಂಗಸಂಧಾನಿಯಯ್ಯ ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

ಕೋಲ = ಬಾಣ; ಅರ್ಥಿಕಾರ = ಸ್ವೇಚ್ಛಾಚಾರಿ;

೫೨. ನಿರ್ಗಮನಿಯಾದ ಶರಣಂಗೆ ಸಂಧಾನವಲ್ಲದೆ, ಗಮನವಾದ ಶರಣಂಗೆ ಸಂಧಾನ ಅನುಗೊಳ್ಳದೆಂಬ ಅಣ್ಣಗಳು ನೀವು ಕೇಳಿರೆ? ಸೂರ್ಯ ರಥವನೇರಿ ಪರ್ವತಂಗಳ ಚಬುಕುಮಾಡಿ ಮನೋ ವೇಗದಿಂದ ಪಶ್ಚಿಮ

ಸಮುದ್ರಕ್ಕೆ ದಾಳಿ ಇಡಲು, ರವಿಕಿರಣಂಗಳು ಹಿಂದುಳಿವಿಸ್ಸವೇ? ಅದು ಕಾರಣ ಪುಷ್ಪವಿದ್ದಲ್ಲಿ ಪರಿಮಳವಿಪ್ಪುದು. ಅಂಗವಿದ್ದಲ್ಲಿ ಲಿಂಗವಿಪ್ಪುದು, ಲಿಂಗವಿದ್ದಲ್ಲಿ ಲಿಂಗದ ಮೇಲೆ ಮನವಿಪ್ಪುದು. ಲಿಂಗದ ಮೇಲೆ ಮನವಿಪ್ಪಲ್ಲಿಯೆ ಶರಣ. ಆ ಶರಣ ನಡೆವಲ್ಲಿಯೇ ಉರಿವ ಅಗ್ನಿಯ ಮೇಲೆ ತಂಗಾಳಿ ಬೀಸಿದಂತೆ ತ್ರಿಪುಟಿಯ ಮೇಲೆ ಬೆಳಗು ಒಲಿದಾಡುತ್ತಿದೆ. ಶರಣನುಡಿವಲ್ಲಿಯೇ ಪ್ರಣವದ ಬೆಳ್ಳಿ ಮನವ ಸುತ್ತುತ್ತಿದೆ. ಶರಣ ನೋಡುವಲ್ಲಿಯೇ ಪಂಚವರ್ಣಂಗಳ ಸ್ವರೂಪು ಲಿಂಗಾರ್ಪಿತವಾಗುತ್ತಿದೆ. ಶರಣ ಕುಂಭಿಸುವಲ್ಲಿಯೇ ಓಂಕಾರ ಒಡಗೂಡುವದಯ್ಯಾ. ಶರಣರೇಚಿಸುವಲ್ಲಿಯೇ ಪಂಚಾಕ್ಷರಂಗಳು ಎಡೆಯಾಡುತ್ತವೆ. ಶರಣ ಸುಳಿವಲ್ಲಿಯೇ ಹಲವು ಪ್ರಕಾರದ ವಸ್ತುಗಳು ತನು ಸೋಂಕು ಲಿಂಗ ಮನವ ತುಂಬುತ್ತಿದೆ. ಇದು ಕಾರಣ ತೋಂಟದಾರ್ಯನ ಕರುಣ ಪ್ರಸಾದವಂ ಪಡೆದು, ತತ್ವಸ್ವರೂಪು ಧ್ಯಾನ ಧಾರಣ ಅರ್ಪಿತಾವಧಾನವನರಿದ ಶರಣಂಗೆ ಗಮನಾಗಮನವೆಂಬ ಉಭಯ ಉಂಟೇ ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ?

ಬೆಳಗು = ಪ್ರಕಾಶ; ಕುಂಭಿಸು = ಉಸಿರು ತಡೆ; ರೇಚಿಸು = ಉಸಿರನ್ನು ಹೊರಗೆಡವು.

೫೩. ಭಕ್ತಿಜ್ಞಾನ ವೈರಾಗ್ಯವು ಅಲ್ಲಮ ಪ್ರಭುವಿನ ವರ್ಗಕಲ್ಲದೆ ಅಳವಡದೆಂಮ ಉತ್ತರ ಜ್ಞಾನಿಗಳು ನುಡಿವುತಿಪ್ಪರು. ಪಂಚೇಂದ್ರಿಯಂಗಳ ರತಿ ವಿರತಿಯಾದ ಪರಮ ವಿರಕ್ತರೇ ನೀವಾಚರಿಸುವ ಭಕ್ತಿ ಜ್ಞಾನ ವೈರಾಗ್ಯದ ಬಗೆಯ ಬಣ್ಣಿಸಯ್ಯ. ಗುರುಲಿಂಗಜಂಗಮ ತೀರ್ಥಪ್ರಸಾದ ಇಂತೀ ಪಂಚಾಚಾರವೇ ಪಂಚಬ್ರಹ್ಮವೆಂದು ಭಯಭಕ್ತಿಯಿಂದ ನಮಿಸಿ ಅಂಗೀಕರಿಸುವದೆ ಎನ್ನ ಭಕ್ತಿ. ಪೂರ್ವಾಶ್ರಯ ಬಂಧು ಭ್ರಮೆ, ಆತ್ಮತೇಜ, ಲೋಕದ ನಚ್ಚು ಮಚ್ಚು ಇಂತಿವ ಸುಟ್ಟು ಮಲತ್ರಯಂಗಳ ಹಿಟ್ಟುಗುಟ್ಟಿ ತೂರಿ ಬಿಡುವುದೇ ಎನ್ನ ಜ್ಞಾನ ಕ್ಷುತ್ತು ವೈದೋರಿ ಭಿಕ್ಷಕ್ಕೆ ಹೋದಲ್ಲಿ ಭಾಂಡವ ತೊಳೆದ ದ್ರವ್ಯ ಪದಾರ್ಥವಂ ತರಲೊಡನೆ ಹರುಷದಿಂದ ಲಿಂಗಾರ್ಪಿತವ ಮಾಡಿ ಸಾಕೆಂದ ಬಳಿಕ ಮತ್ತೊಂದು ಗೃಹವನಾಸೆಮಾಡಿ ಹೋದೆನಾದರೆ ಎನ್ನ ವೈರಾಗ್ಯಕ್ಕದೇ ಕುಂದು ನೋಡಾ. ಅದೇನು ಕಾರಣವೆಂದೊಡೆ ಗಂಡನಿಕ್ಕಿದ ಪಡಿಯುವನುಂಡು ಮನೆಯ ಗಂಡನೆಂದಿಪ್ಪವಳು ಪತಿವ್ರತೆಯಲ್ಲದೆ, ಗಂಡನಿಕ್ಕಿದ ಪಡಿಯನೊಲ್ಲದೆ ಒಳ್ಳೆ ಕೂಳಿಗಾಸೆ ಮಾಡಿ ನೆರೆಮನೆಗೆ ಹೋಗುವ ಜಲ್ಲಾಳಗಿತ್ತಿಗೆ ಪತಿಭಕ್ತಿಯಳವಡವುದೆ ಅಯ್ಯಾ?



ಲಿಂಗಾಣತಿಯಿಂ ಬಂದ ಪದಾರ್ಥವ ಪಟಿಗೆ ಉಂಡುಕೊಂಡಂತೆಮಾಡಿ ಸಾಕೆಂದು ನೂಂಕಿ ಅಂಗದಿಚ್ಛೆಗೆ ಹೇದು ಮತ್ತೊಂದು ಮನೆಯ ಆಸೆ ಮಾಡಿ ಹೋಗುವ ಜೀವಗಳ್ಳರಿಗೆ ಶರಣಸತಿ ಲಿಂಗಪತಿ ಭಾವ ಅಳವಡುವುದೆ ಅಯ್ಯ? ಭಕ್ತಿ, ಜ್ಞಾನ, ವೈರಾಗ್ಯ ವಿರಹಿತನಾಗಿ ನಿಜಮುಕ್ತಿಯ ನರಸುವ ಅಣ್ಣಗಳ ಇರವು ಬಂಜೆ ಮಕ್ಕಳ ಬಯಸಿ ಬಟ್ಟೆಯ ಬೊಮ್ಮಂಗೆ ಹರಿಸಿಕೊಂಡ ತೆರನಾಯಿತಯ್ಯ ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

೫೪ ಸದಮಲ ಭಕ್ತಿಯಿಂದ ಭಕ್ತ ನಮಸ್ಕರಿಸಿ, ಎನ್ನ ಕೈವಿಡಿದು ತನ್ನ ಮಠಕ್ಕೆ ಕರೆದೊಯ್ದು, ತಾನು ಪಟ್ಟ ಗದ್ದುಗೆಯ ಮೇಲೆ ಕುಳಿತು ಚಿನ್ನದ ಪರಿಯಾಣದಲ್ಲಿ ಪಂಚಾಮೃತವ ನುಣಾತ ಎನ್ನ ಕದವಿನ ಮೂಲೆಯಲ್ಲಿ ಕುಳ್ಳಿರಿಸಿ, ಒಡದೋಡಿನಲ್ಲಿ ಅಂಬಲಿಯ ನೆರೆಯಲು, ಎಲೆದೇವ ಎನ್ನ ಮನದಲ್ಲಿ ನೊಂದೆನಾದರೆ ನಾನು ಕರ ಪಾತ್ರನಲ್ಲ, ಅಪಾತ್ರನು. ಅದೇನು ಕಾರಣವೆಂದೊಡೆ, ನಾನು ಮೂರಾರು ತಿಂಗಳು ಜನನಿಯ ಜಠರವೆಂಬ ಸೆರೆಮನೆಯಲ್ಲಿ ಸಿಕ್ಕಿರುವಾಗ ಎನಗೆ ಸದಾ ಊಣಲಿಟ್ಟು ಸಲಹಿದವ ನೀನೋ ಅವನೋ? ಆ ಸೆರೆಮನೆಯಿಂದ ಎನ್ನ ಕೈವಿಡಿದು ಕರತಂದು ಶಿವಲಾಂಛನವಂ ಕರುಣದಿಂದಿತ್ತು, ಮರ್ತ್ಯಲೋಕದಲ್ಲಿ ಎನ್ನ ಪೂಜ್ಯನ ಮಾಡಿದಾತ ನೀನೋ ಅವನೋ? ಇದು ಕಾರಣ ಇಕ್ಕುವಾತ ಅವನೆಂಬುದು ನನ್ನಲ್ಲಿಲ್ಲ. ಎಚವವನಿದ್ದಂತೆ ಅಂಬಿಗೆ ಮುನಿವರೆ ಅಯ್ಯ? ನಾನು ಉಂಡುಟ್ಟು ಸುಖಿಯಾದರೆ ನಿನ್ನ ಹಾಡುವೆನು. ನಾನು ಹಸಿದು ನೊಂದೆನಾದರೆ ನಿನ್ನ ಬಯ್ವೆನಲ್ಲದೆ ಮಾನವರ ಹಂಗು ಎನಗೇತಕಯ್ಯಾ ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

ಪರಿಯಾಣ = ಬಟ್ಟಲು; ಓಡು = ಮಣ್ಣಿನ ಮುಚ್ಚಳ; ಕರ = ಹೆಚ್ಚು ಪಾತ್ರ = ಯೋಗ್ಯ; ಜಠರ = ಗರ್ಭ;

೫೫. ಕರಣ ಹಸಿಗೆಯ ನೋಡುವಣ್ಣಗಳ ಕಾಲ ಹಿಡಿದೆಳೆಯಿತ್ತು ಮಾಯೆ. ವಿಶ್ವಾರ್ಪಣವ ನೋಡುವಣ್ಣಗಳ ಮೀಸೆಯ ಹಿಡಿದುಯ್ಯಾ ಮಾಯೆ. ಆತ್ಮಸ್ವರೂಪವ ನರಿವಣ್ಣಗಳ ತನಗಾಳುಲೆಯ ನಾಡಿಸಿತ್ತು ಮಾಯೆ. ಶಿವಜ್ಞಾನ ಮಾಡಿಕೊಂಡು, ಶಿವಜ್ಞಾನಕ್ಕೆ ಕೀಳು ಮಾಡಿತ್ತು ಮಾಯೆ. ಶಿವಜ್ಞಾನವ ಮಾಡಿಹೆನೆಂಬಣ್ಣಗಳ ಕೀಳು ಮಾಡಿತ್ತು ಮಾಯೆ. ತತ್ವಸ್ವರೂ

ಪವ ನರಿವಣ್ಣಗಳ ತನಗೆ ಮುದ್ದು ಮಾಡಿಸಿ, ಮೋಹಿಸಿ ಬತ್ತಲೆ ನಿಲಿಸಿತ್ತು ಮಾಯೆ. ಮಂತ್ರ ಗೋಪ್ಯವ ನೋಡುವಣ್ಣಗಳ ಕುಟಿಲವಣ್ಣಗಳ ಕುಮಂತ್ರಕ್ಕೆ ಸಿಲ್ಕಿಸಿ ಕಾಡಿತ್ತು ಮಾಯೆ. ಜಪಧ್ಯಾನ ಮಾಡುವಣ್ಣಗಳ ಬಕಧ್ಯಾನವ ಮಾಡಿಸಿತ್ತು ಮಾಯೆ. ವಚನವ ನೋಡುವಣ್ಣಗಳ ರಚನೆಗೆ ನಿಲಿಸಿತ್ತು ಮಾಯೆ ಇದು ಕಾರಣ ಇಚ್ಛೆಯ ನುಡಿದು ಕುಚಿತ್ತನಾಗಿ ಬರುವ ವಿರಕ್ತನಂತೆ ಹೊಟ್ಟೆಯ ಹೊರೆವ, ಹೊನ್ನ, ಹೆಣ್ಣು, ಮಣ್ಣು ದೊರೆವಲ್ಲಿ ಹಿಡಿದಿಹ ಕರ್ಮ ಎಂಬ ಕಾಳ ಮೂಳರಿಗೆಲ್ಲಿಯದೋ ವಿರಕ್ತಿಕೆ ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

೫೬. ಮಾಯೆಯ ಕಾಲು ಬಾಯಿಗೆ ಸಿಕ್ಕಿ, ತೊತ್ತಳ ದುಳಿಯಿಸಿಕೊಂಬ ಮರುಳ ಮಾನವರ ಬಗೆಯ ನೋಡಯ್ಯ ಮನವೇ. ಗಂಡು ದೊತ್ತಿನಂತೆ ಮಂಡೆಯ ಬೋಳಿಸಿಕೊಂಡು, ತೆಂಗು ಪೊಟ್ಟಾಡುವಂತೆ, ಕರಸ್ಥಲವಲ್ಲಿ ಲಿಂಗವ ಹಿಡಿದುಕೊಂಡು, ಶವಳಿಕಾರನಂತೆ ಮನವ ಕದ್ದು ಮಾತನಾಡುತ್ತ, ಮನೆ ಮನೆಗೆ ಹೋಗಿ ಹೊಟ್ಟೆಯ ಕಿಚ್ಚಿಗೆ ಸಟೆಯ ಶಾಸ್ತ್ರವ ಹೇಳುವ ಡೊಂಬರಂತೆ, ಪುಸ್ತಕವ ಹಿಡಿದುಕೊಂಡು, ಪುರಜನವ ಮೆಚ್ಚಿಸುವ ಖೋಡಿಗರಂತೆ, ವೇಷವಂ ಹಲ್ಲಣಿಸಿಕೊಂಡು, ವಿರಕ್ತನಂತೆ ದೇಶ ಮಧ್ಯದಲ್ಲಿ ಸುಳಿದು, ವಿರಕ್ತರ ಕಂಡಲ್ಲಿ ಸಟೆಯ ಭಕ್ತಿಯ ಹೊಕ್ಕು ಹೊಸಕದ ಉಪಚಾರವಂ ನುಡಿದು, ಮಾಡಿ ನೀಡುವ ಭಕ್ತರ ಮನೆಗೆ ಭಿಕ್ಷ ಮುಖದಿಂದ ಹೋಗಿ, ನಚ್ಚು ಮಚ್ಚು ನುಡಿದು ಉಂಡು ಕೊಂಡು, ಕಾಲವಂ ನೂಂಕಿ, ಮನೋವಿಕಾರದಿಂದ ಪರಧನ, ಪರಸ್ತ್ರೀಯರಿಗಳುಪಿ, ಭವಿಭಕ್ತರೆನ್ನದೆ ಉಂಡುಟ್ಟಾಡಿ, ತೀರ್ಥ ಪ್ರಸಾದವೆಂಬ ಅಳುಕಿಲ್ಲದೆ ಚಲ್ಲಾಡಿ, ನಡೆಯಲ್ಲದ ನಡೆಯ ನಡೆದು, ನುಡಿಯಲ್ಲದ ನುಡಿಯ ನುಡಿದು, ತನ್ನ ಕಪಟವೇಷವಂ ಅರಿಯದೆ ಶಿವಶರಣ ಮೇಲೆ ಮಿಥ್ಯೆಯಂ ಮಾಡಿ, ಭೇದ ಹಗೆಗಳಂ ಸಾಧಿಸಿ, ಹಸಿಯ ಮಾದಿಗರಂತೆ ಹುಸಿಯ ನುಡಿದು, ಆ ಶರಣರ ಮೇಲೆ ಒಂದೊಂದ ನುಡಿದು ಗಳಹುತಿಪ್ಪ ನರಕಿ ಜೀವಿಗಳಿಗೆ ಮಾಡಿದ ಪರಿಭವದ ರಾಟಳ ಗಿಕ್ಕುಗಿರಿಕೆಂಮ ತಿರುಗುತ್ತಿದೆ ಅಯ್ಯಾ ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

ಪೊಟ್ಟು = ಪೊಳ್ಳು; ಶವಳಿ = ಚೇಷ್ಟೆ; ಖೋಡಿಗ = ಮೂರ್ಖ; ಹಲ್ಲಣಿಸು = ಹೊತ್ತುಕೊಳ್ಳು; ಹೊಕ್ಕು = ನೇಯ್ಗೆಯ ಅಡ್ಡದಾರ; ಹೊಸಕ = ಎರಡು ಎಳೆಗಳನ್ನು ಕೂಡಿಸುವದು; ಅಳುಕು = ಅಂಜಿಕೆ; ಗಳಹು = ಮಾತಾಡು; ಪರಿಭವ = ಅಪಮಾನ; ರಾಟಳ = ಚಕ್ರ;



೫೭. ಕಾಮಧೇನುವಿನಲ್ಲಿ ಕಲ್ಪಿಸಿದ ಸವಿ ಇಪ್ಪದಲ್ಲದೆ, ಮರ್ತ್ಯದ ಪಶುವಿನಲ್ಲಿ ಉಂಟೆ ಅಯ್ಯ? ಮಹಾಶೇಷನಲ್ಲಿ ಮಾಣಿಕ್ಯ ಪ್ರಭಾವಿಸುತಿಪ್ಪದಲ್ಲದೆ, ಕೆರೆಯೊಳಗಣ ಒಳ್ಳೆಯಲ್ಲಿ ಉಂಟೆ ಅಯ್ಯ? ವಾರಣದ ಕುಂಭಸ್ಥಳದಲ್ಲಿ ಮೌಕ್ತಿಕ ಬೆಳಗುತಿಪ್ಪುದಲ್ಲದೆ, ಊರ ಹಂದಿಯಲ್ಲಿ ಉಂಟೆ ಅಯ್ಯ? ಶರಣರ ಮನೋಮಧ್ಯದಲ್ಲಿ ಶಿವನು ಮೂರ್ತಿಗೊಂಡು, ಆ ಶರಣರ ಜಿಹ್ವೆಯ ಕೊನೆಯ ಮೊನೆಯ ಮೇಲೆ ವಚನವೆಂಬ ಪರಮಾಮೃತವ ಕರೆದು ಕೆಲ ಬಲದ ಗಣಂಗಳಿಗೆ ಸಪಿಯೋರಿ, ಆ ಶರಣರಲ್ಲಿ ಪರಿಪೂರ್ಣವಾಗಿಪ್ಪನಲ್ಲದೆ, ದ್ವೈತಾದ್ವೈತಿಗಳೆಂಬ ಶುನಕ, ಸೂಕರರಲ್ಲಿ ಉಂಟೆ ಅಯ್ಯ ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

ಪ್ರಭಾವಿಸು = ಹೊಳೆಯು ; ಒಳ್ಳೆ = ಕೆರೆಹಾವು; ವಾರಣ = ಆನೆ;

೫೮. ಕೋಗಿಲೆ ಸ್ವರಗೆಯ್ಯಿತೆಂದು ಕಾಗೆ ಆ ದಿಕ್ಕಿಗಿದಿರಾಗಿ ಕುಳಿತು, ಕರ್ರೆಂದು ಕಟಕಿಯನಾಡಿದರೆ, ಆ ಕೋಗಿಲೆಗಾದ ಕೊರತೆ ಏನಯ್ಯ? ಪ್ರಕಾಶವುಳ್ಳವನಲ್ಲಿ ಕತ್ತಲೆ ಮೆಯ್ಯಪನೆಂದು, ಹಗಲು ಕಣ್ಣುಕಾಣದ ಗೂಗೆ ಕೆಟ್ಟ ನುಡಿದರೆ ಆ ಸೂರ್ಯನಿಗಾದ ಕೊರತೆ ಏನಯ್ಯ? ಕನ್ನಡಿಗೆ ಮೂಗಿಲ್ಲವೆಂದು ಮೂಕೊರೆಯ ಹಳಿದರೆ, ಆ ಕನ್ನಡಿಗಾದ ಕೊರತೆ ಏನಯ್ಯ? ದ್ವೈತಾದ್ವೈತವ ನೂಂಕಿ, ಅಂಗಲಿಂಗದ ಹೊಲಬನರಿದು ಸ್ವಯಲಿಂಗಿಯಾದ ಶರಣನ ಅಂಗವಿಕಾರದ ಪಂಗುಳಮಾನವರು ಜರಿದು ಝುಂಕಿಸಿ ನುಡಿದರೆ ಅಂಗಲಿಂಗಾನುಭಾವಿಗಾದ ಕೊರತೆ ಏನಯ್ಯ ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ?

ಕಟಕಿ = ಕೆಟ್ಟಶಬ್ದ; ಮೂಕೊರೆಯ = ಮೂಗು ಹೋದವ; ಪಂಗುಳ = ಹೆಳವ; ಝುಂಕಿಸು = ಸಿಟ್ಟುಮಾಡು;

೫೯. ಶಿವಶರಣಂಗೆ ನಿಜೈಕ್ಯ ಪದಂಗಳು ದೊರೆಕೊಂಬ ತೆರನ, ಶ್ರುತ ಗುರು ಸ್ವಾನುಭಾವದಿಂದ ನುಡಿವುತಿರ್ಪೆ ಕೇಳಿರಯ್ಯ. ಜನನ ಮರಣ ಕ್ಷಂಜಿ ತಾನಾರೆಂಬುದಂ ಸ್ವಾನುಭಾವದಿಂದ ನೋಡಿ, ಎಲ್ಲಿಂದೊಗೆದೆನೆಂಬುದಂ ಬಗೆಗೊಂಡು, ಅರುಹು ತಲೆದೋರಿ, ಪುಣ್ಯಪಾಪಕ್ಕೆ ಬೀಜಾಂಕುರಮಪ್ಪ ಮಲತ್ರಯಂಗಳಿಗೆ ತಲೆಕೊಡದೆ, ಭೋಗವಂ ನೀಗಿ, ಭಕ್ತಿಯ ಕಳೆದುಳಿದು, ಬಂಧುವರ್ಗವಂ ಭಂಗಿಸಿ, ಉಪಾಧಿಕೆಯಂ

ಉರುಹಿ, ಒಡಲಾಸೆಯಂ ತಲೆಯೊಡೆಯನಿಕ್ಕಿ, ಅಹಂಕಾರಂಗಳಳಿದು, ಮಮಕಾರಂಗಳಂ ಮುಂದುಗೆಡಿಸಿ ಲೋಕದ ನಚ್ಚು ಮಚ್ಚು ಕಿಚ್ಚು ಗುತ್ತಿ, ಜ್ಞಾನಕ್ರಿಯಂಗಳಲ್ಲಿ ದೃಢವ್ರತನಾಗಿ, ಕರಿಗೊಂಡು, ಆಸನದಲ್ಲಿ ಮರಹ ಮುಗ್ಗಿ ಮನತನುವನಪ್ಪಿದ ಸರ್ವ ಕರಣಂಗಳಂ ಚರಲಿಂಗ ಮುಖವ ಮಾಡಿ, ಆತ್ಮ ವಿದ್ಯೆ ಲಿಂಗದಲ್ಲಿ ಮನಸಂದು ಪಂಚಪ್ರಸಾದಾತ್ಮಕವಾದ ಘನಲಿಂಗದ ಬೆಳಗ ಪಿಂಡಾಂಡದಲ್ಲಿ ಜ್ಞಾನ ದೃಷ್ಟಿನಿಂದ ಪರಿಪೂರ್ಣವಾಗಿ ಕಂಡು, ಪೆಣ್ದುಂಬಿ ನಾದವೇ ಮೊದಲು ಸಿಂಹನಾದವೇ ಕಡೆಯಾದ ಆರೆರಡು ಪ್ರಕಾರದ ನಾದಂಗಳಂ ಕೇಳಿ, ಹರುಷಂ ಹರಿವರಿಗೊಂಡು, ಎನಗೆ ಶಿವತತ್ವ ಸಾಧ್ಯವಾಯಿತ್ತು. ಪರಶಿವನಲ್ಲಿ ಒಡಗೂಡಿ ಪರಬ್ರಹ್ಮವಾದೆನೆಂದು ಅಹಂಕರಿಸಿ ಕ್ರಿಯೆಯ ಬಿಟ್ಟು ಗಂಭೀರ ಧ್ಯಾನದೋಳಪ್ಪ ಶರಣಂಗೆ ಮೂರೊಂದು ವಿಧದ ಪದಂಗಳು ಒಪ್ಪವಲ್ಲದೆ ಶಿವನಲ್ಲಿ ನಿಜೈಕ್ಯವಿಲ್ಲ. ಅದೇನು ಕಾರಣವೆಂದೊಡೆ ಷಟ್‌ಸ್ಥಲ ಬ್ರಹ್ಮಿ ಎನಿಸಿಕೊಂಡು, ಆರು ಸ್ಥಲದ ವಿಚಾರವಿಡಿದು, ಮೂರುಸ್ಥಲದಲ್ಲಿ ಅವಧಾನಿಯಾಗಿ ಎರಡೊಂದು ಸ್ಥಲ ಒಂದಾದ ಸ್ಥಲದಲ್ಲಿ ಶರಣಲಿಂಗನೆಂಬುಭಯವಳಿದು, ನೂರೊಂದು ಸ್ಥಲದೊಳಗೆ ಪ್ರಭಾವಿಸಿ ಪರಿಪೂರ್ಣವಾಗಿ, ಸಿದ್ಧ ಪ್ರಸಾದವೆಂಬ ನಿಷ್ಕಲ ಬ್ರಹ್ಮದಲ್ಲಿ ಉರಿ ಕರ್ಪೂರದಂತೆ ಬೇಗುದೋರಿ, ಶುದ್ಧ ಪ್ರಸಾದವ ನುಂಗಂಗೊಂಡು ನಿರಂಜನ ಪ್ರಸಾದವ ನೊಡಗೂಡಿದ ಬಸವರಾಜ ದೇವರು ಉತ್ತುಂಗ ಲಿಂಗದಲ್ಲಿ ಐಕ್ಯವಾಗುವನ್ನಬರ ಶಿವಲಿಂಗ ಪೂಜೆಯಂ ಬಿಟ್ಟನೆ? ಜಪತಪ ನಿತ್ಯ ನೇಮಂಗಳಂ ಬಿಟ್ಟನೆ? ಲಿಂಗಕ್ಕೆ ಕೊಟ್ಟು ಕೊಂಬ ಅರ್ಪಿತ ಅವಧಾನಂಗಳಂ ಬಿಟ್ಟನೇ? ತೀರ್ಥ ಪ್ರಸಾದದಲ್ಲಿ ಒಯ್ಯಾರಮಂ ಬಿಟ್ಟನೆ? ಮಾಡಿ ನೀಡುವ ದಾಸೋಹಮಂ ಬಿಟ್ಟನೆ? ಗುರುಲಿಂಗ ಜಂಗಮವ ಕಂಡು ಹೊಡೆಗೆಡುವುದಂ ಬಿಟ್ಟನೆ? ಬಿಜ್ಜಳನ ಓಲಗದ ಸಭಾ ಮಧ್ಯಕ್ಕೆ ಹೋಗಿ ತನ್ನ ದಿವ್ಯ ಶ್ರೀಪಾದ ಪದ್ಮಂಗಳಂ ಬಿಜ್ಜಳಂಗೆ ತೋರಿ ಅವನ ಕರ್ಮಂಗಳಂ ಸುಟ್ಟು, ಅವನ ರಕ್ಷಿಸುದಂ ಬಿಟ್ಟನೆ? ಇಂತಿವೆಲ್ಲವು ಕ್ರಿಯೆಯೊಳಗು- ||ಗ್ರಂಥಸಾಕ್ಷಿ|| ಕ್ರಿಯಾದ್ವೈತ ನ ಕರ್ತವ್ಯಂ । ಭಾವಾದ್ವೈತ ಸಮಾಚರೇತ್ ॥ ಕ್ರಿಯಾ ನಿರ್ವಹತೆಯಸ್ತು । ಭಾವ ಶುದ್ಧಂತು ಶಾಂಕರಿ ॥ ಇಂತೆಂದುದಾಗಿ, ಇದು ಕಾರಣ ಐಕ್ಯವಾಗುವನ್ನಬರ ಕ್ರಿಯೊಳಕೊಂಡ ಶರಣಂಗೆ ನಿಜ ಮುಕ್ತಿಯಲ್ಲದೆ ಐಕ್ಯವಾಗುವದಕ್ಕೆ ಮುನ್ನವೇ ಕ್ರಿಯಳಿದ ಶರಣಂಗೇನು ಸಾಯುಜ್ಯ ಪದಸ್ತ



ನಷ್ಟನಲ್ಲದೆ, ಹರನಲ್ಲಿ ಸಮರಸವಿಲ್ಲನೆಂದೆನಯ್ಯಾ ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

ಕೊಡಹು = ಚೆದುರಿಸು, ಅಲ್ಲಾಡಿಸು; ಕರಿಗೊಳ್ಳು = ಸುಡು; ಮುಗ್ಗು = ಕಳೆಗುಂದು, ನಾಶವಾಗು; ಹರಿವರಿಗೊಳ್ಳು = ಪಸರಿಸು; ಉತ್ತುಂಗ = ಎತ್ತರವಾದ ಮಹತ್ತಾದ; ಹೊಡೆಗೆಡು = ನಮಸ್ಕಾರ ಮಾಡು.

೬೦. ಆಕಾಶದಿಂದಲಾಯಿತ್ತು ನಿರಾಕಾರ. ಆ ನಿರಾಕಾರ ಚಿದಾಕಾಶವ ಮೇಲೆ ನಿಂದಿತ್ತು. ಆ ನಿರಾಕಾರದಿಂದಲಾಯಿತ್ತು ಭಾವ ಆ ಭಾವ ಕರಣವ ಮೇಲೆ ನಿಂದಿತ್ತು. ಆ ಭಾವದಿಂದಲಾಯಿತ್ತು ಮನ. ಆ ಮನ ಸೂಕ್ಷ್ಮದ ಮೇಲೆ ನಿಂದಿತ್ತು. ಆ ಮನದಿಂದಲಾಯಿತ್ತು ತನು ಆ ತನು ಸ್ಥೂಲವ ಮೇಲೆ ನಿಂದಿತ್ತು. ಆ ತನು ಮನವ ಕೂಡಿದಲ್ಲಿಯೆ ತನು ನಷ್ಟವಾಯಿತ್ತು. ಮನ ಭಾವವ ಕೂಡಿದಲ್ಲಿಯೇ ಮನ ನಷ್ಟವಾಯಿತ್ತು. ಭಾವ ನಿರಾಕಾರವ ಕೂಡಿದಲ್ಲಿಯೇ ಭಾವ ನಷ್ಟವಾಯಿತ್ತು. ಇಂತೀ ತ್ರಿವಿಧ ನಷ್ಟವಾದಲ್ಲಿಯೇ ಶರಣನ ಹುಟ್ಟು ನಷ್ಟವಾಯಿತ್ತಯ್ಯಾ ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

ಕರಣ = ಇಂದ್ರಿಯ;